ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಸಂಪುಟ 5 ಸಂಚಿಕೆ 9


ರೂ. 5/-


ಫೆಬ್ರವರಿ 27, 2011

ಪುಟ 16

ಕನ್ನಡ ವಾರಪತ್ರಿಕೆ

Blog :janashakthi.wordpress.com
e-mail : js_weekly@yahoo.com






ಯಾರಿಗಾಗಿದೆ ಈ ಸರ್ಕಾರ ?

ಬಳ್ಳಾರಿ : ಸಿ.ಎಂ. ಪರಿಹಾರ ನಿಧಿಗೆ ಶಾಸಕನ ಕನ್ನ !





ಈಜಿಪ್ಟ್ ಜನತೆಗೆ ಟಾಟಾ 'ಮುಬಾರಕ್'

ಅನರ್ಹತೆ ಶಾಸಕರದ್ದೋ ಸರ್ಕಾರದ್ದೋ ?



ತುಮುಲ-ತಳಮಳಗಳ ನಡುವೆ ದಕ್ಷಿಣ ಆಫ್ರಿಕಾ



ಬಜೆಟ್‌ನಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಲು ವಿದ್ಯಾರ್ಥಿಗಳ ಆಗ್ರಹ


ನೂತನ ಕಾರ್ಯಾಲಯವನ್ನು ಸಜ್ಜುಗೊಳಿಸಲು

ಜನಶಕ್ತಿಯೊಂದಿಗೆ ಕೈ ಜೋಡಿಸಿ....

'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಓದುಗರು ಮತ್ತು ಹಿತೈಷಿಗಳಲ್ಲಿ ಒಂದು ವಿನಮ್ರ ಮನವಿ ಇದು. ಕರ್ನಾಟಕದ ಜನಪರ ಚಳುವಳಿಯ ಮುಖಂಡರು ಕಾರ್ಯ ಕರ್ತರು, ಹಿತೈಷಿಗಳಿಗೆ 'ಜನಶಕ್ತಿ'ಯ ಕುರಿತು ಬಹಳಷ್ಟೇನು ವಿವರಿಸ ಬೇಕಾದ ಅಗತ್ಯವಿಲ್ಲ.

ಮುಖ್ಯವಾಹಿನಿಯ ಬಹಳಷ್ಟು ಪತ್ರಿಕೆಗಳು, ದೂರದರ್ಶನ ಚಾನಲ್ಲುಗಳು ಮನುಷ್ಯತ್ವವನ್ನು ಮರೆತು ಹಣವಂತ ವರ್ಗದ ಬೆನ್ನು ಬಿದ್ದಿವೆ. ಜಾಗತೀಕರಣ ಯುಗದ ಇಂದಿನ ಮಾಯಾ ಬಜಾರಿನಲ್ಲಿ 'ಬಂಡವಾಳ' ಎಂಬ ಈ ನೆಲದ ರಸ ಹೀರುವ ದೈತ್ಯ ವೃಕ್ಷದ ಕೊಂಬೆಯ ಮೇಲೆ ಹುಟ್ಟಿಕೊಂಡಿರುವ ಬಂದಳಿಕೆ ಗಳಂತಾಗಿರುವ ಇವು ಕುರುಡು ಕಾಂಚಣದ ಮೋಹಪಾಶಕ್ಕೆ ಸಿಲುಕಿವೆ. ಈ ಪತ್ರಿಕೆ ಚಾನಲ್ಲುಗಳಿಗೆ, ಕೊಲೆಪಾತಕ ಮನಸುಗಳ ಸೃಷ್ಟಿಯ ಕಾರ್ಯಾಗಾರದಂತಾಗಿರುವ, ಹಾಗೂ ಭ್ರಮೆ, ಹುಸಿ ಕನಸುಗಳ ಮಾರಾಟವೇ ಗುರಿಯಾಗಿರುವ ಸಿನಿಮಾ ಕ್ಷೇತ್ರದ ನಾಯಕ ನಾಯಕಿಯರ ಬಿಂಕ ಬಿನ್ನಾಣಗಳು ಆದ್ಯತೆಯಾಗಿವೆ. ಬಿಲಿಯನ್, ಟ್ರಿಲಿಯನ್ ಡಾಲರುಗಳ ಮಾಲಿಕರ ಜೂಜುಕಟ್ಟೆಗಳಲ್ಲಿ ಹರಾಜಿಗೆ ನಿಂತು ಕೋಟಿ ಕೋಟಿಗಳಿಗೆ ಬಿಕರಿಯಾಗುತ್ತಿರುವ ಕ್ರಿಕೆಟ್ ಆಟಗಾರರ ಆಟವೆಂಬ ವ್ಯಾಪಾರ, ಮೋಜುಗಳು ಮುಖ್ಯವಾಗಿವೆ. ಕೊಳೆತು ನಾರುವ ಹಳಸಲು ಸರಕು ಸಂಸ್ಕೃತಿಯನ್ನು ಸಾರುವ ಬಡಕಲು ದೇಹದ 'ವಿಶ್ವ ಸುಂದರಿ'ಯವರ ವೈಯಾರಗಳು, ಫ್ಯಾಷನ್ ಶೋ ಥಳುಕು ಬಳುಕುಗಳೇ ಎಲ್ಲಕ್ಕಿಂತ ದೊಡ್ಡವಾಗಿವೆ. ಭಾರತದ ಎಷ್ಟು ಜನ ವಿಶ್ವದ ಹತ್ತು ಭಾರಿ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದರು ಎಂಬುದು ಸಂಭ್ರಮದ ಸುದ್ದಿಯಾಗಿದೆ. ಬಂಡವಾಳಿಗರ ಬಂಡವಾಳವನ್ನು ಬೆಳೆಸಲು ದುಡಿದು ದುಡಿದು ಬೆಂಡಾಗುತ್ತಿರುವ ಕಾರ್ಮಿಕರ, ದುಡಿಮೆಗಾರರ ಬದುಕಿನ ಸಂಕಟಗಳು ನಿಟ್ಟುಸಿರುಗಳಿಗೆ ಇಲ್ಲಿ ಬಹುತೇಕ ಜಾಗವೇ ಇಲ್ಲವಾಗಿದೆ. ಆಳುವ ವರ್ಗದ ಸುಲಿಗೆಕೋರರ ಇಕ್ಕಳದಲ್ಲಿ ಸಿಲುಕಿ ಬಸವಳಿದ ಕೂಲಿಕಾರರು, ಬಡ ರೈತರ ಬದುಕಿನ ನಾನಾ ಮುಖಗಳನ್ನು ತೆರೆದು ತೋರಿಸುವುದನ್ನು ಈ ಉಳ್ಳವರ ಮಾಧ್ಯಮಗಳಲ್ಲಿ ನಿರೀಕ್ಷಿಸಲು ಸಾಧ್ಯವೇ ಇಲ್ಲ ಎಂಬಂತಾಗಿದೆ.

ಹಿಮಾಲಯ ಸದೃಶ್ಯವಾಗಿ ಹಬ್ಬಿರುವ ಆಳುವ ವರ್ಗಗಳ ವೈವಿಧ್ಯಮಯ ಶೋಷಣೆಯ ಸ್ವರೂಪವನ್ನು ಹಾಗೂ ಅದರ ಅಗಾಧತೆಯನ್ನು ಅಳೆದು ಪುಟ



ಪುಟಗಳಲ್ಲಿ ಅನಾವರಣಗೊಳಿಸ ಬೇಕು, ದುಡಿಯುವ ವರ್ಗದ ದಿಟ್ಟ ವರ್ಗ ಸಂಘರ್ಷ, ಹೋರಾಟಗಳನ್ನು ಪ್ರತಿಧ್ವನಿಸುವ, ಪ್ರತಿಬಿಂಬಿಸುವ ದುಡಿಯುವ ವರ್ಗದ ಕೈಗನ್ನಡಿಯಾಗ ಬೇಕು ಎಂಬ ಬಯಕೆ ಪತ್ರಿಕೆಯದು. ಜಾಗತೀಕರಣ, ಉದಾರೀಕರಣಗಳು ಹುಟ್ಟು ಹಾಕಿರುವ ಭೀಕರ ಬಿರುಗಾಳಿಗೆ ಸಿಲುಕಿ ತಮ್ಮ ಅಮೂಲ್ಯ ಬದುಕನ್ನೆ ಕೊನೆಗಾಣಿಸಿಕೊಳ್ಳುತ್ತಿರುವ ರೈತಾಪಿ ವರ್ಗದ ದು:ಖ ದುಮ್ಮಾನಗಳಿಗೆ ದನಿಯಾಗುವ ಆಶಯ ಜನಶಕ್ತಿಯದು. ಅಸ್ಪೃಶ್ಯತೆ, ಜಾತಿ ದೌರ್ಜನ್ಯಗಳ ಹಾಗೂ ಸಾಮಾಜಿಕ ಅಸಮಾನತೆಯೆಂಬ ಅಪಮಾನಕ್ಕೆ ತುತ್ತಾದ ಅವಕಾಶ ವಂಚಿತ ದಲಿತರು, ಮಹಿಳೆಯರ ಹೋರಾಟದ ಧಿಮಂತ ಕತನಗಳಗೆ ಮುನ್ನುಡಿಯಾಗುವ ಆಕಾಂಕ್ಷೆ ಜನಶಕ್ತಿಯದು.

ಈಗ ಇರುವ ಅತ್ಯಂತ ಸೀಮಿತವಾದ ಮಾನವ ಸಂಪನ್ಮೂಲ ಹಾಗೂ ಆರ್ಥಿಕ ಸಂಪನ್ಮೂಲಗಳೊಂದಿಗೆ ತನಗೆ ಸಾಧ್ಯವಾದ ಮಟ್ಟಿಗೆ ಈ ಆಶಯಗಳಿಗಾಗಿ ಜನ ಶಕ್ತಿಯು ಕೆಲಸ ಮಾಡುತ್ತಿದೆ. ಆದರೆ ಈಗಿನ ಕೆಲಸ ಏನೇನು ಸಾಲದು ಎಂಬ ವಸ್ತುನಿಷ್ಟ ತಿಳುವಳಿಕೆ ಪತ್ರಿಕೆಯದು. ಮಾಡಬೇಕಾದ ಕೆಲಸ ಅಗಾಧವಾಗಿದೆ.

ಈ ನಿಟ್ಟಿನಲ್ಲಿ ಈಗ ಕೆಲಸವನ್ನು ಆರಂಭಿಸಲೇ ಬೇಕಿದೆ.

ತಮಗೆಲ್ಲಾ ಈಗಾಗಲೇ ತಿಳಿದಿದೆ. ಜನಶಕ್ತಿಯು ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಇಎಂಎಸ್ ಭವನ ಎಂಬ ನೂತನ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ನೂತನವಾದ ಕಟ್ಟಡದ ಕಾರ್ಯಾಲಯವನ್ನು ಪತ್ರಿಕೆಯ ಇಂದಿನ ಅಗತ್ಯಗಳಿಗೆ ಅವಶ್ಯಕವಾದ ಸಾಧನ, ಸಾಮಾಗ್ರಿಗಳು, ಉಪಕರಣಗಳು ಹಾಗೂ ಮಾನವ ಸಂಪನ್ಮೂಲಗಳೊಂದಿಗೆ ಸಜ್ಜುಗೊಳಿಸ ಬೇಕಿದೆ. ಇದಾಗದೇ ಮೇಲೆ ಹೇಳಲಾದ ಯಾವ ಆಶಯವು ಈಡೇರುವುದು ಸಾಧ್ಯವಿಲ್ಲ.

ಜನಶಕ್ತಿಯ ಕನಿಷ್ಟ ಅಗತ್ಯಗಳನ್ನು ಹೊಂದಿರುವ ವ್ಯವಸ್ಥಿತ, ಸುಸಜ್ಜಿತ, ಸ್ವತಂತ್ರ ಕಾರ್ಯಾಲಯವನ್ನು ರೂಪಿಸುವ ಪ್ರಶ್ನೆಯು ನೇರವಾಗಿ ಹಣಕಾಸಿಗೆ ಸಂಬಂಧಿಸಿದ್ದಾಗಿದೆ.

ಬಂಡವಾಳಶಾಹಿ ಪತ್ರಿಕೆ, ಮಾಧ್ಯಮಗಳಂತೆ ಅತಿರಂಜಿತ ಸುಳ್ಳುಗಳು, ಅರ್ಧ ಸತ್ಯಗಳು, ಅಶ್ಲೀಲತೆ, ವಿಕೃತ ಕ್ರೈಮ್ ವರದಿಗಳು, ನೀತಿಗೆಟ್ಟ ಗಾಳಿಸುದ್ದಿ, ಗಾಸಿಪ್ಪುಗಳ ಬೆನ್ನು ಹತ್ತದ ಜನಶಕ್ತಿಯಂತಹ ಪತ್ರಿಕೆಗೆ ಜನಪರ ಚಳುವಳಿಯ ಆಶ್ರಯ, ಆಸರೆಯಲ್ಲದೇ ಬೇರೇನು ತಾನೇ ಇರಲು ಸಾಧ್ಯ.

ಈಗ ತುರ್ತಾಗಿ ಜನಶಕ್ತಿ ಕಾರ್ಯಾಲಯದ ಪೀಠೋಪಕರಣ ವ್ಯವಸ್ಥೆ ಆಗಲೇಬೇಕಾದ ಕೆಲಸವಾಗಿದೆ. ಈ ಪೀಠೋಪಕರಣಗಳಿಗೆ ಸುಮಾರು 1.00 ಲಕ್ಷ ರೂಗಳು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಜನಶಕ್ತಿಯ ಓದುಗರು, ಹಿತೈಷಿಗಳು, ಅಭಿಮಾನಿಗಳು, ವಿವಿಧ ಜನಪರ ಸಂಘಟನೆಗಳ ಮುಖಂಡರುಗಳು, ಕಾರ್ಯಕರ್ತರು, ಸಂಘ-ಸಂಸ್ಥೆಗಳು ಈ ನಿಟ್ಟಿನಲ್ಲಿ ಕೈಜೋಡಿಸ ಬೇಕೆಂದು, ಉದಾರವಾದ ಹಣಕಾಸಿನ ಅಥವಾ ವಸ್ತು ರೂಪದ ಕಾಣಿಕೆಗಳ ಮೂಲಕ ನೆರವಾಗಬೇಕೆಂದು ತಮ್ಮಲ್ಲಿ ಈ ಮೂಲಕ ವಿನಂತಿಸುತ್ತಿದ್ದೇವೆ.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತೀರೆಂಬ ಆಶಯ ನಮ್ಮದು.

ವಂದನೆಗಳೊಂದಿಗೆ,
ಎಸ್. ವೈ. ಗುರುಶಾಂತ್
ಸಂಪಾದಕರು.

ವಿಶೇಷ ಸೂಚನೆಗಳು

ಕೊಡುಗೆದಾರರ ಹೆಸರು ಮತ್ತು ಕೊಡುಗೆಯ ವಿವರಗಳನ್ನು ಜನಶಕ್ತಿಯಲ್ಲಿ ಪ್ರಕಟಿಸಲಾಗುವುದು.

ತಾವು ತಮ್ಮ ತಮ್ಮ ಊರುಗಳಿಂದಲೇ ನೇರವಾಗಿ ಜನಶಕ್ತಿಯ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಬಹುದು. ಖಾತೆಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಗಮನಿಸುವುದು.

ಜನಶಕ್ತಿ ಕನ್ನಡ ವಾರ ಪತ್ರಿಕೆ
ಅಕೌಂಟ್ ನಂ. 64020446625
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು,
ಸಂಪಂಗಿರಾಮನಗರ ಶಾಖೆ,
ಬೆಂಗಳೂರು-560027

ಬ್ಯಾಂಕ್ ಖಾತೆಗೆ ಹಣ ತುಂಬಿದಲ್ಲಿ, ಅಥವಾ ಕಛೇರಿಗೆ ಡಿ.ಡಿ. ಅಥವಾ ಎಂ.ಓ. ಕಳಿಸಿದಲ್ಲಿ ತಪ್ಪದೇ ಈ ಕೆಳಕಂಡ ದೂರವಾಣಿ ನಂಬರುಗಳಿಗೆ ಫೋನ್ ಮಾಡಿ ತಿಳಿಸುವುದು.

ಆರ್. ರಾಮಕೃಷ್ಣ. - 9448505789
ಎಚ್.ಎಂ.ನಾಗರಾಜ್ - 9482220931

ಜನಶಕ್ತಿ ನೂತನ ಕಾರ್ಯಾಲಯದ ವಿಳಾಸ.
'ಜನಶಕ್ತಿ ಕನ್ನಡ ವಾರಪತ್ರಿಕೆ' ಕಛೇರಿ.
ನಂ.87/ಎ, 8 ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಸಮೀಪ, ಮಹಾಲಕ್ಷ್ಮಿ ಬಡಾವಣೆ,
ಬೆಂಗಳೂರು-560086.

ಪುಸ್ತಕ ಪರಿಚಯ

ಡಿ.ಡಿ.ಕೋಸಾಂಬಿ ನಿಮಗೆ ತಿಳಿದಿರಲಿ



ಡಿ.ಡಿ. ಕೊಸಾಂಬಿ ಭಾರತದ ಒಬ್ಬ ಖ್ಯಾತ ವಿಜ್ಞಾನಿಗಳು. ಕೊಸಾಂಬಿಯವರ ವಿಚಾರದಲ್ಲಿ ವಿಜ್ಞಾನಿಗಳು ಅಂತ ಅಷ್ಟು ಹೇಳಿ ಕೈ ತೊಳೆದುಕೊಳ್ಳುವಂತಿಲ್ಲ. ಪ್ರಾಕೃತಿಕ ವಿಜ್ಞಾನಕ್ಕೂ, ಸಾಮಾಜಿಕ ವಿಜ್ಞಾನಕ್ಕೂ ಬಹಳ ಮಹತ್ವದ ಅಂದರೆ ಮೂಲಭೂತ ಎನ್ನಬಹುದಾದ ಕಾಣಿಕೆ ಕೊಟ್ಟವರು ಅವರು.

ಗಣಿತ, ಸಂಖ್ಯಾಶಾಸ್ತ್ರ, ಜೆನೆಟಿಕ್ಸ್ (ವಂಶವಾಹಿ ವಿಜ್ಞಾನ) ನಾಣ್ಯಶಾಸ್ತ್ರ, ಇತಿಹಾಸ... ಹೀಗೆ ಅವರ ಸಂಶೋಧನೆ, ಅಧ್ಯಯನದ ಹರಹು ಬಹಳ ವಿಶಾಲವಾದದ್ದು. ಭಾರತದ ಇತಿಹಾಸದ ಸಂಶೋಧನೆ ಮತ್ತು ನಿರೂಪಣೆಗೆ ಅತ್ಯಂತ ಮಹತ್ವದ ತಿರುವನ್ನು ತಂದು ಕೊಟ್ಟವರು ಕೊಸಾಂಬಿಯವರು ಎಂದು ಪರಿಗಣಿಸಲಾಗಿದೆ. ಅವರೊಬ್ಬ ಮಾರ್ಕ್ಸ್‌ವಾದಿಯಾಗಿದ್ದರು. ವೈಜ್ಞಾನಿಕ ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಭಾರತದ ಚರಿತ್ರೆಯನ್ನು ಕಟ್ಟುವಲ್ಲಿ ಅವರ ಕೊಡುಗೆ ಅನನ್ಯವಾದುದು ಎಂದು ಗುರುತಿಸಲಾಗಿದೆ.

ಅವರೊಬ್ಬ ವಿಜ್ಞಾನಿಯಷ್ಟೆ ಆಗಿರಲಿಲ್ಲ. ವಿಜ್ಞಾನವನ್ನು ಸಾಮಾಜಿಕ ಹಿತಕ್ಕೆ ಬಳಸಬೇಕು, ಸಮಾಜಕ್ಕೆ ವಿರೋಧಿಯಾಗಿ ಅಲ್ಲ ಎಂದು ಆಗ್ರಹಿಸುವ ಸಾಮಾಜಿಕ ಕಾರ್ಯಕರ್ತರೂ ಆಗಿದ್ದರು. ಈ ನಿಟ್ಟಿನಲ್ಲೇ ಅವರು ಅಣುಯುದ್ಧಕ್ಕೆ ವಿರೋಧಿಯಾಗಿದ್ದರು.

ಇಂತಹ ಮಹತ್ವದ ವಿಜ್ಞಾನಿ, ಇತಿಹಾಸಕಾರ....ಮುಂತಾಗಿ ಏನೆಲ್ಲಾ ಕರೆಯ ಬಹುದಾಗಿರುವ ಈ ವ್ಯಕ್ತಿಯ ಕುರಿತು ತಿಳಿಯಪಡಿಸುವ ಪುಸ್ತಕಗಳು ಕನ್ನಡದಲ್ಲಿ ಹೆಚ್ಚೇನು ಇಲ್ಲ ಎಂಬುದು ಒಂದು ದೊಡ್ಡ ಕೊರತೆಯಾಗಿತ್ತು.

'ಚಿಂತನ ಪುಸ್ತಕ' ಈ ಒಂದು ಕೊರತೆಯನ್ನು ನೀಗಿಸುವ ಒಂದು ಉತ್ತಮ ಪ್ರಕಟಣೆಯನ್ನು ಹೊರತಂದಿದೆ. ಎನ್.ಕೆ. ವಸಂತ ರಾಜ ಅವರು ಸಂಪಾದಿಸಿರುವ 'ಡಿ.ಡಿ. ಕೊಸಾಂಬಿ ನಿಮಗೆ ತಿಳಿದಿರಲಿ' ಪುಸ್ತಕವು ಕೊಸಾಂಬಿಯವರ ಜೀವನ, ವಿಚಾರ, ಕೊಡುಗೆಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಪರಿಚಯಿಸುವ ಪುಸ್ತಕವಾಗಿದೆ. ಸರಾಗವಾಗಿ ಓದಿಸಿಕೊಂಡು ಹೋಗುವ ಪುಸ್ತಕದ ಬೆಲೆ 85 ರೂ.ಇದೆ.

ಸಂಪಾದಕೀಯ

ಅನರ್ಹ ಸರ್ಕಾರ

ಕರ್ನಾಟಕ ವಿಧಾನಸಭೆಯ ಐದು ಪಕ್ಷೇತರ ಶಾಸಕರನ್ನು ಅನರ್ಹಗೊಳಿಸಿದ ಸಭಾಧ್ಯಕ್ಷ ಬೋಪಯ್ಯನವರ ಕ್ರಮವನ್ನು ಎತ್ತಿ ಹಿಡಿದಿರುವ ಹೈಕೋರ್ಟ್‌ನ ತೀರ್ಪಿನ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸುವ ನಿರ್ಧಾರದಿಂದಾಗಿ ಕಾನೂನು ಸಮರ ಮುಂದುವರಿಯಲಿದೆ. ಈ ಪ್ರಕರಣ ಆತಂಕದಲ್ಲಿದ್ದ ಅಧಿಕಾರರೂಢ ಬಿಜೆಪಿಗೆ ಆತಂಕ ತಂದಿತ್ತಾದರೂ ಈಗಿನ ತೀರ್ಪಿನಿಂದಾಗಿ ಅದು ತನ್ನ ಗೆಲುವು, ಇತರರ ಸೋಲು ಎಂದು ಬೀಗುವುದು ಅರ್ಥಹೀನ, ಅನೈತಿಕವಾಗಿದೆ.

ಯಾಕೆಂದರೆ ತೀರ್ಪು ಕಾನೂನಿನ ಹಲವು ತಾಂತ್ರಿಕ ಅಂಶಗಳನ್ನು ಆಧಾರವಾಗಿರಿಸಿಕೊಂಡಿರಬಹುದು. ಆದರೆ ಶಾಸಕರನ್ನು ಅನರ್ಹಗೊಳಿಸಿದ ಸಭಾಧ್ಯಕ್ಷರು ಅಂದಿನ ಯಾವ ರಾಜಕೀಯ ಹಿನ್ನೆಲೆಯಲ್ಲಿ ಕ್ರಮವನ್ನು ಕೈಗೊಂಡರು ಎಂಬುದೂ ಮುಖ್ಯವಾಗುತ್ತದೆ. ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಕುಟುಂಬ ಮತ್ತು ಮಂತ್ರಿಮಂಡಲದ ಹಲವಾರು ಸಚಿವರುಗಳು ನಡೆಸಿದ ಭಾರೀ ಭೂ ಹಗರಣ, ಗಣಿ ಹಗರಣಗಳು ಹೊರಬರುತ್ತಲೇ ಬಿಜೆಪಿ ಪಕ್ಷದೊಳಗೆ ಎದ್ದ ತೀವ್ರತರ ಭಿನ್ನಮತ, ಶಾಸಕರ ಬಂಡಾಯವು ಸರ್ಕಾರವನ್ನು ಪತನದಂಚಿಗೆ ತಂದು ನಿಲ್ಲಿಸಿತು. ಸರ್ಕಾರವನ್ನು ಬೆಂಬಲಿಸಿ ಅಸ್ತಿತ್ವಕ್ಕೆ ಬರಲು ಕಾರಣವಾಗಿದ್ದ 5 ಪಕ್ಷೇತರ ಶಾಸಕರು ಒಳಗೊಂಡು ಒಟ್ಟು 16 ಶಾಸಕರು ಮುಖ್ಯಮಂತ್ರಿಗಳ ಮೇಲೆ ಅವಿಶ್ವಾಸ ಪ್ರಕಟಿಸಿ ರಾಜ್ಯಪಾಲರಿಗೆ ಪತ್ರಗಳನ್ನು ನೀಡಿದ್ದರು. ಭ್ರಷ್ಟಾಚಾರ ಹಾಗೂ ಬಂಡಾಯದ ಪ್ರಕರಣಗಳ ಬಗ್ಗೆ ರಾಜ್ಯಪಾಲರು ಕಠಿಣ ನಿಲುವು ತಳೆದು, ವಿರೋಧ ವ್ಯಕ್ತಪಡಿಸಿದ್ದು ಸರ್ಕಾರದ ಅಸ್ತಿತ್ವವನ್ನೇ ಪ್ರಶ್ನಿಸುವಂತಾಗಿತ್ತು. ಅಕ್ರಮಗಳ ಕಳಂಕ ತೊಡೆದುಕೊಳ್ಳಲು ವಿಫಲವಾಗಿದ್ದ ಮುಖ್ಯಮಂತ್ರಿಗಳ ಪದಚ್ಯುತಿ ಯತ್ನಗಳೂ ಪಕ್ಷದೊಳಗೆ ಸಾಗಿ ಸರ್ಕಾರವೇ ಉರುಳುವ ಸನ್ನಿವೇಶ ನಿರ್ಮಾಣವಾಗಿತ್ತು.

ಹೀಗೆ ಸರಕಾರವೇ ಪತನದಂಚಿಗೆ ಬಂದು ನಿಂತಿರುವಾಗ 16 ಶಾಸಕರನ್ನು ಅನರ್ಹ, ಅಮಾನತುಗೊಳಿಸಿದ ಸ್ಪೀಕರ್‌ರವರ ಕ್ರಮ ಬಿಜೆಪಿ ಸರಕಾರಕ್ಕೆ ಜೀವದಾನ ನೀಡಿತು ಮತ್ತು ಈ ಸ್ಥಾನದ ದುರುಪಯೋಗ ಎಲ್ಲೆಡೆಗಳಿಂದ ತೀವ್ರತರ ಟೀಕೆಗೂ ಈಡಾಗಿತ್ತು. ಹೀಗೆ ಸಭಾಧ್ಯಕ್ಷರ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವವರೆಗೂ ಬಿಜೆಪಿ ಯತ್ನ ನಡೆದಿತ್ತು. ಮಾತ್ರವಲ್ಲ ಆ ಶಾಸಕರು ವಿಶ್ವಾಸಮತಕ್ಕೆ ಬರದಂತೆ ತಡೆದದ್ದು, ವಿರೋಧಪಕ್ಷಗಳ ವಿಧಾನಸಭೆಯೊಳಗೆ ಪ್ರವೇಶಿಸದಂತೆ ಪೊಲೀಸ್ ಬಲವನ್ನು ಬಳಸಿದ್ದು ಶಾಸನ ಸಭೆಯೊಳಗೆ ಚರ್ಚೆಯೇ ಇಲ್ಲದೇ ವಿಶ್ವಾಸಮತ ಸಾಬೀತಾಗಿದೆ ಎಂದು ಘೋಷಿಸಿದ್ದು ರಾಜ್ಯದ ಶಾಸಕಾಂಗದ ಇತಿಹಾಸದಲ್ಲೇ ಕಪ್ಪುಚುಕ್ಕೆಯ ಪ್ರಕರಣವಾಯಿತು. ಬಿಜೆಪಿಯ ದುಷ್ಟ ಹುನ್ನಾರಕ್ಕೆ ದಾಳವಾಯಿತು. ಒಂದಿಷ್ಟಾದರೂ ನೈತಿಕತೆ, ಸಾರ್ವಜನಿಕ ಹೊಣೆಗಾರಿಕೆ, ಜನನಿಷ್ಠತೆಯಿದ್ದಿದ್ದರೆ ಯಡಿಯೂರಪ್ಪನವರು ಎಂದೋ ರಾಜೀನಾಮೆ ನೀಡಿ ವಿಧಾನಸಭೆಯನ್ನು ವಿಸರ್ಜಿಸಬೇಕಿತ್ತು.


ಈಗ ಈ ತೀರ್ಪಿನಿಂದಾಗಿ ಪಕ್ಷೇತರರ ಪ್ರಕರಣ ಪಕ್ಷಾಂತರವಾಗಿದೆಯೆಂದೆಲ್ಲಾ ಚರ್ಚೆಗಳು ನಡೆದಿವೆ. ಇದು ಪಕ್ಷಾಂತರವಾಗಬಹುದಾದರೆ ಇಂತಹದ್ದಕ್ಕೆ ಎಲ್ಲಾ ರೀತಿಯ ಪ್ರಚೋದನೆ ಮತ್ತು ಕಾರ್ಯಾಚರಣೆ ಆರಂಭಗೊಂಡಿದ್ದೇ ಬಿಜೆಪಿಯಿಂದ. ಅಂದರೆ ಬಹುಮತ ಗಿಟ್ಟಿಸಿಕೊಳ್ಳಲೆಂದೇ (ಕಾನೂನು ನೆಪವೊಡ್ಡಿ) ಆಪರೇಷನ್ ಕಮಲವೆಂದು ಆಮಿಷ, ಅಕ್ರಮಗಳ ಹಾದಿಯಿಂದ ಶಾಸಕರನ್ನು ಪಕ್ಷಾಂತರ ಮಾಡಿಸಿದ್ದೇ ಬಿಜೆಪಿಯಲ್ಲವೇ? ಈಗಲೂ ಅತಂತ್ರ ನಿವಾರಿಸಿಕೊಳ್ಳಲು ಇಂತಹುದೇ ಕೃತ್ಯಗಳನ್ನು ನಡೆಸಲು ಪಿತೂರಿಗಳು ನಡೆದಿವೆ. ಸಮಯಸಾಧಕರ ಸೃಷ್ಟಿಗೆ ಬಿಜೆಪಿ ಪ್ರಧಾನ ಹೊಣೆಯಾಗಿದೆ. ಆದ್ದರಿಂದ ಇಂತಹ ಅನೈತಿಕ ರಾಜಕಾರಣ ಸಂವಿಧಾನ ಕಾನೂನುಗಳ ದುರ್ಬಳಕೆ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು ಅಪಾಯಕಾರಿಯಾಗಿದೆ.

ನ್ಯಾಯಾಲಯದ ತೀರ್ಪು ಏನೇ ಬರಲಿ ಅದು ಬಿಜೆಪಿಯ ಅನೈತಿಕ, ಅಕ್ರಮಗಳನ್ನು ಸಮರ್ಥಿಸಲಾರದು. ಆದ್ದರಿಂದ ಈಗಲಾದರೂ 'ಆಪರೇಷನ್ ಕಮಲದಂತಹ' ನೀಚ ಕೃತ್ಯಗಳು, ಭಂಡತನದಿಂದ ಅಧಿಕಾರದಲ್ಲಿ ಉಳಿಯುವ ಹುನ್ನಾರ ನಡೆಸದೇ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿ ವಿಧಾನಸಭೆ ವಿಸರ್ಜಿಸಿ ಹೊರ ನಡೆಯಬೇಕು. ಅವರು ಭಂಡತನದಿಂದ ಅಧಿಕಾರಕ್ಕೆ ಅಂಟಿಕೊಂಡರೂ ಈಗಾಗಲೇ ಮುಖ್ಯಮಂತ್ರಿಗಳ ಮೇಲೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಹೂಡಲಾಗಿರುವ ಮೊಕದ್ದಮೆಗಳು ದಾಖಲಾದ ತಕ್ಷಣವೇ ರಾಜೀನಾಮೆ ಸಲ್ಲಿಸಿ ಹೊರ ನಡೆಯಬೇಕಾದ 'ಮುಖಭಂಗ'ದ ಪ್ರಕರಣವಂತೂ ನಿಶ್ಚಿತ. ○

ಅಳುವ ರೈತನೆದುರು ನಗುವ ಸರ್ಕಾರ

ಮುಖ್ಯಮಂತ್ರಿಗಳು ಕೃಷಿ ಬಜೆಟ್‌ನ್ನು ಮಂಡಿಸಿ 'ದಾಖಲೆ ನಿರ್ಮಿಸುವ' ತರಾತುರಿಯಲ್ಲಿದ್ದಾರೆ. ಮಾಧ್ಯಮಗಳು ನೀರಿಳಿಯದ ರೈತರ ಗಂಟಲಲ್ಲಿ ನೀರು ಹರಿಸುತ್ತಿವೆ ! ಇನ್ನೇನು ಬಜೆಟ್ ಮಂಡನೆಯಾಗಬೇಕು ! ರೈತ ನಗಬೇಕು?

ಇಲ್ಲಿ ಒಂದು ಪ್ರಶ್ನೆಯ ಬಗ್ಗೆ ಪ್ರಸ್ತಾಪಿಸಿದರೆ ಸಾಕಾದೀತು. ರೈತರು 'ಬೆಳೆದ ಫಸಲಿಗೆ ನ್ಯಾಯಸಮ್ಮತ, ಬೆಂಬಲ ಬೆಲೆ ನೀಡಿ ನಮ್ಮನ್ನು ಉಳಿಸಿ' ಎಂದು ಪದೇ ಪದೇ ಇಡುತ್ತಿರುವ ಆಗ್ರಹದ ಮೊರೆಗೆ ಸರ್ಕಾರದ ಪ್ರತಿಕ್ರಿಯೆ 'ತಥಾಸ್ತು' ಎಂದೇನೋ ಹೇಳಿತು. ಆದರೆ ನೀವೇ ನೋಡಿ ಕಳೆದೆರಡು ವಾರದ ಹಿಂದೆ ಸಾಹಿತ್ಯ ಸಮ್ಮೇಳನದ ಜಾತ್ರೆ ಸಂಭ್ರಮ ನಡೆಯುತ್ತಿರುವಾಗಲೇ ತೊಗರಿ ಬೇಳೆ ಬೆಳೆದ ರೈತರು ಫಸಲಿಗೆ ಬೆಲೆ ಸಿಗದೇ ಆಗಲಿದ್ದ ಅಪಾರ ಸಾಲದ ಹಾನಿ ನೆನೆದು ತೊಗರಿ ಕಣಜ ಗುಲಬರ್ಗಾದ ಜೇವರ್ಗಿಯಲ್ಲಿ 16 ಜನ ರೈತರು ಸಾಮೂಹಿಕವಾಗಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ. ಆ ತೊಗರಿಯನ್ನು ಸರ್ಕಾರವೇ ಖರೀದಿಸುವುದಾಗಿಯೂ ಇದಕ್ಕೆ ರೂ.4000 ಬೆಂಬಲ ಬೆಲೆಯನ್ನು ಘೋಷಿಸಿತು. ಒಳ್ಳೆ ಬೆಲೆ ಅಲ್ಲವಾದರೂ ರೈತರಿಗೆ ಕೊಂಚ ನೆಮ್ಮದಿ ಮೂಡಿತು.



ಉಳಿಯದ ನೆಮ್ಮದಿ

ಆದರೆ ಒಂದೆರಡು ದಿನವಿದ್ದ ಆ ನೆಮ್ಮದಿ ಅಷ್ಟಾಗಿ ಉಳಿಯಲಿಲ್ಲ. ಯಾಕೆಂದರೆ ಸರ್ಕಾರದ ಖರೀದಿ ಕೇಂದ್ರಗಳಲ್ಲಿ ತೊಗರಿ ಮಾರುತ್ತಿಲ್ಲಬೆಂಬ ವರದಿಯೊಂದು ಪ್ರಕಟವಾಯಿತು.

ಒಂದೆರಡು ದಿನ ಬಿರುಸಿನ ಮಾರಾಟಕ್ಕೆ ರೈತರು ಸೇರಿದ್ದರಾದರೂ ನಂತರ ಅಲ್ಲಿಗೆ ಹೋಗಲಿಲ್ಲ. ಅವರು ಖಾಸಗಿ ಅಂಗಡಿಗಳಿಗೆ ಮಾರಾಟ ಕೇಂದ್ರಕ್ಕೆ ಹೋಗಿದ್ದರು. ಕಾರಣ ಸರ್ಕಾರಿ ಕೇಂದ್ರಕ್ಕೆ ಮಾರಿದರೆ ಹಣ ಸಿಗುವುದು ಏನಿದ್ದರೂ ತಿಂಗಳಲ್ಲಿ. ಅಷ್ಟು ದಿನ ತಡೆಯುವ ಶಕ್ತಿ ಇಲ್ಲದ ರೈತರು ಕೂಡಲೇ ಹಣ ಸಿಗುವಂತಹ ಕೇಂದ್ರಗಳಿಗೆ ಹೋಗಿದ್ದು ಸಹಜವಾಗಿತ್ತು.

ಈ ಬೆಂಬಲ ಬೆಲೆ ಹೆಚ್ಚಾಗಬೇಕಿತ್ತು. ಕನಿಷ್ಠ 5000 ಕ್ಕಾದರೂ ಬೆಲೆ ಹೆಚ್ಚಬೇಕಿತ್ತು. ಇದಕ್ಕಿಂತಲೂ ಮುಖ್ಯವಾಗಿ ರೈತರು ಖಾಸಗಿ ಧಣಿಗಳತ್ತ ಹೋಗಿರುವುದರಲ್ಲಿ ಕೆಲ ಅನಿವಾರ್ಯ ಕಾರಣಗಳೆಂದರೆ ಈ ರೈತರು ಬಹುತೇಕವಾಗಿ ಬೀಜ, ಗೊಬ್ಬರ, ಕ್ರಿನಾಶಕಗಳನ್ನು ಉದ್ರಿಯಾಗಿ ಪಡೆದಿರುತ್ತಾರೆ. ಮದುವೆ ಮುಂಜಿಗೂ ಸಾಲ, ಕೈಗಡ ಸಾಲ.



ಹೀಗಿರುವುದರಿಂದ ಅವರಲ್ಲಿಗೆ ಹೋಗಬೇಕಾದ ಅನಿವಾರ್ಯ ಸ್ಥಿತಿ. ಆದರೆ ಸರ್ಕಾರದ ಬಳಿ ತೊಗರಿ ಗುಣಮಟ್ಟ ಇತ್ಯಾದಿಗಳ ಬಗ್ಗೆ ಹಲವು ಶರತ್ತುಗಳು, ನಿಯಮಗಳನ್ನು ರೈತರು ಪೂರ್ತಿಯಾಗಿ ಪೂರೈಸುವ ಸ್ಥಿತಿಯಲ್ಲಿ ಇರುವುದಿಲ್ಲ. ಇವೆಲ್ಲವೂ ಅವರನ್ನು ಖಾಸಗಿಯವರತ್ತ ತಳ್ಳುತ್ತಿವೆ. ಸರ್ಕಾರಕ್ಕೆ ಅರಿವು ಅಥವಾ ಪರಿಹರಿಸುವ ನಿರ್ಧಾರವಿದೆಯೇ? ಈ ಸರ್ಕಾರವೇ ವ್ಯಾಪಾರಿಗಳ ಸರಕಾರವೂ ಆಗಿರುವುದರಿಂದ ಇದಕ್ಕಿಂತ ಬೇರೆ ನಿರೀಕ್ಷಿಸಲಾಗದು. ಹೀಗೆ ಸರ್ಕಾರದ ಆಶ್ವಾಸನೆ, ಜಾರಿ ಫಲ! ಅಂದರೆ ರೈತರ ತುರ್ತು ಅಗತ್ಯಗಳನ್ನು ಸೂಕ್ತವಾಗಿ ಪರಿಗಣಿಸುವಲ್ಲಿ ಸರ್ಕಾರದ ಹೊಣೆ ಇದೆ. ಆದರೆ ಕೇವಲ ಒಂದಿಷ್ಟು ಬೆಲೆ ಹೆಚ್ಚಳದ ಪ್ರಕಟಣೆ ನಿಜಕ್ಕೂ ಸಹಾಯಕ್ಕೆ ಬಂದೀತೇ? ಮಠಾಧೀಶರಿಗೆ, ಜಾತೀಯ ಸಂಸ್ಥೆಗಳಿಗೆ ನಿಂತ ಕ್ಷಣದಲ್ಲೇ ಕೋಟಿ ಕೋಟಿ ರೂಪಾಯಿಗಳ ಹಣವನ್ನು ಹಂಚುವ ಧಾರಾಳ ಸರ್ಕಾರವು ಹಸಿರು ಶಾಲು ಹೊದ್ದುಬಿಟ್ಟರೆ ರೈತರ ಸ್ಥಿತಿಗತಿ ಶಕ್ತಿ, ಸಾಮರ್ಥ್ಯ ಅರ್ಥವಾಗದೀತೆ? ಬೆಂಬಲ ಬೆಲೆಗೆ ಆವರ್ತನಿಧಿ ನೀಡಬಾರದೇ? ಹಿಂದಿನ ಅನುಭವಗಳಿಂದಲೂ ತಿದ್ದಿಕೊಳ್ಳುವ ಇರಾದೆಯೇ ಇಲ್ಲವಾಗಿದೆ ಈಗಲೂ...

ಅಸಹಾಯಕತೆ

ಈಗಲೂ ಭತ್ತ, ಕಬ್ಬು ಬೆಳೆದ ಬೆಳೆಗಾರರು ಅಂತಹುದೇ ಸಂಕಷ್ಟದಲ್ಲಿದ್ದಾರೆ. ಕಬ್ಬು ಬೆಳೆದ ರೈತರು ಇನ್ನೇನು ಕಟಾವು ಮಾಡಬೇಕಾದ ಒತ್ತಡದಲ್ಲಿದ್ದಾರೆ. ಆದರೆ ಇದುವರೆಗೂ ಕಬ್ಬಿಗೆ ಬೆಂಬಲಿತ ಬೆಲೆ ನಿಗದಿಯಾಗಲಿಲ್ಲ.

ಪ್ರಸಕ್ತವಾಗಿ 3 ಕೋಟಿ 60 ಲಕ್ಷ ಟನ್ ಕಬ್ಬನ್ನು ರಾಜ್ಯದಲ್ಲೇ ಬೆಳೆದಿರುವ ಸಮೀಕ್ಷೆ ಇದೆ. ಬೆಲ್ಲಕ್ಕೆ 50 ಲಕ್ಷ ಟನ್, ಬೀಜೋತ್ಪಾದನೆಗೆ 30 ಲಕ್ಷ ಟನ್, ಜ್ಯೂಸ್ ಇತ್ಯಾದಿಗಳಿಗೆ 10 ಲಕ್ಷ ಟನ್ ಬಳಕೆಯಾಗುತ್ತದೆ. ಇನ್ನುಳಿದ 2 ಕೋಟಿ 70 ಲಕ್ಷ ಟನ್‌ಗೆ ನೇರವಾಗಿ ಸಕ್ಕರೆ ಕಾರ್ಖಾನೆಗೆ ಹೋಗುತ್ತದೆ. ಈ ವರ್ಷ ಕಳೆದ ವರ್ಷಗಳಿಗಿಂತ ಹೆಚ್ಚಿಗೆ ಕಬ್ಬನ್ನು ಬೆಳೆಯಲಾಗಿದೆ ಎಂಬ ಅಂದಾಜು (ಕಳೆದ ವರ್ಷ 2.29 ಕೋಟಿ ಟನ್) ಸಕ್ಕರೆ ಕಾರ್ಖಾನೆಗಳಿಗೆ ಲಭ್ಯವಾಗಿತ್ತು. ಪ್ರತಿ ಟನ್‌ಗೆ ವಿವಿಧ ಪ್ರದೇಶಗಳಲ್ಲಿ ಕಬ್ಬಿನ ಬೆಲೆಯೂ ವ್ಯತ್ಯಾಸವಾಗಿದೆ. ಉತ್ತರ ಕರ್ನಾಟಕದಲ್ಲಿ ರೂ.1,800 ಎಂತಲೂ, ಹೈದ್ರಾಬಾದ್ ಕರ್ನಾಟಕದಲ್ಲಿ ರೂ.1500, ದಕ್ಷಿಣ ಕರ್ನಾಟಕದಲ್ಲಿ ಕೊಯ್ಲು, ಸಾಗಣೆ ಬಿಟ್ಟು 1300 ರೂ. ಟನ್‌ಗೆ ಇದೆ. ಕಬ್ಬು ಪೂರೈಸಿದ 15 ದಿನಗಳೊಳಗೆ ರೈತರಿಗೆ ಹಣವನ್ನು ಕಾರ್ಖಾನೆಯವರು ನೀಡಬೇಕು. ಆದರೆ ಅದು ಸಾಧ್ಯವಾಗದೇ ಸಿಹಿ ಕಬ್ಬು ಮಾರಿದ ರೈತರ ಪಾಲಿಗೆ ಕಹಿ ಅನುಭವವೇ! ಬಾಕಿ ಉಳಿಸಿಕೊಂಡ ಹಣವನ್ನು ಖಾಸಗಿ ಕೈಗಾರಿಕೆಗಳು ವರ್ಷಗಳಾನುಗಟ್ಟಲೆ ನೀಡದೇ ಸತಾಯಿಸುವಂತಹ ಜೀವ ಹಿಂಡುತ್ತಿರುವ ಸ್ಥಿತಿ ಎಲ್ಲೆಡೆಗಳಲ್ಲಿಯೂ ಇವೆ. ಆದರೆ ಕಮಲಧಾರಿಗಳು ರೈತರ ಉದ್ಧಾರ, ಅಭಿವೃದ್ಧಿ ಬಗ್ಗೆ ಬಾಯ್ ಬಡಿದುಕೊಂಡರೂ ಸ್ಥಿತಿ ಬದಲಾಗಿಲ್ಲ. ಆದ್ದರಿಂದಲೇ ಪ್ರಶ್ನೆ ಏಳುವುದು ಕೃಷಿ ಬಜೆಟ್ ಎಂಬುದೂ ಕೂಡ ರೈತರ ಸಮಸ್ಯೆಗಳನ್ನು ಪರಿಹರಿಸುವ ಕ್ರಮವಾಗಿಯೇ ಅಥವಾ ರೈತರ ಅಸಹಾಯಕತೆಯನ್ನು ಬಂಡವಾಳವಾಗಿಸಿ ಮತದ ಬುಟ್ಟಿ ಹಿಡಿಯಲೋ?

* * *

ಕಾಂಗ್ರೆಸ್ ಈಗ ಬಯಲಿಗೆ

ಕಛೇರಿಯಿಂದ ಮಾಧ್ಯಮದೆದುರು ವಿಪರೀತ ಹೋರಾಡುತ್ತಿದ್ದ ಕಾಂಗ್ರೆಸ್ ನಾಯಕರು ಇದೀಗ ಬಯಲಿಗೆ ಬಂದು ಭಾಷಣ ಮಾಡುವಷ್ಟು ಬದಲಾಗಿದ್ದಾರೆ! ಅರ್ಥಾತ್ ರಾಜ್ಯದಲ್ಲಿ ಪ್ರಾದೇಶಿಕ ರ್‍ಯಾಲಿಗಳನ್ನು ಮಾಡುತ್ತಿದ್ದಾರೆ. ಇನ್ನು ಕೆಳಗಿಳಿಯಲು ಕೆಲವು ವರ್ಷಗಳೇ ಬೇಕಾದವು. ಚುನಾವಣೆ ಘೋಷಿತವಾದರೆ ಕೆಲವು ತಿಂಗಳು ಸಾಕಾಗಲೂಬಹುದು.

ಇವರ ಘೋಷಿತ ಅಜೆಂಡಾ ಬಿಜೆಪಿ ಸರ್ಕಾರದ ಹಗರಣಗಳನ್ನು ಬಯಲಿಗೆಳೆಯುವುದು. ಹೀಗೆಂದು ಹೇಳಿದ್ದೇ ತಡ ಯಡಿಯೂರಪ್ಪನವರು ಕಾಂಗ್ರೆಸ್ 'ನಾಯಕರ' ಜನ್ಮ

ಪುಟ 6 ಕ್ಕೆ

ಮುನ್ನೂರು ಗ್ರಾಮದಲ್ಲಿ ಉದ್ಯೋಗ ಖಾತ್ರಿ ಆಯ್ತಿ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಮುನ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಶಸ್ವಿಯಾಗಿ ಜಾರಿಯಾಗುತ್ತಿದೆ. ಜಿಲ್ಲೆಗೆ ಮಾದರಿಯಾಗಿದೆ. ಕೇಂದ್ರ ಸರ್ಕಾರದ ಬಹು ನಿರೀಕ್ಷಿತ ಮಹಾತ್ವಾಕಾಂಕ್ಷಿ ಯೋಜನೆಯಾದ ರಾ.ಗ್ರಾ.ಉ.ಖಾ. ಮುನ್ನೂರು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಧಿಕಾರಿ ವರ್ಗದ ನಿರ್ಲ್ಯಕ್ಷದ ನಡುವೆಯು 2010-11 ಸಾಲಿನ ಕಾಮಗಾರಿ ತಡವಾಗಿ ಪ್ರಾರಂಭವಾದರೂ ತೀವ್ರಗತಿಯ ವೇಗವನ್ನು ಪಡೆದುಕೊಂಡಿದೆ.

ಗ್ರಾಮದಲ್ಲಿ ಕಳೆದ 2009-10 ಸಾಲಿನಲ್ಲಿ ಸುಮಾರು 20.5 ಲಕ್ಷಗಳ 67 ಕಾಮಗಾರಿಗಳು ಪೂರ್ಣಗೊಂಡಿದ್ದು, ಸಾರ್ವಜನಿಕ ಕಾಮಗಾರಿಗಳಲ್ಲಿ ಜನರು ಸಾಮೂಹಿಕವಾಗಿ ಭಾಗವಹಿಸಿರುವುದು ಈ ಗ್ರಾಮದ ಇನ್ನೊಂದು ವಿಶೇಷ. 176 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದು 65 ಕುಟುಂಬದ ಫಲಾನುಭವಿಗಳು 100 ದಿನಗಳನ್ನು ಪೂರೈಸಿರುತ್ತಾರೆ. ಹೆಚ್ಚಾಗಿ ಮಹಿಳೆಯರೇ ಕೆಲಸದಲ್ಲಿ ಭಾಗವಹಿಸುತ್ತಿದ್ದು, ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬ ಬೇಧವಿಲ್ಲದೆ ಉತ್ಸಾಹದಿಂದ ನಿರ್ವಹಿಸಿದ್ದಾರೆ. ಇದಕ್ಕೆ ಪೂರಕವಾಗಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಗ್ರಾಮದಲ್ಲಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವುದರೊಟ್ಟಿಗೆ ಕಳೆದ ಬಾರಿ 100 ದಿನಗಳನ್ನು ಪೂರೈಸಿದವರಿಗೆ 'ಸ್ನೇಹಕೂಟ' ದ ಮುಖಾಂತರ ಸನ್ಮಾನಿಸಿದೆ.

ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಿಗೆ ಭೇಟಿ ನೀಡಿದಾಗ ಫಲಾನುಭವಿಗಳು ಮಾತನಾಡುತ್ತಾ ಕಾಮಗಾರಿಗಳ ಪ್ರಾರಂಭದಲ್ಲಿ ವಿಳಂಬವಾಗಿರುವುದರಿಂದ 100 ಗಳ ಕೆಲಸ ಪೂರ್ತಿಗೊಳಿಸಲು ಕಷ್ಟಕರವಾಗಿದೆ. ಅಲ್ಲದೆ ಗ್ರಾಮ ಅಭಿವೃದ್ಧಿ ಕುಂಠಿತವಾಗಲು ಗ್ರಾಮ ಪಂಚಾಯತು ನೇರ ಹೊಣೆಯಾಗಿದೆ ಎಂದರು. ಕಳೆದ ಬಾರಿ ರೂ.125 ಕೂಲಿ ಸಿಗುತ್ತಿದ್ದು ಈ ಭಾರಿ ಜಿಲ್ಲೆಯಲ್ಲಿ ರೂ.100 ಕೂಲಿ ನಿಗದಿಪಡಿಸಿರುವುದು ಯೋಜನೆಯ ಅನುಷ್ಠಾನದ ಬದ್ಧತೆಯ ಕೊರತೆಗೆ ಕನ್ನಡಿಯಂತಿದೆ. ಕೇಂದ್ರ ಸರ್ಕಾರ 2011 ಜನವರಿಯಿಂದ ರೂ.125 ವೇತನ ಜಾಸ್ತಿ ಮಾಡಿದ್ದರೂ ಜಿಲ್ಲೆಯಲ್ಲಿ ಜಾರಿಯಾಗದೆ ರಾಜ್ಯ ಬಿಜೆಪಿ ಸರ್ಕಾರದ ಮತ್ತು ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ಮುನ್ನೂರು ಗ್ರಾಮದಲ್ಲಿ ರೈತ ಸಂಘ (ಕೆಪಿಆರ್‌ಎಸ್) ಗ್ರಾಮ ಸಮಿತಿ ನೇತೃತ್ವದಲ್ಲಿ ಎನ್.ಆರ್.ಇ.ಜಿ.ಎ ಫಲಾನುಭವಿಗಳು ಎರಡು ತಿಂಗಳ ಹಿಂದೆ "ಯೋಜನೆಯ ವಿಳಂಬ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ" ಗ್ರಾಮ ಪಂಚಾಯತ್‌ನ ಮುಂದೆ ಪ್ರತಿಭಟನೆ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದು.

ಗ್ರಾಮದಲ್ಲಿ ಸಾರ್ವಜನಿಕ ಕೆಲಸಗಳಿಗೆ ರೈತಸಂಘ ಜಾಸ್ತಿ ಒತ್ತು ನೀಡಿರುವುದರಿಂದ ಈ ಸಲ ಅಕುಶಲ ಮತ್ತು ಕುಶಲ (ಮೇಸ್ತ್ರಿ) ಕೆಲಸಗಳನ್ನು ಫಲಾನುಭವಿಗಳೇ ನಿರ್ವಹಿಸಿದ್ದಾರೆ. "4ನೇ ವಾರ್ಡಿನ ಕಮಲಾಕ್ಷ ಮನೆಯ ಬಳಿಯಿಂದ ಮಾಧವ ಮನೆಯವರೆಗೆ ಮಳೆ ನೀರು ಚರಂಡಿ ರಚನೆ" ದ.ಕ. ಜಿ.ಪಂ. ಇಂಜಿನಿಯರಿಂಗ್ ಉಪ ವಿಭಾಗದ 1.00 ಲಕ್ಷದ ಕಾಮಗಾರಿಯಲ್ಲಿ ಕ್ರಿಯಾಯೋಜನೆಯ ಅಂದಾಜು ಉದ್ದಕ್ಕಿಂತಲೂ ಸುಮಾರು 10 ರಿಂದ 12 ಮೀಟರ್ ಜಾಸ್ತಿಯಾಗಿದ್ದು, ಇದು ಸ್ವತ: ಕೂಲಿ ಜನರೇ ನಿರ್ವಹಿಸಿದ್ದರಿಂದ ಸಾಧ್ಯವಾಯಿತು ಎಂದು ಗುಂಪಿನ ಮುಖ್ಯಸ್ಥ ವಿಶ್ವನಾಥ ಹೇಳುತ್ತಾರೆ. ಒಟ್ಟು ಗ್ರಾಮದಲ್ಲಿ 4 ಕಡೆ ಯೋಜನೆಯ ಕಾಮಗಾರಿಗಳು ನಡೆಯುತ್ತಿದ್ದು ಸುಮಾರು 60 ಜನ ಫಲಾನುಭವಿಗಳು ಸಾಮೂಹಿಕವಾಗಿ ಉತ್ಸಾಹದಿಂದ ಭಾಗವಹಿಸುತ್ತಿರುವುದು ಜಿಲ್ಲೆಗೆ ಮಾದರಿಯಾಗಿದೆ.

ವರದಿ : **ಜೀವನ್‌ರಾಜ್ ಕುತ್ತಾರು**

ಭ್ರಷ್ಟಾಚಾರದ ವಿರುದ್ಧ ಬಿಜೆಪಿಯ ಹೋರಾಟ !

ಕೇಂದ್ರ ಸರಕಾರದ ಭ್ರಷ್ಟಾಚಾರದ ವಿರುದ್ದ ಹೋರಾಡುವುದಾಗಿ ಹೇಳುವ ಬಿ.ಜೆ.ಪಿ ಯು ತನ್ನ ಪಕ್ಷ ಅಧಿಕಾರದಲ್ಲಿರುವ ರಾಜ್ಯ ಸರಕಾರಗಳು ವ್ಯಾಪಕವಾಗಿ ಅಕ್ರಮಗಳು, ಹಗರಣಗಳಲ್ಲಿ ತೊಡಗಿರುವಾಗ ಏನೊಂದೂ ಮಾತನಾಡದೇ ಸಮರ್ಥಿಸಿಕೊಳ್ಳುತ್ತಿರುವುದು ನಾಚಿಕೆಗೇಡು ಎಂದು ಸಿ.ಪಿ.ಐ (ಎಂ) ಪಕ್ಷದ ಪ್ರದಾನ ಕಾರ್ಯದರ್ಶಿ ಪ್ರಕಾಶ ಕಾರಟ್ ಟೀಕಿಸಿದರು.

ಅವರು ಪಕ್ಷದ ರಾಜ್ಯ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಬಂದಾಗ ಇದೇ ಫೆಬ್ರವರಿ 13ರಂದು ಬೆಂಗಳೂರಿನ ಇ.ಎಂ.ಎಸ ಭವನದಲ್ಲಿ ಜರುಗಿದ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡುತಿದ್ದರು.

ಬಿಜೆಪಿಗೆ ಬೇರೆಯವರು ಮಾಡಿದರೆ ಮಾತ್ರ ಭ್ರಷ್ಟಾಚಾರ, ತಾನು ಮಾಡಿದರೆ ಅಲ್ಲವೆಂದು ನಂಬಿಸ ಬಯಸುತ್ತಿದೆ.ಇವರದು ಇಬ್ಬಗೆಯ ನೀತಿ ಎಂದು ಛೇಡಿಸಿದರು. ಮುಂದುವರಿದು ಮಾತನಾಡುತ್ತಾ ಒಂದು ವೇಳೆ ಬಿಜೆಪಿ ನಾಯಕತ್ವ ಭ್ರಷ್ಟಾಚಾರದ ವಿರುದ್ಧವಾಗಿದ್ದರೆ ಹತ್ತಾರು ಹಗರಣ, ಅಕ್ರಮಗಳಲ್ಲಿ ತೊಡಗಿರುವ ಕರ್ನಾಟಕದ ಯಡಿಯೂರಪ್ಪನವರ ಸರಕಾರ ರಾಜೀನಾಮೆ ಕೊಟ್ಟು ತೊಲಗಬೇಕಿತ್ತು. ಆದರೆ ಈಗಲೂ ಸಮರ್ಥನೆ ನಡೆಸುತ್ತಾ ಉಳಿದಿರುವುದೇಕೆ? ಎಂದು ಪ್ರಶ್ನಿಸಿದರು. ಈ ಸರಕಾರ ತೊಲಗಬೇಕು ಎಂದರು.

ರಾಜ್ಯದಲ್ಲಿ ನಡೆದ ಚರ್ಚ್ ಹಗೂ ಕ್ರೈಸ್ತರ ಮೇಲಿನ ದಾಳಿಗಳ ಬಗ್ಗೆ ನೇಮಿಸಿದ ನ್ಯಾಯಮೂರ್ತಿ ಸೋಮಶೇಖರ ಆಯೋಗವು ಧಾಳಿ ನಡೆಸಿದ ಸಂಘ ಪರಿವಾರವನ್ನು ಖುಲಾಸೆ ಮಾಡಿ, ಧಾಳಿಗೊಳಗಾದವರನ್ನೇ ಆರೋಪಿಗಳು ಎನ್ನುವಂತೆ ನೀಡಿದೆ. ವಿವಿಧ ಒತ್ತಡಗಳಿಂದ ನೀಡಲಾಗಿರುವ ಈ ವರದಿಗೆ ಯಾವುದೇ ವಿಶ್ವಾಸಾರ್ಹತೆ ಇಲ್ಲ ಎಂದು ಕಾಂ.ಪ್ರಕಾಶ್ ಕಾರಟ್ ನುಡಿದರು.

ಅಲ್ಲದೇ 2 ಜಿ ಸ್ಪೆಕ್ಟ್ರಂ, ಎಸ್ ಬ್ಯಾಂಡ್ ನಂತರ ಹಗರಣದಲ್ಲಿ ಭಾರತ ಸರ್ಕಾರವು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಜಂಟಿ ಸದಸ್ಯ ಸಮಿತಿ ನೇಮಕವಾಗಿ ವಿಚಾರಣೆ ನಡೆಯಲೇಬೇಕು ಎಂದರು.

ಮೈಸೂರಿನಲ್ಲಿ ಜಾತ್ಯಾತೀತ ಜನದಾತಳವು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿಯೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಪ್ರಸ್ತಾಪಿಸಿ ಈಗಲೂ ಜೆಡಿ(ಎಸ್)ನ್ನು ಸೆಕ್ಯುಲರ್ ಎಂದು ಭಾವಿಸುವಿರಾ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಕಾರಟ್‌ರವರು ದೇಶದಲ್ಲಿ ಹಲವಾರು ಜಾತ್ಯಾತೀತ ಪಕ್ಷಗಳು ಹಲವು ಸಂದರ್ಭಗಳಲ್ಲಿ ಚಂಚಲವಾಗುತ್ತವೆ. ಸಂದರ್ಭಸಾಧಕವೂ ಆಗಿವೆ ಎಂಬುದು ತಿಳಿದದ್ದೇ ಆಗಿದೆ ಎಂದು ತಿಳಿಸಿದರು.

ಈ ಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ. ಗುರುಶಾಂತ್ ಉಪಸ್ಥಿತರಿದ್ದರು.

ಜಲ್ಮ ಜಾಲಾಡಕ್ಕೆ ನೀರೆಲ್ಯದೆ ?

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ನೀವು ಇಂಗೆ ನಂಗೆ ಪ್ರತಿ ದಿನ ಇಂಸೆ ಕೊಡ್ತಾ ಇದ್ರೆ ನಿಮ್ಮ ಜಲ್ಮ ಜಾಲಾಡ್ತಿನಿ, ನನ್ನ ನೆಮ್ದಿಯಿಂದ ಕ್ಯಲ್ಸ ಮಾಡಕೆ ಬುಡ್ದೆ ಇದ್ರೆ ನಿಮ್ಮ ಮ್ಯಾಲೆ ಕೇಸ್ ಆಕ್ತಿನಿ, ಜನ್ರ ಅತ್ರ ಓಗಿ ನೀವು ಕೊಡ್ತ ಇರ ಇಂಸೆ ಬಗ್ಗೆ ಏಳ್ಕಂಡು ಅಳ್ತಿನಿ!

ಯಣ್ಣ ಸಲ್ಪ ನಿಲ್ಲು. ನೀನ್ಯಾಕೋ ಯಡೂರಪ್ಪುನ್ ತರ ಮಾತಾಡ್ತಾ ಇದ್ದಿಯಲ್ಲ, ಏನಾಗ್ಯದೆ?

ಅಯ್ಯೋ ಯಡೂರಪ್ಪುನ್ ತರ ಅಲ್ಲ, ಇದ್ಯಲ್ಲಾನು ಯಡೂರಪ್ನೇ ಏಳಿರದು, ಅದ ನಾನೊಂದ್ಸತಿ ಏಳ್ತಾ ಇದ್ದೀನಿ ಅಷ್ಟೆಯ.

ಅದ್ಯಾಕೆ ಅಂಗೆ ದೆವ್ವ ಬಂದಂಗೆ ಮಾತಾಡ್ತನೆ? ತಲೆ ಗಿಲೆ ಕೆಟ್ಟಿದ್ದತೆ ಅವುಂಗೆ?

ಅದಿಕಾರ ಅನ್ನದು ಓಯ್ತದೆ ಅಂದ್ರೆ ದೆವ್ವನೂ ಬತ್ತದೆ, ದೇವ್ರೂ ಮೈಮ್ಯಾಲೆ ಬತ್ತದೆ

ಅದ್ಸರಿ, ಯಾರ್ ಜಲ್ಮ ಜಾಲಾಡ್ತನಂತೆ? ಈಗ್ಲೇ ನೀರಿಲ್ದಂಗಾಗ್ಯದೆ, ನೀರೆಲ್ಲಿ ತತ್ತನಂತೆ?

ಇನ್ಯಾರು? ಕಾಂಗ್ರೇಸು, ಜಂತಾದಳದವ್ರ ಜಲ್ಮ ಜಾಲಾಡ್ತಿನಿ ಅಂದವ್ನೆ. ಅದ್ಕೆ ನೀರ್ ಬೇಕಾಗಿಲ್ಲ. ಅದೇಳಕೆ ಯಡೂರಪ್ಪುಂಗೆ ಸಲ್ಪ ಕುಡ್ಯಕೆ ನೀರ್ ಬೇಕು ಅಷ್ಟೆಯ!

ಅವುಂಗೇನು, ನೀರು ಸಿಕ್ತದೆ, ಇನ್ನೊಂದೂ ಸಿಕ್ತದೆ, ನಮ್ಮಂತರ್ಗೆಯ ಏನೂ ಸಿಗದಿಲ್ಲ.

ಜಲ್ಮ ಜಾಲಾಡದೂ ಮುಖ್ಯ ಮಂತ್ರಿ ಕ್ಯಲುಸ್ವೆ? ಅದ್ಕೆ ಆಳು ಕಾಳಿಲ್ವೆ?

ಅದ್ಕೆ ಅಂತಲೆ ವಬ್ಬುನ್ನ ಮಡಿಕ್ಯಂಡವ್ನೆ, ಅವ್ನೆಸ್ರು ಪುಡ್ಸಾಮಿ ಅಂತವ. ಯಡೂರಪ್ಪ ಚೂ ಲಗ ಅಂದ್ರೆ ಸಾಕು, ಕಯ ಕಯ ಅಂತ ಓಗಿ ಯಾರ್ ಮ್ಯಾಲೆ ಬೇಕೊ ಅವ್ರ್ ಮ್ಯಾಲೆ ಬೀಳ್ತನೆ. ಅವ್ನೂ ಸಾಕಾಗದಿಲ್ಲ ಅಂತ ಈಗ ಯಡೂರಪ್ನೇ ಆ ಕ್ಯಲ್ಸಕೆ ನಿಂತವ್ನೆ.

ವಿರೋದ್ ಪಕ್ಷದವ್ರು ಏನಾರ ಏಳ್ಳಿ, ನಾನಂತನಲ್ಲ ಅಂದ್ಬುಟು ಸುಮ್ನೆ ಕ್ಯಲ್ಸ ಮಾಡ್ಕಂಡೋಗದ್ಬುಟ್ಟು ಅದ್ ಜಾಲಾಡ್ತಿನಿ, ಇದ್ ಜಾಲಾಡ್ತಿನಿ ಅಂದ್ರೆ ಯಾರೂ ನಗದಿಲ್ವೆ?

ನಗದೇನು, ಈಗ ಜನ ನಗಾಡೋ ಪೋಗ್ರಾಂ ಬುಟ್ಟು ಯಡೂರಪ್ಪುನ್ ನೋಡಿದ್ರೆ ಸಾಕು ನಗ ಬತ್ತದೆ ಅಂತ ಅವ್ರೆ!

ಅಂಗಾರೆ ಬುಡು, ಅದಿಕಾರ ಓದ್ ಮ್ಯಾಲೆ ಸಿನಿಮಾದಲ್ಲಿ ಕ್ಯಲ್ಸ ಸಿಗ್ಬೌದು

ಅದ್ಸರಿ, ಇವ್ನ ಜಾಲಾಡ್ತಿನಿ ಅಂದಾಗ ಕಾಂಗ್ರೇಸ್‌ನವ್ರು ಏನಂದ್ರಂತೆ?

ಅವ್ರು ಯಡೂರಪ್ಪಂಗೆ ರಾಜ ಅಂತ ಬಿರುದು ಕೊಟ್ಟವ್ರೆ

ಅಲ್ಲ ಅವ್ರೂ ತಿರಿಕ್ಯಂಡ್ ಬಯ್ಯದ್ ಬುಟ್ಟು ರಾಜ ಅಂತವ ಬಿರುದ್ ಕೊಟ್ಟವ್ರೆ ಅಂದ್ರೆ ಅವ್ರಿಗೂ ಸ್ವಾಮಿಗಳ್ಗೆ ಕೊಟ್ಟಂಗೆ ದುಡ್ ಗಿಡ್ ಕೊಟ್ಟಿರ್ಬೌದು.

ರಾಜ ಅಂದ್ರೆ ಮಾರಾಜ ಅಲ್ಲ ಕಣಣ್ಣ, ಸೋಬ್ರಾಜ ಅನ್ನ ಬಿರುದು ಕೊಟ್ಟವ್ರೆ, ಸೋಬ್ರಾಜ ಅಂದ್ರೆ ದ್ವಡ್ ಕಿಲಾಡಿ. ಅವುನ್ನ ಯಾವ್ ಜೈಲಲಿ ಕೂಡಾಕಿದ್ರೂ ತಪ್ಪಿಸ್ಕತನೆ, ಅದೆಸ್ಟೋ ಸತಿ ತಪ್ಪಿಸ್ಕಂಡು ಈಗ ಸದ್ದಿಕೆ ನೇಪಾಳ್ದಲಿ ಅವ್ನಂತೆ, ಯಡೂರಪ್ನೂ ಇಷ್ಟೆಲ್ಲ ತಿಂದ್ರೂ ಜೈಲಿಗೋಗಿಲ್ವಲ, ಅದ್ಕೆ ಕಾಂಗ್ರೇಸ್ನವ್ರು ನೀನು ಸೋಬ್ರಾಜಂಗೆ ಸಮ ಕಣಪ್ಪ ಅಂದವ್ರೆ.

ಅದ್ಕೆ ಯಡೂರಪ್ಪ ಏನಂದ್ನಂತೆ?

ಅವ್ನ ಇನ್ನು ಏನೂ ಏಳಿಲ್ಲ. ಏಳಿದ್ರೆ ನಾನು ಸೋಬ್ರಾಜರಪ್ಪ ಇದ್ದಂಗೆ, ಅವುಂಗ್ಯಾಕೆ ನನ್ನ ಓಲುಸ್ತಿರಿ ಅಂದ್ರೂ ಅನ್ ಬೌದು.

ಓಗ್ಲಿ ಜಲ್ಮ ಜಾಲಾಡ್ತಿನಿ ಅಂದವುನಲ್ಲ, ಅದ್ನಾರು ಮಾಡಿದ್ರಾಗದಪ್ಪ, ಬರೀ ಏಳಿದ್ರೆ ಏನ್ ಉಪ್ಯೋಗ?

ಅಂಗಂದವ್ನೆ, ಇನ್ನೊಂದಿನ ಇನ್ನೊಂದ್ ಏಳ್ತನೆ. ಅಂಗು ಇಂಗು ಕಾಲ ಕಳ್ದು ಗಂಟ್ ಮಾಡ್ಕಂಡು ಮನಿಗೋಯ್ತನೆ.

ಗಂಟ್ ವಡುದ್ ಮ್ಯಾಲೆ ಮನಿಗೇ ಓಯ್ತನೆ ಅಂತ ಯಾವ್ ಗ್ಯಾರಂಟಿ? ರಾಜುಂತರ ಜೈಲಿಗೋಗ್ ಬೌದಪ್ಪ!

ಇದೇನಣ್ಣ, ರಾಜ-ಜೈಲು ಅನ್ನದ ಬುಡದೇ ಇಲ್ವಲ? ಇವುನ್ಯಾವ್ ರಾಜ?

ಅದೇ ಡೆಲ್ಲಿಲಿ ಟಿಲಿಪೋನ್ ಮಂತ್ರಿ ಆಗಿದ್ನಲ ಆ ರಾಜ, ಅವ್ನೂ ಚನ್ನಾಗಿ ಗಂಟ್ ಮಾಡಿ ಸಿಗಾಯ್ಕಂಡು ಈಗ ಡೆಲ್ಲಿ ಜೈಲಲಿದ್ದನಂತೆ, ಅಂಗೆಯ ಯಡೂರಪ್ನೂ ವಳ್ಳೆ ಜೈಲಿಗೋಗ್ಬೌದಪ್ಪ.

ಓಗ್ಲಿ ಬುಡು, ಅಲ್ಲೂ ಇಂತರ್ಯಲ್ಲ ಸೇರ್ಕಂಡು ಕ್ವನೆ ಪಕ್ಷ ಕ್ವಳೆ ಬಟ್ಟೆನಾದ್ರು ಜಾಲಾಡ್ಲಿ!!!

ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಶೇ. 30 ರಷ್ಟು ಮೀಸಲಿಡಲು

ಎಸ್‌ಎಫ್‌ಐ ವಿಧಾನಸೌಧ ಚಲೋ

ರಾಜ್ಯದ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ವಿದ್ಯಾರ್ಥಿ-ಶಿಕ್ಷಕ ಸಮುದಾಯ ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಬಿ.ಜೆ.ಪಿ. ಸರ್ಕಾರ ತನ್ನ ಬಜೆಟ್‌ನಲ್ಲಿ 30ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳ ಬೃಹತ್ ವಿಧಾನ ಸೌಧ ಚಲೋ ಕಾರ್ಯಕ್ರಮ ಫೆಬ್ರವರಿ-10-2011ರಂದು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯಿತು.

ವಿವಿಧ ಜಿಲ್ಲೆಗಳಿಂದ ಆಗಮಿಸಿದ ವಿದ್ಯಾರ್ಥಿಗಳು ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಘೋಷಣೆಗಳುಳ್ಳ ಎಸ್.ಎಫ್.ಐನ ಶ್ವೇತ ಪತಾಕೆ ಹಿಡಿದು ರಾಜ್ಯ ಬಿ.ಜೆ.ಪಿ. ಸರ್ಕಾರದ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ನಗರ ಚಿಕ್ಕಲಾಲ್‌ಬಾಗ್‌ನಿಂದ ಹೊರಟರು. ಪ್ರತಿಭಟನಾ ಮೆರವಣಿಗೆ ವಿಧಾನ ಸೌಧದತ್ತ ಹೆಜ್ಜೆ ಹಾಕಿತು. ಶಾಲಾ-ಕಾಲೇಜು-ಹಾಸ್ಟೇಲ್ ಹಾಗೂ ವಿಶ್ವ ವಿದ್ಯಾಲಯಗಳಲ್ಲಿ ಸೌಲಭ್ಯ ವಂಚಿತರಾಗಿ, ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿ ಪರಿಣಾಮವಾಗಿ ಗಂಭೀರ ಸಮಸ್ಯೆ ಅನುಭವಿಸುತ್ತಿರುವ ವಿದ್ಯಾರ್ಥಿಗಳು ಕೂಗುತ್ತಿದ್ದ ಘೋಷಣೆಗಳು ಪ್ರತಿನಿತ್ಯ ತಾವು ಅನುಭವಿಸುತ್ತಿರುವ ಸಮಸ್ಯೆಗಳ ಪ್ರತಿಧ್ವನಿಯಾಗಿದ್ದವು.

ಪ್ರತಿಭಟನಾ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನವನದ ಹತ್ತಿರ ಸಮಾವೇಶಗೊಂಡಿತು. ಪ್ರಾಸ್ತವಿಕವಾಗಿ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಕಾಂ|| ಅನಂತನಾಯ್ಕ್ ಮಾತನಾಡಿದರು, ಹೋರಾಟವನ್ನು ಬೆಂಬಲಿಸಿ ಮಾಜಿ ಶಾಸಕರಾದ ಜಿ. ವಿ. ಶ್ರೀರಾಮರೆಡ್ಡಿರವರು ಮಾತನಾಡುತ್ತಾ ಸ್ವಾತಂತ್ರ್ಯ ಪಡೆದು 62 ವರ್ಷಗಳಾದರೂ ಎಲ್ಲಾರಿಗೂ ಶಿಕ್ಷಣ ನೀಡುವಲ್ಲಿ ನಮ್ಮನಾಳುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಫಲವಾಗಿವೆ. ಸ್ವತಂತ್ರ? ಭಾರತದಲ್ಲಿ ಶಿಕ್ಷಣದ ಪರಿಸ್ಥಿತಿಯನ್ನು ಸುಧಾರಿಸಿ ಅಭಿವೃದ್ಧಿ ಪಡಿಸಲು ಶಿಕ್ಷಣ ತಜ್ಞರ 6 ಆಯೋಗಗಳು ನೀಡಿರುವ ವರದಿಯನ್ನು ಜಾರಿಗೊಳಿಸಲು ಮುಂದಾಗದೇ, ಇತ್ತಿಚೆಗೆ ಪ್ರೊ|| ಯಶ್‌ಪಾಲ್ ನೇತೃತ್ವದ ಸಮಿತಿ ನೀಡಿದ ವರದಿಯನ್ನು ತಕ್ಷಣ ಜಾರಿಗೊಳಿಸಲು ಮುಂದಾಗಿರುವ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಎಷ್ಟು ವೇಗವಾಗಿ ಶಿಕ್ಷಣದ ವ್ಯಾಪಾರೀಕರಣ - ಖಾಸಗೀಕರಣ - ಕೇಂದ್ರೀಕರಣ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂಬುದು ತಿಳಿಯುತ್ತದೆ ಎಂದರು.

ನಿಷ್ಪ್ರಯೋಜಕ ಬಿ.ಜೆ.ಪಿ. ಸರ್ಕಾರ

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ. ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸುತ್ತಿದೆ. ಅಭಿವೃದ್ಧಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಬಿ.ಜೆ.ಪಿ. ರಾಜ್ಯವನ್ನು ಸಂಪೂರ್ಣವಾಗಿ ಲೂಟಿ ಹೊಡೆಯುತ್ತಿದೆ. ಶಿಕ್ಷಣ ಕೇತ್ರವನ್ನು ಸಂಪೂರ್ಣವಾಗಿ ಮಾರಾಟ ಮಾಡಲು ಹೊರಟಿದೆ. ವಿದ್ಯಾರ್ಥಿಗಳಿಗೆ ಕನಿಷ್ಠ ಮೂಲ ನೌಕರ್ಯಗಳನ್ನು ಒದಗಿಸದೇ ಖಾಸಗೀ ಶಿಕ್ಷಣ ಸಂಸ್ಥೆಗಳ ಪರ ಲಾಭಿ ನಡೆಸುತ್ತಾ ಖಾಸಗೀಕರಣ -ಕೋಮುವಾದಿಕರಣಕ್ಕೆ ಒತ್ತು ನಿಡುತ್ತಿರುವ ಬಿ.ಜೆ.ಪಿ. ಸರ್ಕಾರ ಒಂದು ನಿಷ್ಪ್ರಯೋಜಕ, ಬೇಜವಾಬ್ದಾರಿ ರಾಜ್ಯ ಸರ್ಕಾರವಾಗಿದೆ.

ಎಬಿವಿಪಿ ಸಂಘಟನೆಯು ಕೇಂದ್ರ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೊರಾಟ ಎನ್ನುವ ಸೋಗಲಾಡಿತನ ತೋರುತ್ತಾ ರಾಜ್ಯ ಬಿಜೆಪಿ ಸರ್ಕಾರದ ಪರ ಪುಂಗಿ ಊದುತ್ತಿರುವಾಗ ಎಸ್‌ಎಫ್‌ಐ ಸಂಘಟನೆಯು ಶಿಕ್ಷಣ ಕ್ಷೇತ್ರದ ಜ್ವಲಂತ ಪ್ರಶ್ನೆಗಳನ್ನೆತ್ತಿ ಹೋರಾಟ ನಡೆಸಿದೆ.



ಇಡೀ ರಾಜ್ಯದ ಜನತೆ ಮತ್ತು ವಿದ್ಯಾರ್ಥಿಗಳು ಸಮಸ್ಯೆಗಳಲ್ಲಿ ಸಿಲುಕಿರುವಾಗ ಅವುಗಳ ಪರಿಹಾರಕ್ಕೆ ಮುಂದಾಗದೇ ನನಗೆ ಜೀವ ಬೇದರಿಕೆ ಇದೆ ಎಂದು ಹೇಳುವ ಹೇಡಿ ಮುಖ್ಯಮಂತ್ರಿ ಯಡಿಯೂರಪ್ಪ. ರಾಜ್ಯದಲ್ಲಿ ಮುಖ್ಯಮಂತ್ರಿಯಾದ ತನಗೇ ಭದ್ರತೆ ಇಲ್ಲ ಎಂದಾದರೆ ರಾಜ್ಯದ ಜನತೆಗೆ ಮತ್ತು ಕಾಲೇಜು ಹಾಗೂ ಹಾಸ್ಟೇಲ್‌ಗಳಲ್ಲಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಯಾವ ಭದ್ರತೆ ಒದಗಿಸಲು ಸಾಧ್ಯ? ಆದ್ದರಿಂದ ಇಂತಹ ನಿಷ್ಪ್ರಯೋಜಕ, ಹೇಡಿ ಮುಖ್ಯಮಂತ್ರಿ ಮತ್ತು ಸರ್ಕಾರದ ವಿರುದ್ಧ ವಿದ್ಯಾರ್ಥಿಗಳು ಪ್ರಬಲ ಹೋರಾಟ ರೂಪಿಸಬೇಕೆಂದು ಕರೆ ನೀಡಿದರು.

ಎಬಿವಿಪಿ ಯ ನಕಲಿ ಹೋರಾಟ

ಭ್ರಷ್ಟಾಚಾರದ ವಿರುದ್ಧ ಇಡೀ ದೇಶಾದ್ಯಂತ ಪ್ರಚಾರ ನಡೆಸುತ್ತಿರುವ ಎಬಿವಿಪಿ ಸಂಘಟನೆ ಕರ್ನಾಟಕ ಹಾಗೂ ಬಿ.ಜೆ.ಪಿ. ಆಡಳಿತ ವಿರುವ ಇತರೆ ರಾಜ್ಯಗಳಲ್ಲಿ ನಡೆದಿರುವ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತದೇ ಬಿ.ಜೆ.ಪಿ.ಯು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ನಕಲಿ ಹೋರಾಟ ನಡೆಸುತ್ತಿದೆ. ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿರುವ ಎ.ಬಿ.ವಿ.ಪಿ.ಯ ವಿರುದ್ಧ ಹಾಗೂ ಭ್ರಷ್ಟಾಚಾರದ ವಿರುದ್ಧ ಎಸ್.ಎಫ್.ಐ. ಧೃಢವಾದ ಹೋರಾಟಗಳನ್ನು ನಡೆಸಬೇಕೆಂದರು.


ವಿದ್ಯಾರ್ಥಿ-ವಿದ್ಯಾರ್ಥಿನಿಯರ ದಂಡು

ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರ ಮೂರ್ತಿಯವರು ಹೋರಾಟವನ್ನು ಬೆಂಬಲಿಸಿ ಮಾತನಾಡುತ್ತಾ ಒಂದೆಡೆ ರಾಜ್ಯ ಸರ್ಕಾರದ ವಿಪರೀತ ಶುಲ್ಕ ಏರಿಕೆಯಿಂದ ಬಡ, ದಲಿತ, ಹಿಂದುಳಿದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇನ್ನೊಂದಡೆ ಪದವಿ ಪಡೆದ ಲಕ್ಷಾಂತರ ಯುವಜನತೆಗೆ ಉದ್ಯೋಗ ನೀಡದೆ ನಿರುದ್ಯೋಗಿಗಳ ಸೈನ್ಯವನ್ನೇ ಸೃಷ್ಟಿಸುತ್ತಿದೆ. ಆದ್ದರಿಂದ ಸರ್ವರಿಗೂ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕೆಂದರು.

ನಂತರ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ|| ಕೆ.ಎಸ್. ಲಕ್ಷ್ಮಿಯವರು ಮಾತನಾಡುತ್ತಾ ರಾಜ್ಯದಲ್ಲಿ ಶಿಕ್ಷಣದಿಂದ ವಂಚಿತರಾಗಿರುವವರಲ್ಲಿ ವಿದ್ಯಾರ್ಥಿನಿಯರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಉನ್ನತ ಶಿಕ್ಷಣಕ್ಕೆ ಹೋಗುತ್ತಿರುವವರಲ್ಲಿ ವಿದ್ಯಾರ್ಥಿನಿಯರ ಪ್ರಮಾಣ ತುಂಬಾಕಡಿಮೆ ಇದೆ. ಈ ದುಸ್ಥಿತಿಗೆ ಕಾರಣವಾಗಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶುಲ್ಕ ಏರಿಕೆ ಮತ್ತು ಶಿಕ್ಷಣದ ವ್ಯಾಪರೀಕರಣ ಹಾಗೂ ತಾರತಮ್ಯ ನೀತಿಗಳ ವಿರುದ್ಧ ಬಲಿಷ್ಠ ವಿದ್ಯಾರ್ಥಿ ಚಳುವಳಿ ಕಟ್ಟಬೇಕೆಂದರು.

ಸಚಿವರ ಆಗಮನ-
ಬೇಡಿಕೆಗಳ ಈಡೇರಿಕೆಗೆ ಭರವಸೆ

ಸರ್ಕಾರದ ಪರವಾಗಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಸಚಿವರಾದ ನಾರಾಯಣಸ್ವಾಮಿಯವರು ಮನವಿ ಪತ್ರ ಸ್ವೀಕರಿಸಿ ಮಾತನಾಡುತ್ತಾ ಹಾಸ್ಟೇಲ್ ವಿದ್ಯಾರ್ಥಿಗಳ ಆಹಾರ ಭತ್ಯೆ ಹೆಚ್ಚಿಸುವ ಮತ್ತು ಹಾಸ್ಟೇಲ್‌ಗಳಿಗೆ ಮೂಲ ಸೌಕರ್ಯ ಒದಗಿಸುವ ಭರವಸೆ ನೀಡಿದರು. ಉಳಿದ ಬೇಡಿಕೆಗಳ ಕುರಿತು ಮುಖ್ಯಮಂತ್ರಿಗಳ ಜೊತೆ ಸಮಾಲೋಚಿಸಿ ಬೇಡಿಕೆಗಳ ಈಡೇರಿಕೆಗಾಗಿ ಎಸ್.ಎಫ್.ಐ. ಮುಖಂಡರನ್ನು ಆಹ್ವಾನಿಸಿ ಸಭೆ ನಡೆಸಿ ಚರ್ಚಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಎಸ್.ಎಫ್.ಐ. ರಾಜ್ಯಾಧ್ಯಕ್ಷರಾದ ಕಾಂ|| ಹೆಚ್.ಆರ್. ನವೀನ್ ಕುಮಾರ್‌ರವರು ಮಾತನಾಡಿ ಸರ್ಕಾರ ಶಿಕ್ಷಣಕ್ಕೆ ಬಜೆಟ್ ಹೆಚ್ಚಿಸುವ ಮೂಲಕ ನಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಹೋರಾಟಕ್ಕೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಎಸ್.ಎಫ್.ಐ. ರಾಜ್ಯ ಪದಾಧಿಕಾರಿಗಳಾದ ಹುಳ್ಳಿ ಉಮೇಶ್, ಪ್ರಸಾದ್, ಸೌಮ್ಯ, ಜಗದೀಶ್‌ಸೂರ್ಯ, ವಿನಯ್‌ಕುಮಾರ್. ಎಂ.ಜಿ.ನಾರಾಯಣಕಾಳೆ ಹಾಗೂ ಬೆಂಗಳೂರು ಜಿಲ್ಲಾ ಮುಖಂಡರಾದ ಚಿಕ್ಕರಾಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

– ವರದಿ : **ಹುಳ್ಳಿ ಉಮೇಶ್**

ಉನ್ನತ ಶಿಕ್ಷಣ

ಉನ್ನತದ ಶಿಕ್ಷಣವ ಬಡಜನರು ಎಲ್ಲ
ಪಡೆದಾಗ ವಂಚಿಸಲು ಸಾಧ್ಯವೇ ಇಲ್ಲ
ಹೀಗಾಗಿ ಶಾರದೆಯ ಕಡು ಲೋಭಿಗಳಿಗೆ
ಮಾರಾಟ ಮಾಡಿಹರು ಗೊತ್ತೇನು ನಿಮಗೆ
- ವಿಡಂಬಾರಿ

ದಲಿತರಿಗೆ ಶೇ. 24 ಬಜೆಟ್ ಕಾದಿರಿಸಲು ಒತ್ತಾಯ

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜನಸಂಖ್ಯೆಗನುಗುಣವಾಗಿ ರಾಜ್ಯ ಬಜೆಟ್‌ನಲ್ಲಿ ಶೇ.24 ರಷ್ಟು ದಲಿತ ಸಮುದಾಯಗಳಿಗಾಗಿ ಮೀಸಲಿಡಬೇಕು; ಎಸ್.ಟಿ. ಸಮುದಾಯಕ್ಕೆ ಶೇ.3 ರ ಬದಲು ಕೇಂದ್ರ ಸರ್ಕಾರ ನೀಡುವ ರೀತಿಯಲ್ಲಿ ಶೇ.7ರಷ್ಟು ಮೀಸಲಾತಿ ಮತ್ತು ಅನುದಾನವನ್ನು ರಾಜ್ಯ ಸರ್ಕಾರವೂ ನೀಡಬೇಕು ಹಾಗೂ ದಲಿತ ವರ್ಗಗಳ ಮತ್ತಿತರ ಬೇಡಿಕೆಗಳಿಗೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿಯಿಂದ ಫೆಬ್ರವರಿ7 ರಿಂದ 14 ರವರೆಗೆ ರಾಜ್ಯಾದ್ಯಂತ ತಾಲ್ಲೂಕು ಕೇಂದ್ರಗಳಲ್ಲಿ ಹಕ್ಕೊತ್ತಾಯ ಕಾರ್ಯಕ್ರಮದ ಭಾಗವಾಗಿ ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು, ಮೂಡಬಿದ್ರೆ ಮತ್ತು ಬೆಳ್ತಂಗಡಿಗಳಲ್ಲಿ ಪ್ರತಿಭಟನೆಗಳು ಫೆಬ್ರವರಿ 14 ರಂದು ನಡೆದವು.

ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ದಲಿತ ಹಕ್ಕುಗಳ



ಹೋರಾಟ ಸಮಿತಿಯ ಮಂಗಳೂರು ನಗರ ಸಂಚಾಲಕರಾದ ಲಿಂಗಪ್ಪ ನಂತೂರು, ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಮಾತನಾಡಿದರು. ಸಿಪಿಎಂ ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ದಲಿತ ಹಕ್ಕುಗಳ ಸಮಿತಿಯ ಯಮುನಾ ಪಚ್ಚನಾಡಿ, ಜಯಕುಮಾರ್, ಸರೋಜಮ್ಮ ಯೋಗೀಶ್ ಜಪ್ಪಿನಮೊಗರು, ನಾರಾಯಣ ತಲಪಾಡಿ, ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎಲ್.ಟಿ.ಸುವರ್ಣ ಧನ್ಯವಾದ ಅರ್ಪಿಸಿದರು.

ಬೆಳ್ತಂಗಡಿಯಲ್ಲಿ ತಾಲ್ಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮುಖಂಡ ಬಿ.ಎಂ.ಭಟ್ ತಾಲ್ಲೂಕಿನಲ್ಲಿ ಸಾವಿರಾರು ಎಕ್ರೆ ದಲಿತರಿಗಾಗಿ ಮೀಸಲಾಗಿರುವ ಭೂಮಿ ಇತರರಿಂದ ಆಕ್ರಮಣಕ್ಕೊಳಗಾಗಿದ್ದು, ಇದನ್ನು ವಶಪಡಿಸಿಕೊಂಡು ಶೀಘ್ರ ದಲಿತರಿಗೆ ಹಂಚಬೇಕು ಎಂದು ಒತ್ತಾಯಿಸಿದರು. ತಾಲ್ಲೂಕು ದಲಿತ ಹಕ್ಕುಗಳ ಹೋರಾಟ ಸಮಿತಿಯ ಅಧ್ಯಕ್ಷ ಶೇಖರ.ಎಲ್ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಬೆಳ್ತಂಗಡಿ ತಾಲ್ಲೂಕು ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ದಲಿತ ಹಕ್ಕುಗಳ ಹೋರಾಟ ಸಮಿತಿಯ ಮುಖಂಡರಾದ ವಸಂತ ನಡ, ಈಶ್ವರಿ, ಜಯರಾಮ ಮಯ್ಯ ಮೊದಲಾದವರು ವಹಿಸಿದ್ದರು.


ಮೂಡಬಿದರೆ ತಾಲ್ಲೂಕು ಕಚೇರಿಯ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದಲಿತ ಹಕ್ಕುಗಳ ಸಮಿತಿಯ ದಕ್ಷಿಣಕನ್ನಡ ಜಿಲ್ಲಾ ಸಂಚಾಲಕ ಕೃಷ್ಣಪ್ಪ ಕೊಂಚಾಡಿ, ಸಿಪಿಐ(ಎಂ) ಮೂಡಬಿದ್ರೆ ವಲಯ ಕಾರ್ಯದರ್ಶಿ ಯಾದವಶೆಟ್ಟಿ, ಮೂಡಬಿದ್ರೆ ಪುರಸಭಾ ಉಪಾಧ್ಯಕ್ಷೆ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರ ರಮಣಿ ಮಾತನಾಡಿದರು. ದಲಿತ ಹೋರಾಟ ಸಮಿತಿಯ ಶಂಕರ, ಗಿರಿಜಾ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

★

ಮಂಗಳೂರಿನಲ್ಲಿ ಗ್ರಾಮ ಪಂಚಾಯತಿ ನೌಕರರ ಪ್ರತಿಭಟನೆ

ದಕ್ಷಿಣಕನ್ನಡ ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಫೆಬ್ರವರಿ 15 ರಂದು 'ಜಿಲ್ಲಾ ಪಂಚಾಯತ್ ಚಲೋ' ಕಾರ್ಯಕ್ರಮವನ್ನು ಸಿಐಟಿಯು ನೇತೃತ್ವದ ಗ್ರಾಮ ಪಂಚಾಯತಿ ನೌಕರರ ಸಂಘ ಹಮ್ಮಿಕೊಂಡಿದ್ದು, ತಮ್ಮ ಬೇಡಿಕೆಗಳು ಈಡೇರದೇ ಇದ್ದಲ್ಲಿ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಗ್ರಾಮ ಪಂಚಾಯತಿ ನೌಕರರು ಎಚ್ಚರಿಕೆ ನೀಡುವ ಮೂಲಕ ಪ್ರತಿಭಟನೆ ನಡೆಸಿದ್ದಾರೆ.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಗ್ರಾಮ ಪಂಚಾಯತ್ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಯಾದವಶೆಟ್ಟಿ ಅವರು ಬಿಲ್ ಕಲೆಕ್ಟರುಗಳ ಭಡ್ತಿ ಪ್ರಮಾಣ ಶೇ.40 ರಿಂದ 70 ಕ್ಕೆ ಏರಿಸಿದ್ದು ಸ್ವಾಗತಾರ್ಹವಾಗಿದ್ದರೂ ಜ್ಯೇಷ್ಠತಾಪಟ್ಟಿಯನ್ನು ಪರಿಗಣಿಸಿಲ್ಲ; ಅವರಿಗೆ ಕನಿಷ್ಠ ಕೂಲಿ ಈ ಹಿಂದೆ ರೂ.5999 ನ್ನು ಮಾಸಿಕ ವೇತನವಾಗಿ ನೀಡುತ್ತಿದ್ದುದನ್ನು ಇದೀಗ ಅವರು 'ಅರೆಕುಶಲ' ಎಂದು ಪರಿಗಣಿಸಿ ಕನಿಷ್ಠ ಕೂಲಿಯಾಧಾರಿತ ವೇತನ ರೂ.4999 ನಿಗದಿಪಡಿಸಿರುವುದು ನ್ಯಾಯಸಮ್ಮತವಲ್ಲ, ಈ ಆದೇಶವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.



ವಾ. ಉ.


ಕಾನೂನುಬದ್ಧವಾಗಿ ಕಳೆದ ಏಪ್ರಿಲ್‌ನಿಂದ ಸಿಗಬೇಕಾದ ತುಟ್ಟಿಭತ್ಯೆ ಏಕಗಂಟಿನಲ್ಲಿ ನೀಡಬೇಕು; ಅಲ್ಲದೆ ಭವಿಷ್ಯನಿಧಿ, ಜನಶ್ರೀ ವಿಮಾ ಯೋಜನೆ ತತ್‌ಕ್ಷಣ ಜಾರಿಗೊಳಿಸಬೇಕು ಎಂದು ಅವರು ಒತ್ತಾಯಿಸಿದರು.

ಮಂಗಳೂರು ತಾಲ್ಲೂಕಿನ ಗ್ರಾಮ ಪಂಚಾಯತ್ ನೌಕರರ ಜಿಲ್ಲಾಸಂಘದ ಮುಖಂಡ ಲೋಕನಾಥ್ ಅವರೂ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಬಳಿಕ ಬೇಡಿಕೆಗಳ ಮನವಿಪತ್ರವನ್ನು ದಕ್ಷಿಣಕನ್ನಡ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಲೋಕನಾಥ್, ಪುತ್ತೂರಿನ ಉಸ್ಮಾನ್, ಬಂಟ್ವಾಳ ಸುರೇಶ್, ಸುಳ್ಯದ ಬಾಬು ನಾಯ್ಕ್ ಮೊದಲಾದವರು ವಹಿಸಿದ್ದರು.

★

ಸಂಗಾತಿ ಸಂಜೀವ ಈರಿ ನಿಧನ

ಮಂಗಳೂರು ಅಶೋಕ ನಗರದ ನಿವಾಸಿಯಾಗಿದ್ದ ಸಿಪಿಐ(ಎಂ) ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಾಗಿದ್ದ ಸಂಜೀವ ಈರಿ (73 ವರ್ಷ) ಅವರು ಫೆಬ್ರವರಿ 12 ರಂದು ನಿಧನರಾಗಿದ್ದು, ಅವರ ಗೌರವಾರ್ಥ 13 ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಸ್ಯಾಮುವೆಲ್ ಟೆಲ್ಲಿಸ್ ಮೊದಲಾದವರು ಭಾಗವಹಿಸಿದ್ದರು.



○

ಈ ವಾರ....

ಪುಟ 3 ರಿಂದ

ಜಾತಕ ಜಾಲಾಡುವುದಾಗಿ ಇನ್ನೂ ಅತಿಯಾಯಿತು ಎಂದು ಘರ್ಜಿಸಿದ್ದಾರೆ. ಕಾಂಗ್ರೆಸ್‌ನವರು ಇದಕ್ಕೆ ನೀಡಿದ ಪ್ರತಿಕ್ರಿಯೆ ಯಡಿಯೂರಪ್ಪನವರ ಎದುರು ತೀರಾ ಸಪ್ಪೆಯೇ!

ಯಡಿಯೂರಪ್ಪನವರು ಜನ್ಮ ಜಾಲಾಡಬೇಕೆಂದಿರುವುದು ರಾಜ್ಯದಿಂದ ಕೇಂದ್ರದವರೆಗೂ ! ಡೀ ನೋಟಿಫಿಕೇಶನ್, ಅಕ್ರಮ ಭೂಮಿ ಹೊಂದಿರುವುದು ಇತ್ಯಾದಿಗಳ ಕುರಿತು. ಭೂ ಹಗರಣಗಳಲ್ಲಿ ರಾಜ್ಯದ ನಾಯಕರಾದ ಡಿ.ಕೆ.ಶಿ, ಎಸ್.ಎಂ.ಕೃಷ್ಣ, ಆರ್.ವಿ. ದೇಶಪಾಂಡೆ ಮುಂತಾದವರ ಜಾತಕ ತಮ್ಮಬಳಿ ಇದೆಯೆಂಬುದು ಸಿ.ಎಂ. ನುಡಿ. ಹೀಗಿರುವಾಗ ಮಾತನಾಡುವ ಕಾಂಗ್ರೆಸ್ಸಿಗರಿಗೆ 'ಗಾಜಿನ ಮನೆಯಲ್ಲಿ' ನಿಂತಿದ್ದೀರಿ ಎಂಬ ಪರೋಕ್ಷ ಬೆದರಿಕೆ. ಇನ್ನು ಕೇಂದ್ರ ಮಟ್ಟದಲ್ಲಿನ ಕಾಂಗ್ರೆಸ್ ನೇತ್ರತ್ವದ ಯು.ಪಿ.ಎ 2 ಸರ್ಕಾರದ 2 ಜಿ ಸ್ಪೆಕ್ಟ್ರಂ, ಎಸ್.ಬ್ಯಾಂಡ್, ಆದರ್ಶ ಗೇಮ್ಸ್ ಹಗರಣಗಳ ಬಗ್ಗೆ ಹೆಚ್ಚಿಗೆ ಹೇಳುವಂತಿಲ್ಲ. ಅವರೇ ಕೊನೆಗೂ ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದು 2 ಜಿ ಬಗ್ಗೆ ಜಂಟಿ ಸಂಸದೀಯ ಸಮಿತಿ ರಚಿಸುವುದಾಗಿ ಪ್ರಕಟಿಸಿದ್ದಾರೆ. ಹಾಗಾಗಿಯೇ ಕಾಂಗ್ರೆಸ್, ಬಿಜೆಪಿಯವರ ಆರೋಪ, ಪ್ರತ್ಯಾರೋಪಗಳು ನೈತಿಕತೆ, ಪ್ರಾಮಾಣಿಕತೆ ಬಲವಿಲ್ಲದೆ ಗಾಳಿ ಗುಂಡುಗಳಾಗುತ್ತಿವೆ. 'ನೀ ನನಗಿದ್ದರೆ ನಾ ನಿನಗೆ' ಎಂಬ ಮಾತಿನ ಹೊದಿಕೆಯಲ್ಲಿ ಜನರ ಕಣ್ಣಿಗೆ ಮಣ್ಣೆರಚಲಾಗುತ್ತಿದೆ.

★★★

ಬಲೆಗೆ ಬಿದ್ದವರ ಮಧುಚಂದ್ರದ ಮುಖಭಂಗಗಳು

ಬೆಂಗಳೂರಿನಲ್ಲಿ ಜಗಳ ಮೈಸೂರಿನಲ್ಲಿ ಮಧುಚಂದ್ರ ಎಂದು ಬಣ್ಣಿಸಿದ ಕಾಂಗ್ರೆಸ್ ಹಾಲಿ ಸಂಸದ ಹೆಚ್.ವಿಶ್ವನಾಥ್ ಹೇಳುತ್ತಿದ್ದುದು ಮೈಸೂರಿನ ಜಿಲ್ಲಾ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಜೆಡಿ(ಎಸ್) ಮತ್ತು ಬಿಜೆಪಿ ದಿಢೀರನೆ ಮಾಡಿಕೊಂಡ ಮೈತ್ರಿಯ ಬಗ್ಗೆ. ಆದರೆ ಅವರು ಒಂದನ್ನು ಮರೆತಿದ್ದರು ಅಥವಾ ಮರೆಸುತ್ತಿದ್ದರು. ಇಲ್ಲಿ ಸೆಕ್ಯುಲಾರಿಸಂ ಪ್ರತಿಪಾದಿಸುತ್ತಿದ್ದ ಕಾಂಗ್ರೆಸ್ ಕೊಪ್ಪಳದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಅಧಿಕಾರ ಗಿಟ್ಟಿಸಿತ್ತು. ಹೀಗಿದ್ದ ಎರಡೂ ಪಕ್ಷಗಳೂ ಪರಸ್ಪರರನ್ನು ದೂಷಿಸುತ್ತಿದ್ದುದು ವಿಚಿತ್ರವೇ ಆಗಿದೆ.

ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದೇ ಅತಂತ್ರ ಸ್ಥಿತಿ ಇದ್ದುದರಿಂದ ಮೈತ್ರಿಯೊಂದು ಮಾಡಿಕೊಳ್ಳುವುದು ಅನಿವಾರ್ಯವಿತ್ತು. ಅದೂ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಬೇಕೆಂದೇ ಹೇಳುತ್ತಿದ್ದ ಜೆಡಿ(ಎಸ್), ಕಾಂಗ್ರೆಸ್ ಪಕ್ಷಗಳಲ್ಲಿ. ಆದರೆ ಕಾಂಗ್ರೆಸ್‌ಗಿಂತ ಕಡಿಮೆ ಸ್ಥಾನ ಪಡೆದಿದ್ದ ಜೆಡಿ(ಎಸ್)ನಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಮಾತ್ರ ಮೀಸಲಾತಿ ಅನುಗುಣ ಅಭ್ಯರ್ಥಿ ಇರಲಿಲ್ಲ. ಹೀಗಾಗಿ 20 ತಿಂಗಳು ಅಧ್ಯಕ್ಷ ಸ್ಥಾನದಲ್ಲಿದ್ದ ಮತ್ತೆ ಕಾಂಗ್ರೆಸ್‌ನ್ನು ಬೆಂಬಲಿಸುವುದಾಗಿ ಜೆಡಿ(ಎಸ್) ಹೇಳಿತ್ತು. ಅಧ್ಯಕ್ಷ ಸ್ಥಾನ ತನಗೆ ಬೇಕು ಎಂಬುದು ಕಾಂಗ್ರೆಸ್ ವಾದ. ಹೇಗೂ ಜೆಡಿ(ಎಸ್), ಬಿಜೆಪಿ ಮುಖಾಮುಖಿಯಾಗಿ ಕದನಕ್ಕಿಳಿದಿವೆ. ಜೆಡಿ(ಎಸ್) ನಂತಹ ಮೂರನೆಯ ಶಕ್ತಿ ವಿರುದ್ಧ ಅಂದರೆ ಮನೋಭಾವ ಗೊತ್ತೇ ಇದೆ. 'ಸೆಕ್ಯುಲಾರಿಸಂ' ಎತ್ತಿ ಹಿಡಿಯಲಾದರೂ ಬೇರೆ ದಾರಿಯಿಲ್ಲದೇ ಅನಿವಾರ್ಯವಾಗಿ ಜೆಡಿ(ಎಸ್) ಕಾಂಗ್ರೆಸ್‌ಗೆ ಬೆಂಬಲಿಸಬೇಕಾಗುವುದು ಎಂಬುದು ಅದರ ಲೆಕ್ಕಾಚಾರ. ಆದರೆ ಇದನ್ನೊಪ್ಪದ ಜೆಡಿ(ಎಸ್) ಕೊನೆಗೆ ಒಪ್ಪಂದಕ್ಕೆ ಬಂದದ್ದು ಬಿಜೆಪಿ ಜೊತೆ. ಇಂತಹುದೇ ಪ್ರಸಂಗ ಕಾಂಗ್ರೆಸ್ ಬಿಜೆಪಿ ನಡುವೆ ಕೊಪ್ಪಳದಲ್ಲಿಯೂ ನಡೆದಿದೆ.

ಅಂತೂ ಮೀಸಲಾತಿ ನಿಗದಿಯಲ್ಲಿ ಬಿಜೆಪಿ ನಡೆಸಿದ ಕುತಂತ್ರಕ್ಕೆ ಬೀಸಿದ ಎರಡೂ ಪಕ್ಷಗಳೂ ಬಲೆಗೆ ಬಿದ್ದವು.

ಇಲ್ಲಿ ಕೋಮುವಾದ, ಜಾತ್ಯಾತೀತವಾದ ಮತ್ತು ಭ್ರಷ್ಟಾಚಾರಗಳ ವಿರುದ್ಧದ ಹೋರಾಟ ಎಲ್ಲಿ ಹೋದವು. ಅಂತಿಮವಾಗಿ ಅಧಿಕಾರಕ್ಕಾಗಿ ಯಾರು ಯಾರೊಂದಿಗೂ ಕೈಜೋಡಿಸಿ 'ಮಧುಚಂದ್ರ' ಮಾಡಬಹುದು ಎಂಬ ಸಂದರ್ಭಸಾಧಕ ರಾಜಕೀಯಕ್ಕೆ ಮೇಲುಗೈ ಪಡೆಯಿತು. ಇದನ್ನೇ ಅವಕಾಶವಾದಿ ರಾಜಕಾರಣ ಎನ್ನುವುದು.

○

ಜನಶಕ್ತಿ
ಕನ್ನಡ ವಾರಪತ್ರಿಕೆ

ಭೂ ಹಗರಣ ಖ್ಯಾತಿಯ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಭ್ರಷ್ಟಾಚಾರವೆಂಬ ಕಿರೀಟಕ್ಕೆ ಮತ್ತೊಂದು ಗರಿಯಾಗಿ ಸೇರ್ಪಡೆಯಾಗಿದೆ. ಹಗರಿಬೊಮ್ಮನಹಳ್ಳಿ ಬಿಜೆಪಿ ಶಾಸಕ ನೇಮರಾಜ್ ನಾಯ್ಕ ಮುಖ್ಯಮಂತ್ರಿ ಪರಿಹಾರ ನಿಧಿಗೆ ಬರೋಬ್ಬರಿ 60 ಲಕ್ಷ ಕನ್ನ ಹಾಕಿ ಕೊರೆದ 'ಕೀರ್ತಿ'ಗೆ ಪಾತ್ರರಾಗಿದ್ದಾರೆ. ಬಳ್ಳಾರಿ ಜಿಲ್ಲೆಯಾದ್ಯಂತ ಈ ಹಗರಣ ಗುಲ್ಲಾದದ್ದು, ಕೊಟ್ಟೂರಿನ ದಿನಪತ್ರಿಕೆಯೊಂದರ ವರದಿಗಾರ ಸ್ಫೋಟಿಸಿದ ಒಂದು ಚಿಕ್ಕ ವರದಿಯಿಂದ.

ಮುಖ್ಯಮಂತ್ರಿ ಪರಿಹಾರ ನಿಧಿಗೆ 60ಲಕ್ಷ ರೂಪಾಯಿ ಕನ್ನ ಹಾಕಿದ ಬಿಜೆಪಿ ಶಾಸಕ


ಸುರೇಶ್ ಕುಷ್ಟಗಿ

ಕಳೆದ ಕೆಲ ತಿಂಗಳ ಹಿಂದೆ, ಕೊಟ್ಟೂರಿನ, ಕುಂಬಾರ ಮಹೇಶ್ ಎನ್ನುವ ಲಾರಿ ಡ್ರೈವರ್‌ಗೆ ಶಾಸಕ ನೇಮರಾಜ್ ನಾಯ್ಕ, 40 ಸಾವಿರ ರೂಗಳ ಚೆಕ್ಕನ್ನು ಸಾರ್ವಜನಿಕವಾಗಿ (ಕರುಳಿನ ಕ್ಯಾನ್ಸರ್ ಚಿಕಿತ್ಸೆಗಾಗಿ) ವಿತರಣೆ ಮಾಡಿದ್ದರು, ಫಲಾನುಭವಿಯ ಫೋಟೋ ಸಮೇತ ವರದಿ ಪ್ರಕಟವಾದದ್ದೇ ತಡ ಫಲಾನುಭವಿ ಡ್ರೈವರ್ ಕುಂಬಾರ ಮಹೇಶ್, ಪತ್ರಿಕಾ ವರದಿಗಾರನೊಂದಿಗೆ, ನನಗೆ ಕ್ಯಾನ್ಸರ್ ಎಂದು ಬರೆದಿದ್ದಿರಾ? ನನಗೆಲ್ಲಿದೆ ಕ್ಯಾನ್ಸರ್ ರೋಗ ಎಂದು ರಗಳೆ ಕಾಯ್ದ. ಈ ವಿಷಯವನ್ನು ಕೆದಕುತ್ತಾ ಹೊರಟ ಸ್ಥಳೀಯರಿಗೆ, ಶಾಸಕರಿಂದ ದೊರೆತದ್ದು, ಉಡಾಫೆಯ ಉತ್ತರ, ಹೊಟ್ಟೆ ನೋವಿಗೆ ಅಂತ ವೈದ್ಯರ ಬಳಿ ಹೋದವಗೆ, ಕ್ಯಾನ್ಸರ್ ಎಂದು ವರದಿ ನೀಡಿದ್ದಾರೆ. ಅಂದಿನ ತುಟ್ಟಿ ಕಾಲ್ದಾಗೆ 40 ಸಾವಿರ ಜ್ವರ ನೆಗಡಿಗೆ ಮೆಡಿಕಲ್ ಬಿಲ್ ಆಗ್ತಾವ್ ಬಡ ಲಾರಿ ಡ್ರೈವರ್ ಸರ್ಕಾರಿ ರೊಕ್ಕ ತಿಂದ್ರ ತಿನ್ಲಿ ಬಿಡ್ರಿ' ಎಂಬ ಪುಕ್ಕಟೆ ಉದಾರತೆ ಬೇರೆ.

ಪ್ರಕರಣದ ಬಗ್ಗೆ ಕೆದಕಿದ ಸ್ಥಳೀಯರಾರೋ ಮುಖ್ಯಮಂತ್ರಿ ಕಛೇರಿಗೆ ಮೂಕರ್ಜಿ ಸಲ್ಲಿಸಿದ್ದಾರೆ. ಪ್ರಕರಣದ ಕುರಿತು ಆಂತರಿಕ ವಿಚಾರಣೆ ನಡೆಸಿದ ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಗೆ ರಾಜ್ಯದಲ್ಲಿಯೇ ಅತಿ ಹೆಚ್ಚು ಪರಿಹಾರ ಪಡೆದ 'ಕೀರ್ತಿ'ಗೆ ಹಗರಿಬೊಮ್ಮನಹಳ್ಳಿ ಕ್ಷೇತ್ರ ಪಾತ್ರವಾಗಿರುವುದು ಮಾತ್ರವಲ್ಲ, ಶಾಸಕರ ಶಿಫಾರಸ್ಸಿನ ಮೇರೆಗೆ ಸಾವಿರದ ಇನ್ನೂರ (1,200) ಕ್ಕೂ ಹೆಚ್ಚಿನ ಅರ್ಜಿದಾರರಿಗೆ ಕ್ಯಾನ್ಸರ್, ಕಿಡ್ನಿ ವಿಫಲತೆ ಮತ್ತು ಹೃದಯ ಸಂಬಂಧಿ ಖಾಯಿಲೆ ಚಿಕಿತ್ಸೆ ಖರ್ಚಿಗಾಗಿ, ಬಹುತೇಕ ಒಬ್ಬರೇ ವೈದ್ಯರ ಶಿಫಾರಸ್ಸಿನ ಮೇರೆಗೆ ಕ್ಷೇತ್ರದ ಕೆಲವೇ ಮೆಡಿಕಲ್ ಶಾಪುಗಳ ಬಿಲ್‌ಗಳನ್ನು ಲಗತ್ತಿಸಿರುವುದು ಪತ್ತೆಯಾಗಿದೆ.

ತನಿಖೆ

ಇಡೀ ಪ್ರಕರಣದ ವಿಚಾರಣೆಗಾಗಿ, ಮುಖ್ಯಮಂತ್ರಿಗಳ ಸಚಿವಾಲಯದ ಜೋಷಿ ಎಂಬ ಹಿರಿಯ ಅಧಿಕಾರಿಯ ಜೊತೆಗೆ ಪರಿಹಾರ ನಿಧಿ ವಿಭಾಗದ ಸಹಾಯಕ ನಿಯಂತ್ರಣಾಧಿಕಾರಿ ಕೆ.ಮಾಧವರಾವ್ ತಂಡವನ್ನು ತನಿಖೆಗೆ ನಿಯಮಿಸಲಾಗಿದೆ. ಸದರಿ ಅಧಿಕಾರಿಗಳಿಬ್ಬರ ತಂಡ ಸ್ಥಳೀಯ ಅಧಿಕಾರಿಗಳ ಜೊತೆಗೆ ಕ್ಷೇತ್ರದ ಕೊಟ್ಟೂರು ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಾದ, ಗಾಜಾಪುರ, ಧೂಪದಹಳ್ಳಿ, ಧೂಪದಹಳ್ಳಿ ತಾಂಡ ಹಾಳ್ಯಾಳ ಮತ್ತು ಕಂದಗಲ್ ಗ್ರಾಮಗಳಿಗೆ ಭೇಟಿ ನೀಡಿ, ವಿವಿಧ ಅರ್ಜಿದಾರ ಫಲಾನುಭವಿಗಳನ್ನು ಗ್ರಾಮಸ್ಥರ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಗಿದೆ. ಅರ್ಜಿದಾರ ಫಲಾನುಭವಿಗಳಿಗಾರಿಗೂ ಕ್ಯಾನ್ಸರ್, ಕಿಡ್ನಿ ವೈಫಲ್ಯ ಹಾಗೂ ಹೃದಯ ಸಂಬಂಧಿ ಖಾಯಿಲೆಗಳು ಇಲ್ಲವೆಂಬ ಅಂಶ ಬೆಳಕಿಗೆ ಬಂದಿದ್ದಲ್ಲದೇ ಸ್ವತಃ ರೋಗಿಗಳಿಗೂ ತಮಗಿಲ್ಲದ ಖಾಯಿಲೆ ಹೆಸರಿನಲ್ಲಿ ಸಾವಿರಾರು ರೂ.ಗಳ ಪರಿಹಾರಕ್ಕೆ ಅರ್ಜಿ ಸಲ್ಲಿಕೆಯಾದ ವಿಷಯ ತಿಳಿದಿಲ್ಲವೆಂಬ ಅಂಶ ಬಯಲಾಗಿದೆ ಮಾತ್ರವಲ್ಲ. ಅಮಾಯಕ ಗ್ರಾಮಸ್ಥರ ಹೆಸರುಗಳನ್ನು ಬಳಸಿಕೊಂಡ ಶಾಸಕರ ಆಪ್ತ ಸಹಾಯಕರು ಹಾಗೂ ಖಾಸಗಿ ವೈದ್ಯರು ಹಾಗೂ ಮೆಡಿಕಲ್ ಶಾಪ್ ಮಾಲೀಕರ ದುಷ್ಟಕೂಟ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಶಾಸಕರ ಅಧೀಕೃತ



ಶಿಫಾರಸ್ಸು ಪತ್ರದೊಂದಿಗೆ ಮುಖ್ಯಮಂತ್ರಿಗಳ ಸಚಿವಾಲಯಕ್ಕೆ ಸಲ್ಲಿಸಿದ ಅಂಶ ಬೆಳಕಿಗೆ ಬಂದಿದೆ. ಜೊತೆಗೆ ವಿಚಾರಣೆಯ ಹಂತದಲ್ಲಿ ವಿಚಾರಣಾಧಿಕಾರಿಗಳಿಗೆ ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟಿರುವ ಕೊಟ್ಟೂರಿನ ಬಿ.ಎ.ಎಂ.ಎಸ್. ಪದವೀಧರ ಖಾಸಗಿ ಆರ್.ಎಂ.ಪಿ. ವೈದ್ಯ ಡಾ|| ಜಗದೀಶ್‌ನಿಂದ ದೃಢಪಟ್ಟಿದೆ ಎಂದು ತನಿಖಾಧಿಕಾರಿಗಳಾದ ಜೋಷಿ ಹಾಗೂ ಮಾಧವರಾವ್ ಬಳ್ಳಾರಿಯಲ್ಲಿ ಮಾಧ್ಯಮದವರ ಮುಂದೆ ಬಾಯ್ಬಿಟ್ಟಿದ್ದಾರೆ.

ಪ್ರಕರಣದ ಸೂತ್ರಧಾರಿಗಳು

ಸರ್ಕಾರದಿಂದ ಶಾಸಕರ ಆಪ್ತಕಾರ್ಯದರ್ಶಿಯೆಂದು ಹೇಳಿಕೊಳ್ಳುತ್ತಿರುವ ಪಿ.ಡಿ.ಒ. ಸುಹಾಸ್ ಜಾಧವ್ ಹಾಗೂ ದಿನಗೂಲಿ ನೌಕರ ಗೋವಿಂದ ಕುಲಕರ್ಣಿ ಹಾಗೂ ಕೊಟ್ಟೂರಿನ ಖಾಸಗಿ ವೈದ್ಯ ಡಾ|| ಜಗದೀಶ್ ಹಾಗೂ ಸ್ವತಃ ಶಾಸಕ ನೇಮರಾಜ್ ನಾಯ್ಕ ನೇತೃತ್ವದ ತಂಡ ಇಡೀ ಪ್ರಕರಣದ ಸೂತ್ರಧಾರಿಗಳೆಂದು, ವಿಚಾರಣೆಯ ಹಂತದಲ್ಲಿ ಬಹಿರಂಗಗೊಂಡಿದೆ ಎನ್ನಲಾಗಿದ್ದು. ಸದರಿ ಖಾಸಗಿ ವೈದ್ಯ ಡಾ|| ಜಗದೀಶ್, ಕೆಲಕಾಲ ದಾವಣಗೆರೆಯ ಖಾಸಗಿ ನರ್ಸಿಂಗ್ ಹೋಂ, ಅಪೂರ್ವ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡಿ ಬಂದವನಾಗಿದ್ದು. ತನ್ನ ಸೇವಾ ಅವಧಿಯಲ್ಲಿ ಅಪೂರ್ವ ನರ್ಸಿಂಗ್ ಹೋಂನಿಂದ ಕದ್ದು ತಂದಿದ್ದ ಲೆಟರ್ ಹೆಡ್‌ನಲ್ಲಿ ಚಿಕಿತ್ಸೆಯ ಶಿಫಾರಸ್ಸನ್ನು ಬರೆದು ಕೊಟ್ಟಿದ್ದನೆನ್ನಲಾಗಿದೆ. ಈ ರೀತಿ ಅಪೂರ್ವ ನರ್ಸಿಂಗ್ ಹೋಂ ಲೆಟರ್ ಹೆಡ್‌ನಲ್ಲಿ ಡಾ|| ಜಗದೀಶ್‌ನಿಂದ ಶಿಫಾರಸ್ಸು ಪಡೆದುಕೊಂಡಿರುವ ಅಮಾಯಕ ಗ್ರಾಮಸ್ಥರ ಹೆಸರಿನ ಖೊಟ್ಟಿ ಫಲಾನುಭವಿಗಳ ಸಂಖ್ಯೆ ಕೊಟ್ಟೂರು ಸುತ್ತಲಿನ ಗ್ರಾಮಗಳಲ್ಲಿ ನೂರಾರಿವೆ.

ತನಿಖೆಯಲ್ಲಿ ಕಂಡುಬಂದಿರುವ, ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕನ್ನಾ ಹಾಕಿದ, ಈ ಸ್ವಯಂಘೋಷಿತ ಹಾಗೂ ಅಧಿಕೃತ ಆಪ್ತ ಸಹಾಯಕರ್‍ಯಾರು? ಪ್ರಮಾಣ ಪತ್ರ ನೀಡಿದ ಇತರೆ ವೈದ್ಯರು ಯಾರ್‍ಯಾರು? ನಕಲಿ ಬಿಲ್‌ಗಳನ್ನು ನೀಡಿದ ಔಷಧಿ ಅಂಗಡಿಯ ಮಾಲೀಕರು ಯಾರ್‍ಯಾರು? ಎಂಬ ಅಂಶವನ್ನು ಸರಕಾರ ಬಹಿರಂಗ ಪಡಿಸಬೇಕಲ್ಲದೇ ಈ ಮೇಲಿನೆಲ್ಲ ಅಪರಾಧಿಕಾರಿಗಳನ್ನು ತಕ್ಷಣ ಬಂಧಿಸಿ ಸಿ.ಒ.ಡಿ. ತನಿಖೆಗೆ ವಹಿಸಿಕೊಡಬೇಕೆಂದು, ಡಿ.ವೈ.ಎಫ್.ಐ. ಸಂಘಟನೆಯ ಮುಖಂಡರಾದ ಹುಳ್ಳಿ ಪ್ರಕಾಶ್, ಕರುಣಾನಿಧಿ, ರಂಗಪ್ಪ ದಾಸರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಯುವ ಮುಖಂಡ ಡಿ.ವೆಂಕಟರಮಣ ಲೋಕಾಯುಕ್ತ ತನಿಖೆಗೆ ಒತ್ತಾಯಿಸಿ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಆದರೂ ಇಂತಹ ವ್ಯಾಪಕ ಹಗರಣದ ಕುರಿತಂತೆ ಜಿಲ್ಲೆಯ ವಿರೋಧ ಪಕ್ಷಗಳಾದ ಜನತಾದಳ ಹಾಗೂ ಕಾಂಗ್ರೆಸ್, ಪಕ್ಷದ ಹಿರಿಯ ಮುಖಂಡರುಗಳು ಮಾತ್ರ ಪಂಚಾಯತಿ ಚುನಾವಣಾ ಸಂದರ್ಭದ ತಮ್ಮ ಒಳಜಗಳದಲ್ಲಿ ಮೈಮರೆತು, ರಾಜಕೀಯ ನಿಷ್ಕ್ರಿಯತೆ ಮರೆಯುತ್ತಿರುವುದು ದುರಂತವೇ ಸರಿ.

ಆದಿರಲಿ, ಜಿಲ್ಲೆಯ ಯಾವುದೇ ಸಣ್ಣ ಮಟ್ಟ ವಿಷಯಕ್ಕೂ ಬಾಯಿ ಹಾಕಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಜಿಲ್ಲಾ ಉಸ್ತುವಾರಿ ಸಚಿವ ಜನಾರ್ಧನರೆಡ್ಡಿ, ಆರೋಗ್ಯ ಸಚಿವ ಶ್ರೀರಾಮುಲು ಪ್ರಕರಣದ ಕುರಿತಂತೆ ದಿವ್ಯ ಮೌನ ವಹಿಸಿರುವುದು ಜಿಲ್ಲೆಯ ಜನರನ್ನು ಹುಬ್ಬೇರಿಸುವಂತೆ ಮಾಡಿದೆ. ತವರು ಜಿಲ್ಲೆಯ ತಮ್ಮದೇ ಪಕ್ಷದ ಶಾಸಕ ನೇಮರಾಜ ನಾಯ್ಕ ಈ ಹಗರಣದಲ್ಲಿ ಸಿಕ್ಕಿಬಿದ್ದು ರಾಮುಲು ಸಾಹೇಬರು, ಪಕ್ಕದ ಕೊಪ್ಪಳ ಜಿಲ್ಲೆಯ ಕನಕಗಿರಿಯ ಅನರ್ಹ ಶಾಸಕ ಶಿವರಾಜ್ ತಂಗಡಗಿಯ ತಂಗಳು ಗಂಗಾಳ ಕೆದಕಿ ಈ ತಂಗಡಗಿಯೊಬ್ಬ ಭ್ರಷ್ಟ, ನೀಚ, ಮೋಸಗಾರ ಎಂದು ಕಿರುಚುತ್ತಿರುವುದು ಕುತೂಹಲಕರವಾಗಿದೆ.

ಅಷ್ಟಕ್ಕೂ ಮುಖ್ಯಮಂತ್ರಿಗಳ ಸಚಿವಾಲಯದ ಈ ತನಿಖೆ, ಹಗರಣದ ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ನಿರೀಕ್ಷಿತ ಗುರಿ ತಲುಪಬಹುದೇ ಅಥವಾ ರೆಡ್ಡಿ ಬಳಗದ ಶಾಸಕರಿಗೆ, ಕೇವಲ ರಾಜಕೀಯ ಧಮಕಿ ಹಾಕುವ ಯಡಿಯೂರಪ್ಪನವರ ತಂತ್ರಗಾರಿಕೆಯಾಗಿ ಉಳಿದು ಹೋಗಲಿದೆಯೇ ಎಂಬ ಕುತೂಹಲ ಜಿಲ್ಲೆಯ ಜನತೆಯಲ್ಲಿ ಮನೆ ಮಾಡಿದೆ.

ಶಾಸಕ ನೇಮಿರಾಜ್ ನಾಯ್ಕನ ಹಿನ್ನೆಲೆ ಮತ್ತು ಬಾರಾ ಭಾನಗಡಿಗಳು

ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಗಳು, ಹಗರಣದ ಕೇಂದ್ರ ಬಿಂದುಗಳಾದ ಕೊಟ್ಟೂರು ಸುತ್ತಲಿನ 5 ಗ್ರಾಮಗಳ ಭೇಟಿಯ ನಂತರ ಮಾಧ್ಯಮಗಳ ಮುಂದೆ, ಮುಖ್ಯಮಂತ್ರಿ ಪರಿಹಾರ ನಿಧಿಗೆ ಕನ್ನ ಹಾಕಿದ ಪ್ರಕರಣದ ನಡೆದಿದೆ ಎಂದು ದೃಢಪಡಿಸಿದ ಈ ಅವಧಿಯಲ್ಲಿ ಶಾಸಕನ ಗಮನಕ್ಕೆ ತರದೆ ನೇರವಾಗಿ ಮಾಧ್ಯಮಗಳಿಗೆ ಬಾಯ್ಬಿಟ್ಟಿರುವುದು ರಾಜಕೀಯ ವಲಯದಲ್ಲಿ ಅನೇಕ ಅನುಮಾನಗಳಿಗೆ ಕಾರಣವಾಗಿದೆ. ಈ ವಿಷಯ ತಡವಾಗಿ ತಿಳಿದ ಶಾಸಕ ನೇಮರಾಜ ಬಳ್ಳಾರಿಗೆ ಧಾವಿಸಿ ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಗಳ ಮೇಲೆ ಯಪರಾ ತಪರಾ ಎಗರಾಡಿದ್ದಲ್ಲದೇ, ತನ್ನ ಆಪ್ತ ವಲಯದ ಭಟ್ಟಂಗಿಗಳನ್ನು ಗುಂಪು ಕಟ್ಟಿಕೊಂಡು, 'ಮುಖ್ಯಮಂತ್ರಿ ಸ್ವಂತ ಮಕ್ಕಳು ಮೊಮ್ಮಕ್ಕಳು, ಅಳಿಯಂದಿರಿಗೆಲ್ಲಾ ನೂರಾರು ಎಕರೆ ಭೂಮಿ ಹಂಚಿ, ಸಾವಿರಾರು ಎಕರೆ ಡಿ ನೋಟಿಫಿಕೇಶನ್ ಹಗರಣ ಮಾಡಿ ಸಾವಿರಾರು ಕೋಟಿ ನುಂಗಿರುವಾಗ ಜುಜುಬಿ 50-60 ಲಕ್ಷದ ಘಟನೆನಾ ತನಿಖೆ ಮಾಡ್ಲಿಕ್ಕೆ ಬಂದಾರಲ್ರೀ ಅದೇನ್ ಕಿಸಿತಾರೋ ನೋಡ್ಕಂತೀನಿ', ಎಂದು ಸೆಡ್ಡು ಹೊಡೆದಿದ್ದಾನಂತೆ.

ಅಷ್ಟಕ್ಕೂ ಈ ಶಾಸಕ ಮಹಾಶಯನ ಪೂರ್ವಾಶ್ರಮದ ಚರಿತ್ರೆ ಏನೆಂದು ಬಗೆದು ನೋಡಿದರೆ ಬೀದಿ ರೌಡಿಯೊಬ್ಬನ ಬಾರಾ ಭಾನಗಡಿಗಳ ತರಹ ಕಾಣುತ್ತವೆ.

ಕುರಿಗಳ್ಳರ ನಾಯಕ

ಈಗ್ಗೆ 10-15 ವರ್ಷದ ಹಿಂದೆ ಸಣ್ಣ ಮಟ್ಟ ಕಳ್ಳತನ ಗುಂಡಾಗಿರಿ ಪ್ರಕರಣಗಳಲ್ಲಿ ಪೊಲೀಸ್ ಠಾಣೆಗೆ ಮಾವನ ಮನೆಗೆ ಹೋಗಿ ಬಂದಂತೆ ಬಂಧನ-ಬಿಡುಗಡೆ ಸುಳಿಯಲ್ಲಿರುತ್ತಿದ್ದ ಈ ನೇಮರಾಜ, ತನ್ನ ಸ್ವಂತ ಊರು, ಮರಿಯಮ್ಮನಹಳ್ಳಿ ತಾಂಡಾದ ಕೆಲ ಘಟಿಂಗರ ಗುಂಪಿನ ಲೀಡರ್ ಆಗಿ, ರಾತ್ರೋ ರಾತ್ರಿ ಕುರಿ ಹಟ್ಟಿಗೆ ನುಗ್ಗಿ ಕುರಿಗಳನ್ನ ಕದ್ದು ಮಾರಾಟ ಮಾಡಿಕೊಂಡಿದ್ದವ. ಈ ಕಾರಣಕ್ಕಾಗಿ ಅನೇಕ ಕ್ರಿಮಿನಲ್ ಕೇಸುಗಳು ಎಂ.ಎಂ.ಹಳ್ಳಿ ಠಾಣಾ

ಪುಟ 15 ಕ್ಕೆ

ಪಿ.ಡಿ. ಸಂಪಾದಕೀಯ

ಫೆಬ್ರುವರಿ 16ರಂದು ಪ್ರಧಾನ ಮಂತ್ರಿಗಳ 'ಸಂವಾದ'ವನ್ನು ಕೇಳಿದ ಮೇಲೆ ಏಳುವ ಪ್ರಶ್ನೆಯಿದು. ಅವರು ಮಹಾಶ್ರೀಮಂತರಿಗೆ ಅಗ್ಗ ದರದಲ್ಲಿ 2ಜಿ ತರಂಗಾಂತರ ನೀಡಿಕೆಯನ್ನು ಕಡುಬಡವರಿಗೆ ನೀಡುವ ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳೊಂದಿಗೆ ಹೋಲಿಸಿದ್ದಾರೆ. ಇದೂ ಸಾಲದೆಂಬಂತೆ, ಭಾರತ ಈಗ ಒಂದು ಮುಕ್ತ ಆರ್ಥಿಕವಾದ್ದರಿಂದ ಬೆಲೆಯೇರಿಕೆ ತಡೆಯಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ತಮ್ಮ ಸರಕಾರಕ್ಕೆ ಇರುವ ಅವಕಾಶಗಳು ತೀರಾ ಕಡಿಮೆ ಎಂದೂ ಹೇಳಿದ್ದಾರೆ. ಆದರೆ 'ಆರ್ಥಿಕ ಸಲುಧಾರಣೆ'ಗಳ ಕ್ರಮಗಳಿಗೇನೂ ಕೊರತೆಯಿಲ್ಲವಂತೆ. ಇವು ಈ ಸರಕಾರದ ವರ್ಗ ಚಾರಿತ್ರ್ಯವನ್ನು ಸ್ಪಷ್ಟವಾಗಿ ಎತ್ತಿ ತೋರಿವೆ.

ಯಾರಿಗಾಗಿ ಇದೆ ಈ ಯುಪಿಎ ಸರ್ಕಾರ?


ನಿರ್ದಯ ಬೆಲೆಯೇರಿಕೆ ಮತ್ತು ಮಹಾ ಭ್ರಷ್ಟಾಚಾರ-ಇವೆರಡು ಈಗ ನಮ್ಮ ದೇಶವನ್ನು ಮತ್ತು ನಮ್ಮ ಜನಗಳನ್ನು ತೀವ್ರವಾಗಿ ಬಾಧಿಸುತ್ತಿರುವ ಅತ್ಯಂತ ಮಹತ್ವದ ಪ್ರಶ್ನೆಗಳು. ಬುಧವಾರದಂದು(ಫೆ.16) ಪ್ರಧಾನ ಮಂತ್ರಿಗಳು ಹಿರಿಯ ಪತ್ರಕರ್ತರೊಂದಿಗೆ ನಡೆಸಿದ ಸಂವಾದ ಈ ಎರಡು ಪ್ರಶ್ನೆಗಳ ಮೇಲೆ ಏನೋ ಹೊಸ ಬೆಳಕನ್ನು ಮತ್ತು ಅವನ್ನು ಎದುರಿಸುವಲ್ಲಿ ಸರಕಾರದ ಕ್ರಿಯಾಶೀಲತೆಯನ್ನು ತೋರಿಸಬಹುದು ಎಂದು ಬಹಳಷ್ಟು ನಿರೀಕ್ಷೆಯಿತ್ತು. ಆ ನಿರೀಕ್ಷೆ ಈಡೇರುವುದಿರಲಿ, ಬದಲಾಗಿ, ಈ ಯುಪಿಎ-2 ಸರಕಾರವನ್ನು ದಿಕ್ಕುಗೇಡಿತನದ ಕಾಯಿಲೆ ಬಿಗಿಯಾಗಿ ಆವರಿಸಿಕೊಂಡಿದೆ ಎಂಬುದನ್ನು ಈ ಸಂವಾದ ದೃಢಪಡಿಸಿದೆ.

2ಜಿ ತರಂಗಾಂತರ ಹಗರಣದ ಮೇಲೆ ಒಂದು ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯನ್ನು ರಚಿಸುವ ಪ್ರಶ್ನೆಯ ಮೇಲೆ ಪ್ರಧಾನ ಮಂತ್ರಿ ಉವಾಚ: 'ನಾನು ಜೆಪಿಸಿಗೆ ಅಡ್ಡವಾಗಿದ್ದೇನೆ ಎಂಬ ಒಂದು ಸಂಪೂರ್ಣ ತಪ್ಪು ಭಾವನೆ ಇದೆ. ನಾನು ಯಾವುದೇ ಸಮಿತಿಯನ್ನು ಎದುರಿಸಲು ಹೆದರುವುದಿಲ್ಲ...... ನನ್ನ ವರ್ತನೆ ಸಂದೇಹಾತೀತವಾಗಿರಬೇಕು ಎಂದು ನಾನು ಸದಾ ಹೇಳುತ್ತಾ ಬಂದಿದ್ದೇನೆ.' ಹಾಗಿದ್ದರೆ, ಯಾಕೆ ಸ್ವಾಮೀ ಸಂಸತ್ತಿನ ಚಳಿಗಾಲದ ಅಧಿವೇಶನವನ್ನು ವ್ಯರ್ಥ ಮಾಡಲಾಯಿತು, ಹೇಳುತ್ತೀರಾ? ಭ್ರಷ್ಟಾಚಾರ ಎಸಗಿದವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂದು ಅವರು ತಮ್ಮ ಈ ಮೊದಲಿನ ಭರವಸೆಯನ್ನು ಪುನರಾವರ್ತಿಸಿದರು. ಆದರೆ ಇದರಿಂದ ಯಾರಿಗೂ ನಂಬಿಕೆ ಮೂಡಿಲ್ಲ. ಏಕೆಂದರೆ ಕಾಮನ್ವೆಲ್ತ್ ಕ್ರೀಡಾಕೂಟದ ಭ್ರಷ್ಟಾಚಾರದಲ್ಲಿ ಒಳಗೊಂಡವರನ್ನು ತೊಂಭತ್ತು ದಿನಗಳ ಒಳಗೆ ಶಿಕ್ಷೆಗೆ ಗುರಿಪಡಿಸಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಆ ಸಮಯ ಮಿತಿ ಈಗಾಗಲೇ ದಾಟಿ ಹೋಗಿ ಬಹಳ ದಿನಗಳಾಗಿವೆ. ಆದರೆ ದಾಖಲೆಗೆ ಇರಲಿ ಎಂದು ಅವರು ತಪ್ಪಿತಸ್ಥರನ್ನು ಬಿಡುವುದಿಲ್ಲ ಎಂಬ ಮಾತಿನ ಪುನರಾವರ್ತನೆ ಮಾಡಿದರು, ಮತ್ತೊಮ್ಮೆ.



ಭ್ರಷ್ಟಾಚಾರ ಅನಿವಾರ್ಯ!

ಯುಪಿಎ-2 ಒಂದು ಮೈತ್ರಿಕೂಟ ಸರಕಾರ, ಪ್ರಧಾನ ಮಂತ್ರಿಗಳು 'ಮೈತ್ರಿಕೂಟ ಧರ್ಮ'ವನ್ನು ಪಾಲಿಸಬೇಕಾಗಿದೆ ಎಂಬ ಮಾತು ಮತ್ತೆ-ಮತ್ತೆ ಕೇಳ ಬಂತು. ಅಂದರೆ, ಸರಕಾರವನ್ನು ಅಧಿಕಾರದಲ್ಲಿ ಇಟ್ಟುಕೊಳ್ಳಲು ಉನ್ನತ ಮಟ್ಟಗಳಲ್ಲಿ ಮಹಾ ಭ್ರಷ್ಟಾಚಾರವನ್ನು ಸಹಿಸಿಕೊಳ್ಳಲೇಬೇಕಾಗಿದೆ ಎಂದು ಅರ್ಥೈಸಬೇಕೇ? ಭಾರತ ಮತ್ತು ಭಾರತದ ಜನತೆ ಇದನ್ನು ಒಪ್ಪುವುದಿಲ್ಲ. ಭ್ರಷ್ಟಾಚಾರ ನಡೆಯುತ್ತದಷ್ಟೇ ಅಲ್ಲ, ಅದು ಮೈತ್ರಿಕೂಟ ಸರಕಾರಗಳ ಬಗ್ಗೆ ಎಲ್ಲರೂ ಒಪ್ಪುವ ಒಂದು ಲಕ್ಷಣವಾಗುತ್ತದೆ ಎಂಬುದು ಒಂದು ಕಪಟ. ಬೊಫೋರ್ಸ್ ಹಗರಣ ನಡೆದಾಗ ಕಾಂಗ್ರೆಸ್ ಪಕ್ಷವೊಂದಕ್ಕೇ ಸಂಸತ್ತಿನಲ್ಲಿ ಮೂರನೇ ನಾಲ್ಕರಷ್ಟು ಭಾರೀ ಬಹುಮತ ಇತ್ತು.



2ಜಿ ತರಂಗಾಂತರ ಹಗರಣದಲ್ಲಿ ಕಳಕೊಂಡ ಮೊತ್ತದ ವಿಷಯದಲ್ಲಿ ಪ್ರಧಾನ ಮಂತ್ರಿಗಳು ಸಿಎಜಿ ಅಂದಾಜು ಕಾಲ್ಪನಿಕವಷ್ಟೇ ಎಂಬ ಹಾಲೀ ದೂರಸಂಪರ್ಕ ಮಂತ್ರಿಗಳ ಹೇಳಿಕೆಯನ್ನು ಒಪ್ಪುವಂತೆ ಕಾಣುತ್ತಿತ್ತು. ಟೆಲಿಕಾಂ ನಿರ್ವಾಹಕರಿಗೆ ಅಗ್ಗ ದರಗಳಲ್ಲಿ ಪರವಾನಿಗೆಗಳನ್ನು ಕೊಟ್ಟರೆ ದೂರಸಂಪರ್ಕ ಪಡೆಯುವವರ ಸಂಖ್ಯೆ ಹೆಚ್ಚುತ್ತದೆ, ಅವರಿಗೆ ಕಡಿಮೆ ಖರ್ಚಿನಲ್ಲಿ ಸೇವೆಗಳು ದೊರೆಯುತ್ತವೆ ಎಂಬ ಕಾರಣಕ್ಕಾಗಿ ಸರಕಾರ ಈ ಆದಾಯವನ್ನು ಸಂಗ್ರಹಿಸಬಾರದೆಂದು ಭಾವಿಸಿತು ಎಂಬ ವಾದ ಉದ್ದೇಶಪೂರ್ವಕವಾಗಿಯೇ ದಾರಿ ತಪ್ಪಿಸುವಂತದ್ದು. ಏಕೆಂದರೆ ಇಂದು ದೂರಸಂಪರ್ಕ ಸೇವೆಗಳನ್ನು ಒದಗಿಸುವವರಲ್ಲಿ ಕೆಲವರು ಪರವಾನಿಗೆಗಳನ್ನು ಸ್ವಾನ್, ಯುನಿಟೆಕ್ ಎಂಬವುಗಳಿಂದ ಅವು ಪರವಾನಿಗೆ ಪಡೆಯಲು ಸರಕಾರಕ್ಕೆ ತೆತ್ತ ಹಣದ ಆರು ಪಟ್ಟು ಬೆಲೆ ತೆತ್ತು ಪಡೆದವರು.

ಸಬ್ಸಿಡಿಗಳೂ, ಉತ್ತೇಜಕಗಳೂ

ಇನ್ನೂ ಹೊಲಸು ಸಂಗತಿಯೆಂದರೆ ಪ್ರಧಾನ ಮಂತ್ರಿಗಳು ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳನ್ನು ಕೊಡುವುದರಿಂದಾಗಿ ಬಳಕೆದಾರರಿಂದ ಸೂಕ್ತ ಬೆಲೆಯನ್ನು ಸಂಗ್ರಹಿಸದೆ ಸರಕಾರ ರೆವಿನ್ಯೂ ನಷ್ಟ ಅನುಭವಿಸಿದೆ ಎಂದು ಹೇಳಬಹುದೇ ಎನ್ನುತ್ತಾ 2ಜಿ ತರಂಗಾಂತರ ನೀಡಿಕೆಯನ್ನು ಈ ಸಬ್ಸಿಡಿಗಳೊಂದಿಗೆ ಹೋಲಿಸಿದ್ದಾರೆ. ಇಂತಹ ಹೋಲಿಕೆ ಈ ಸರಕಾರದ ವರ್ಗ ಚಾರಿತ್ರ್ಯವನ್ನು ಸ್ಪಷ್ಟವಾಗಿ ಎತ್ತಿ ತೋರುತ್ತದೆ. ಈ 2ಜಿ ತರಂಗಾಂತರ ನೀಡಿಕೆ ನಿಜವಾಗಿಯೂ ದೂರಸಂಪರ್ಕ ವಲಯದ ದೊಡ್ಡ-ದೊಡ್ಡ ಕಾರ್ಪೊರೇಟುಗಳಿಗೆ ಕೊಡಮಾಡಿರುವ ಒಂದು ಸಬ್ಸಿಡಿ ಎಂದೇ ಹೇಳಿದಂತಾಗಿದೆ.

ಇದು ಇನ್ನೂ ವ್ಯಾಪಕವಾದ ಒಂದು ಪ್ರಶ್ನೆಯನ್ನು ಎತ್ತುತ್ತದೆ- ಸರಕಾರ ಯಾರಿಗೆ ಸಹಾಯ ಧನ ಅಥವ ಸಬ್ಸಿಡಿ ಕೊಡಬೇಕು? ಹೇಗೋ ಎರಡು ಹೊತ್ತು ಹೊಟ್ಟೆ ತುಂಬಿಸಿಕೊಳ್ಳಲು ಹೆಣಗಬೇಕಾದ ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರಿಗೋ ಅಥವ ಸೂಪರ್ ಶ್ರೀಮಂತರಿಗೋ, ಆಮೂಲಕ ಅವರು ವಿಶ್ವದ ಶತಕೋಟ್ಯಾಧಿಪತಿಗಳ ಪಟ್ಟಿಯಲ್ಲಿ ಸೇರಲು ಅನುವಾಗಲಿ ಎಂದೋ? ಸರಕಾರ ಈ 1.76 ಲಕ್ಷ ಕೋಟಿ ರೂ.ಗಳನ್ನು ಸಂಗ್ರಹಿಸುವುದು ಬೇಡ ಎಂದು ಭಾವಿಸಿತು ಎಂಬ ವಾದವನ್ನು ಒಂದು ಕ್ಷಣ ಒಪ್ಪಿಕೊಳ್ಳೋಣ. ಈ ಹಣದಿಂದ ನಮ್ಮ ಜನಗಳ ಬದುಕಿನ ಗುಣಮಟ್ಟವನ್ನು ಉತ್ತಮ ಪಡಿಸಲು ಏನೆಲ್ಲ ಮಾಡಬಹುದಿತ್ತು ಎಂಬುದನ್ನು ಪರಿಶೀಲಿಸಿ- ಈ ರೆವಿನ್ಯೂ ಸಂಗ್ರಹ ಮಾಡಿದ್ದರೆ, ಪ್ರತಿಯೊಂದು ಕುಟುಂಬಕ್ಕೆ(ಎಪಿಎಲ್ ಕೂಡ) ತಿಂಗಳಿಗೆ 35 ಕೆ.ಜಿ.ಅಕ್ಕಿಯನ್ನು 2ರೂ.ದರದಲ್ಲಿ ಪೂರ್ಣ ಎರಡು ವರ್ಷಗಳ ವರೆಗೆ ಕೊಡಲು ಸಾಧ್ಯವಾಗುತ್ತಿತ್ತು. ನಮ್ಮ ಜನಗಳಿಗೆ ಆಹಾರ ಭದ್ರತೆಯನ್ನು ಒದಗಿಸುವ ಈ ಅವಕಾಶವನ್ನು ಬಿಟ್ಟು ಕೊಡಲಾಗಿದೆ. ಇದನ್ನು ಬೇರೊಂದು ರೀತಿಯಲ್ಲಿ ನೋಡಿ: ಈ ಮೊತ್ತ ಶಿಕ್ಷಣದ ಸಂವಿಧಾನಿಕ ಹಕ್ಕನ್ನು ವಾಸ್ತವಗೊಳಿಸಲು ನಮ್ಮ ದೇಶಕ್ಕೆ ಅನುಕೂಲ ಮಾಡಿಕೊಡಬಹುದಿತ್ತು. ಹೊಸ ಶಾಲಾ ಕಟ್ಟಡಗಳನ್ನು ಕಟ್ಟಿಸಿ, ಶಿಕ್ಷಕರನ್ನು ನೇಮಿಸಿ, ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆಗಳನ್ನು ಕಲ್ಪಿಸಿ, ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ಐದು ವರ್ಷಗಳ ಕಾಲ ಒದಗಿಸಿ 6ರಿಂದ 14 ವರ್ಷದ ವರೆಗಿನ ಪ್ರತಿಯೊಂದು ಮಗು ಶಾಲೆಯಲ್ಲಿ ಇರುವಂತೆ ಮಾಡಬಹುದಿತ್ತು.

ಭೌತಿಕ ಭ್ರಷ್ಟಾಚಾರವೂ ಹೌದು, ನೈತಿಕ ಭ್ರಷ್ಟಾಚಾರವೂ ಹೌದು

ಯುಪಿಎ-2 ಸರಕಾರ ಎಲ್ಲರಿಗೂ ಆಹಾರ ಭದ್ರತೆಯನ್ನು ಅಥವ ಶಿಕ್ಷಣವನ್ನು ಒದಗಿಸುವ ಅವಕಾಶವನ್ನು ಆಯ್ಕೆ ಮಾಡಿಕೊಳ್ಳಲಿಲ್ಲ, ಬದಲಿಗೆ ತನ್ನದೇ ಖಜಾನೆಯ ಒಂದು ಪಾಲನ್ನು ಮಹಾಶ್ರೀಮಂತರಿಗೆ ಕೊಡುವುದನ್ನೇ ಆಯ್ಕೆ ಮಾಡಿಕೊಂಡಿತು. ಇದು ಭೌತಿಕ ಭ್ರಷ್ಟಾಚಾರವೂ ಹೌದು, ನೈತಿಕ ಭ್ರಷ್ಟಾಚಾರವೂ ಹೌದು. ಸಹಾಯದ ಆವಶ್ಯಕತೆಯಿರುವವರಿಗೆ ಕೊಡುವ ರಿಯಾಯ್ತಿಗಳನ್ನು 'ಸಬ್ಸಿಡಿ'ಗಳು ಎಂದು ಕರೆದು, ಅವು ಆರ್ಥಿಕಕ್ಕೆ ಕೆಡುಕುಂಟು ಮಾಡುತ್ತವೆ ಎಂದು ದೂಷಿಸುತ್ತಾರೆ; ಅದೇ ವೇಳೆಗೆ ಶ್ರೀಮಂತರಿಗೆ ಕೊಡುವ ರಿಯಾಯ್ತಿಗಳನ್ನು 'ಉತ್ತೇಜಕ'ಗಳು ಎನ್ನುತ್ತಾರೆ, ಅವು ಆರ್ಥಿಕದ ಆರೋಗ್ಯಕ್ಕೆ 'ಅಗತ್ಯ'ವಂತೆ!

ವಿಚಿತ್ರವೆಂದರೆ, ಯುಪಿಎ-2 ಸರಕಾರದ ಸಂಪುಟ ರಚನೆಯಾಗುವಾಗ ಶ್ರೀಯುತ ರಾಜ ಅವರನ್ನು ದೂರ ಸಂಪರ್ಕ ಮಂತ್ರಿಯಾಗಿ ಮರು ನೇಮಕ ಮಾಡಲಾಯಿತು, ಏಕೆಂದರೆ 2ಜಿ ಹಗರಣ ಕುರಿತ ಈ ಸಂಗತಿಗಳಲ್ಲಿ ಯಾವೊಂದು ಕೂಡ ಆಗ ತಿಳಿದಿರಲಿಲ್ಲ ಎಂದಿದ್ದಾರೆ ಪ್ರಧಾನ ಮಂತ್ರಿಗಳು. 2ಜಿ ಪರವಾನಿಗೆಗಳನ್ನು ಕೊಟ್ಟಂದಿನಿಂದಲೇ ಅದಕ್ಕೆ ಸಂಬಂಧಪಟ್ಟ ಪ್ರಶ್ನೆಗಳೆಲ್ಲ ಸಾರ್ವಜನಿಕ ಚರ್ಚೆಗೆ ಒಳಗಾಗಿದ್ದವು. ಅಂದಿನಿಂದಲೇ ಅವುಗಳ ವರದಿ ನಮ್ಮ ಈ ಅಂಕಣಗಳಲ್ಲಿ ಪ್ರಕಟವಾಗುತ್ತಿವೆ. ಫೆಬ್ರುವರಿ 2008ರಷ್ಟು ಹಿಂದೆಯೇ ಸಿಪಿಐ(ಎಂ)ನ ಸಂಸದೀಯ ಮುಖಂಡರು ಈ ಅಕ್ರಮಗಳನ್ನು ತೋರಿಸುತ್ತಾ ಪ್ರಧಾನ ಮಂತ್ರಿಗಳಿಗೆ ಬರೆದಿದ್ದಾರೆ. ಅವು ಈಗ ಅಧಿಕೃತವಾಗಿ ದೃಢಪಟ್ಟಿವೆಯಷ್ಟೇ. ಆದರೆ, ಯುಪಿಎ-2 ಸರಕಾರ ರಚನೆಗೊಳ್ಳುವ ವೇಳೆಗೆ ಇವೆಲ್ಲ

ಪುಟ 10 ಕ್ಕೆ



ಈಜಿಪ್ಟಿನ ಜನತೆಗೆ ಕ್ರಾಂತಿಕಾರಿ 'ಮುಬಾರಕ್' (ಶುಭಾಶಯಗಳು) !!

ಈಜಿಪ್ಟ್‌ನ ಸರ್ವಾಧಿಕಾರಿ ಅಧಿಕಾರ ಬಿಟ್ಟು ಪಲಾಯನ ಮಾಡಿದ್ದಾನೆ. ಈಜಿಪ್ಟ್‌ನಲ್ಲಿ ಬೀಸುತ್ತಿರುವ ಬದಲಾವಣೆಯ ಬಿರುಗಾಳಿ ಆಕಸ್ಮಿಕವಲ್ಲ. ಅದರ ಹಿಂದೆ ಜನರ ವ್ಯವಸ್ಥಿತ ಹೋರಾಟವಿದೆ. ಈ ಬಿರುಗಾಳಿ ಈಗ ಬೇರೆಡೆಗೂ ಹಬ್ಬುತ್ತಿದೆ.

ಶರತ್‌ಚಂದ್ರ

ಈಜಿಪ್ಟಿನ ರಾಜಧಾನಿ ಕೈರೋ ನಗರದ ತಹ್ರೀರ್ (ವಿಮೋಚನಾ) ಚೌಕದಲ್ಲಿ 18 ದಿನಗಳ ಸತತ ಜನತಾ ಚಳುವಳಿ ಕೊನೆಗೂ ವಿಜಯ ಕಂಡಿದೆ. ಈಜಿಪ್ಟನ್ನು 30 ವರ್ಷಗಳ ಕಾಲ ಆಳಿದ ಸರ್ವಾಧಿಕಾರಿ ಹುಸ್ನಿ ಮುಬಾರಕ್ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟು ಕೆಂಪು ಸಮುದ್ರ ತೀರದ ರೆಸಾರ್ಟ್ ಒಂದಕ್ಕೆ ಪಲಾಯನ ಮಾಡಿದ್ದಾನೆ. ಅಲ್ಲಿಂದ ಸೌದಿ ಅರೇಬಿಯಾಕ್ಕೆ ಹೋಗುವ ಸಾಧ್ಯತೆ ಇದೆ ಅಂತ ಹೇಳಲಾಗಿದೆ. ಅವರ ಕುಟುಂಬ ಸಾಗಿಸಬಹುದಾದ ಲೂಟಿಯೊಂದಿಗೆ ವಿಶೇಷ ವಿಮಾನವೊಂದರಲ್ಲಿ ಚಳುವಳಿ ಸಿಡಿದ ಆರಂಭದಲ್ಲೇ ಲಂಡನ್ನಿಗೆ ಓಡಿ ಹೋಗಿದೆ. ಹಳೆಯ ಸರ್ಕಾರ ವಿಸರ್ಜಿಸಿ ಮಿಲಿಟರಿ ಮಂಡಳಿ ಅಧಿಕಾರ ವಹಿಸಿಕೊಂಡಿದೆ. 'ರಾಷ್ಟ್ರೀಯ ಬದಲಾವಣೆಯ ವೇದಿಕೆ' ಯ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿ ಅಗತ್ಯ ಸಂವೈಧಾನಿಕ ಬದಲಾವಣೆಗಳನ್ನು ತಂದು ಆರು ತಿಂಗಳೊಳಗೆ ಚುನಾವಣೆ ನಡೆಸುವುದಾಗಿ ಭರವಸೆ ನೀಡಿದೆ. ತಾತ್ಕಾಲಿಕ ಸರ್ಕಾರದಲ್ಲೇ ವಿರೋಧ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಳ್ಳುವ ಬೇಡಿಕೆಯನ್ನು ಮಾತ್ರ ಇನ್ನೂ ಮನ್ನಿಸಿಲ್ಲ.

ನಿಜವಾದ ಜನತಾ ಪ್ರತಿನಿಧಿಗಳು ಇನ್ನೂ ಅಧಿಕಾರ ವಹಿಸಿಕೊಂಡಿಲ್ಲವಾದರೂ ಇದು ಈಜಿಪ್ಟಿನ ಜನತಾ ಚಳುವಳಿಯ ಪ್ರಚಂಡ ಜಯ. ಅರಬ್ ಜನತೆಯ ಬದುಕಿನಲ್ಲಿ ಒಂದು ಪ್ರಮುಖ ಚಾರಿತ್ರಿಕ ಕ್ಷಣ. ಈಜಿಪ್ಟ್ ಮಾತ್ರವಲ್ಲ ಇಡೀ ಅರಬ್ ಜನತೆಗೆ ಕ್ರಾಂತಿಕಾರಿ "ಮುಬಾರಕ್" (ಶುಭಾಶಯ) ಹೇಳಬೇಕಾದ ಕ್ಷಣ !! ಈಜಿಪ್ಟಿನ ಜನತಾ ಚಳುವಳಿಯ ಪ್ರಚಂಡ ಜಯ ಎಲ್ಲಾ ಅರಬ್ ಜನತೆಯಲ್ಲಿ ಸ್ಫೂರ್ತಿ ತುಂಬಿದ್ದು ಹಲವು ದೇಶಗಳಲ್ಲಿ ಅಂತಹುದೇ ಹೋರಾಟಗಳು ಆರಂಭವಾಗಿದೆ. ಇದು 1990 ರ ದಶಕದ ಕೊನೆಯಲ್ಲಿ ವೆನೆಜುವೇಲಾದಲ್ಲಿ ಚವೇಜ್ ವಿಜಯದ ನಂತರ ಹರಡಿದ ಎಡ-ಪ್ರಜಾಪ್ರಭುತ್ವ ಶಕ್ತಿಗಳ ವಿಜಯದ 'ಎಳೆಗೆಂಪು ಅಲೆ'ಯನ್ನು ನೆನಪಿಸುವ ಕ್ಷಣ. ಆದರೆ ಈ ಅರಬೀ ಪ್ರಜಾಪ್ರಭುತ್ವದ ಅಲೆ ಇನ್ನೂ ವೇಗವಾಗಿ 'ಫಾಸ್ಟ್ ಫಾರ್ವರ್ಡ್' ರೀತಿಯಲ್ಲಿ ಆಗುತ್ತಿದೆ.

ಹಲವು ಮೂಢನಂಬಿಕೆಗಳನ್ನು ಒಡೆದು ಹಾಕಿದೆ

ಸಾಮ್ರಾಜ್ಯಶಾಹಿ ಮತ್ತು ಅವರ ಬಾಲಬಡುಕ ತುತ್ತೂರಿಗಳಾಗಿದ್ದ ನಮ್ಮ ಮಾಧ್ಯಮಗಳು ಅರಬ್ ದೇಶಗಳ ಬಗ್ಗೆ ಹರಡಿದ್ದ ಹಲವು ಮೂಢನಂಬಿಕೆಗಳನ್ನು ಈ ಬೆಳವಣಿಗೆ ಒಡೆದು ಹಾಕಿದೆ. ಇಸ್ಲಾಮಿನ ಪ್ರಭಾವದ ಮಂಕು ಬಡಿದಿರುವ ಅರಬ್ ಜನತೆಯಲ್ಲಿ ಪ್ರಜಾಪ್ರಭುತ್ವದ ಮತ್ತು ರಾಷ್ಟ್ರೀಯತೆಯ ನೆಲೆ ಅಥವಾ ಆಕಾಂಕ್ಷೆಗಳಿಲ್ಲ. ಸರ್ವಾಧಿಕಾರಿಗಳು ಅಥವಾ ಮೂಲಭೂತವಾದಿಗಳು ಮಾತ್ರ ಅಲ್ಲಿ ಆಳಬಲ್ಲರು. ಅಲ್ಲಿ ಯಾವುದೇ ಬದಲಾವಣೆಯ ಸಾಧ್ಯತೆಗಳಿಲ್ಲ. ಇವು ಚಾಲ್ತಿಯಲ್ಲಿ ತರಲಾದ ಕೆಲವು ಮೂಢನಂಬಿಕೆಗಳು. ಈಜಿಪ್ಟ್ ಮತ್ತು ಅರಬ್ ಜನತಾ ಕ್ರಾಂತಿಯ ಅಲೆ ಮುಂದುವರೆದ ಹಾಗೆ ಸಾಮ್ರಾಜ್ಯಶಾಹಿ ಮಾಧ್ಯಮಗಳು ಹೊಸ ಮೂಢ ನಂಬಿಕೆಗಳನ್ನು ಹರಡಲು ಪ್ರಯತ್ನಿಸುತ್ತಿವೆ. ವಿಕಿಲೀಕ್ಸ್ ಲೀಕುಗಳು, ಫೇಸ್ ಬುಕ್-ಟ್ವಿಟರ್ ನಂತಹ ಸಾಮಾಜಿಕ ಜಾಲಗಳ ತಂತ್ರಜ್ಞಾನ, ಒಬಾಮಾರ ಅರಬ್ ಪ್ರದೇಶಗಳ ಭೇಟಿ-ಕೈರೋ ಭಾಷಣ - ಮುಂತಾದವುಗಳಿಂದ ಅರಬ್ ಯುವಜನ ಎಚ್ಚೆತ್ತಿದ್ದಾರೆ. ರೊಚ್ಚಿಗೆದ್ದು ಬೀದಿಗಿಳಿದಿದ್ದಾರೆ. ಆದರೆ ಈ ಜನತಾ ಚಳುವಳಿಯ ಹಿಂದೆ ನಾಯಕರಿಲ್ಲ, ಸಂಘಟನೆಗಳಿಲ್ಲ. ನಿರ್ದಿಷ್ಟ ಬೇಡಿಕೆಗಳಿಲ್ಲ. ಆದ್ದರಿಂದ ಅದರ ಪ್ರಮುಖ ಪ್ರಯೋಜನ ಪಡೆಯುವವರು 'ಏಕಮಾತ್ರ' ಸಂಘಟಿತ ಶಕ್ತಿಯಾದ ಈಜಿಪ್ಟಿನ 'ಮುಸ್ಲಿಂ ಬ್ರದರ್ ಹುಡ್' ನಂತಹ ಮೂಲಭೂತವಾದಿಗಳು. ಅವು ಹರಡುತ್ತಿರುವ ಹೊಸ ಮೂಢನಂಬಿಕೆಗಳು ಇವು. ಇವನ್ನೂ ಅರಬ್ ಜನತೆ ತಮ್ಮ ದೈನಂದಿನ ಕಾರ್ಯಾಚರಣೆಗಳಿಂದ ಒಡೆಯುತ್ತಿದ್ದಾರೆ. ವಿಕಿಲೀಕ್ಸ್, ಫೇಸ್ ಬುಕ್-ಟ್ವಿಟರ್ ಗಳಿಗಿಂತ ಹೆಚ್ಚಿನ ಪಾತ್ರವನ್ನು ಅರಬ್ ನೆಲದಲ್ಲಿ ಹುಟ್ಟಿ, ಹಲವು ದಾಳಿಗಳನ್ನು ಎದುರಿಸಿ ಜನರ ವಿಶ್ವಾಸಾರ್ಹ ದನಿಯಾಗಿ ಬೆಳೆದಿರುವ ಅಲ್-ಜಜೀರಾ ಟಿವಿ ವಾಹಿನಿ ವಹಿಸಿದೆ

ಈಗಾಗಲೇ (ಕಳೆದ ಸಂಚಿಕೆಯಲ್ಲಿ ಪ್ರಕಾಶ್ ಕಾರಟ್ ಲೇಖನದಲ್ಲಿ) ಸಿದ್ಧಪಡಿಸಿದಂತೆ ಈಜಿಪ್ಟ್ ಜನರ ದಂಗೆ ಸಂಘಟನೆ-ನಾಯಕತ್ವ-ಬೇಡಿಕೆ ರಹಿತವಾದದ್ದು ಅಲ್ಲ. ಅಕಸ್ಮಾತ್ತಾಗಿ ಆದದ್ದು ಅಲ್ಲ. ಕೆಲವು ತಕ್ಷಣದ ಪ್ರಚೋದನೆಗಳು ವೇಗವರ್ಧಕದ ಕೆಲಸ ಮಾಡಿದ್ದರೂ, ಅದು ಹಲವು ದೀರ್ಘ ಪ್ರಕ್ರಿಯೆಗಳಿಂದ ಬಂದಿದ್ದು, ಗಟ್ಟಿ ನೆಲೆ ಹೊಂದಿದೆ. ದಂಗೆ ಆರಂಭವಾದ ಜನವರಿ 25 'ಆಕ್ರೋಶದ ದಿನ'ದ ಬೇಡಿಕೆಗಳ ಪಟ್ಟಿ (ಕನಿಷ್ಟ ಕೂಲಿ ಏರಿಕೆ ಇತ್ಯಾದಿ) ಇದಕ್ಕೆ ಸಣ್ಣ ಉದಾಹರಣೆ. ದಂಗೆಯ ಹಿಂದೆ ಭ್ರಷ್ಟ ಸರ್ವಾಧಿಕಾರದ ವಿರುದ್ಧ ಆಕ್ರೋಶ, ಪ್ರಜಾಪ್ರಭುತ್ವ-ಸಮಾನತೆಯ ಹಂಬಲ ಗುರುತಿಸಿರುವ ಕೆಲವು ವಿಶ್ಲೇಷಕರು ಸಹ, ಸಾಮಾನ್ಯ ಈಜಿಪ್ಟ್ ಜನರನ್ನು ಸರಿ ಸುಮಾರು ನಿರ್ಗತಿಕರನ್ನಾಗಿ ಮಾಡಿದ ದುರ್ಭರ ಆರ್ಥಿಕ ಸ್ಥಿತಿಯ ವಿರುದ್ಧ ಆಕ್ರೋಶದ ಪಾತ್ರವನ್ನು ಗುರುತಿಸಿಲ್ಲ. ಆ ನಂತರದ ಬೆಳವಣಿಗೆಗಳು ಅದನ್ನು ಸಾಬೀತು ಮಾಡಿವೆ.

ಜನತಾ ಕ್ರಾಂತಿಗೆ ಫಾರ್ಮುಲಾಗಳಿಲ್ಲ

ಮುಬಾರಕ್ ರಾಜೀನಾಮೆ ನಂತರ "ಸಾಮಾನ್ಯ ಸ್ಥಿತಿಗೆ" "ಕೆಲಸಕ್ಕೆ" ಮರಳಬೇಕೆಂದು ಮಿಲಿಟರಿ ಮಂಡಳಿಯ ಕೋರಿಕೆಯನ್ನು ಚಳುವಳಿಯ ಹಲವು ವಿಭಾಗಗಳು ಮಾನ್ಯ ಮಾಡಿಲ್ಲ. ತಾತ್ಕಾಲಿಕ ಸರ್ಕಾರದಲ್ಲಿ ಜನ ಚಳುವಳಿಯ ಪ್ರತಿನಿಧಿಗಳು ಇಲ್ಲದೆ, ಚುನಾವಣೆಯ ತಾರೀಕು ಘೋಷಿಸದೆ ತಹ್ರೀರ್ ಚೌಕದಿಂದ ಕದಲುವುದಿಲ್ಲ ಅಂತ ಘೋಷಿಸಿದ್ದಾರೆ. ಕನಿಷ್ಟ ಕೂಲಿ ಏರಿಕೆ, ಟ್ರೇಡ್ ಯೂನಿಯನು ಹಕ್ಕು ಮತ್ತು ಇತರ ಬೇಡಿಕೆಗಳ ಜಾರಿಗೆ ಒತ್ತಾಯಿಸಿ ದೇಶದಾದ್ಯಂತ ಕಾರ್ಮಿಕರ ಸಾರ್ವತ್ರಿಕ ಮುಷ್ಕರಗಳು ಮುಂದುವರೆದಿವೆ. ಮಹಲ್ಲಾದ 12 ಸಾವಿರ ಜವಳಿ ಕಾರ್ಮಿಕರು, ಬ್ಯಾಂಕು ಮತ್ತು ಕೈರೋ ವಿಮಾನ ನಿಲ್ದಾಣದ ಕಾರ್ಮಿಕರು ಮುಷ್ಕರ ಮುಂದುವರೆಸಿದ್ದಾರೆ. ದೇಶದಾದ್ಯಂತ ಬ್ಯಾಂಕುಗಳು ಇನ್ನೂ ತೆರೆದಿಲ್ಲ. ಮುಬಾರಕ್ ಪದತ್ಯಾಗದಿಂದ ಜನರ ಚಳುವಳಿಯ ಕಾವು ಕರಗುತ್ತದೆ. ಒಡಕು ಉಂಟಾಗುತ್ತದೆ. 'ಸಾಮಾನ್ಯ ಸ್ಥಿತಿ' ಮರಳುತ್ತದೆ. ಮುಬಾರಕ್ ಇಲ್ಲದೆ ಅವನ ಆಡಳಿತ ವ್ಯವಸ್ಥೆಯನ್ನು ಹಾಗೆ ಉಳಿಸಿಕೊಳ್ಳಬಹುದು - ಎಂಬ ಅಮೆರಿಕನ್ ಮತ್ತು ಈಜಿಪ್ಟ್ ಆಳುವ ವಲಯಗಳ ಲೆಕ್ಕಾಚಾರ ತಲೆಕೆಳಗಾಗಿದೆ. ಮುಂದಾಳು ಎಲ್ ಬರ್ಡೇಯ್ (ಅಂತರ್ರಾಷ್ಟ್ರೀಯ ಅಣು ಪ್ರಾಧಿಕಾರದ ಮಾಜಿ ಮುಖ್ಯಸ್ಥ) ಯ ನಾಯಕತ್ವದಲ್ಲಿ (ತಾತ್ಕಾಲಿಕ ಮತ್ತು ಚುನಾವಣೆಯ ನಂತರವೂ) ಐಎಂಎಫ್-ಪ್ರೇರಿತ ಆರ್ಥಿಕ ನೀತಿ, ಇಸ್ರೇಲ್-ಪರ ಪ್ಯಾಲೆಸ್ಟೈನ್ ವಿರೋಧಿ ಇರಾನ್-ಭೀತಿ ಆಧಾರಿತ ವಿದೇಶ ನೀತಿ ಮುಂತಾದವನ್ನು ಉಳಿಸಿಕೊಳ್ಳಲು ಅವರು ಹೆಣಗುತ್ತಿದ್ದಾರೆ.

ಈಗಷ್ಟೇ ಬಿಚ್ಚಿಕೊಳ್ಳುತ್ತಿರುವ ಈಜಿಪ್ಟ್ ಜನತಾ ಕ್ರಾಂತಿ ಯಾವ ಹಾದಿ ಹಿಡಿಯುತ್ತದೆ ಎಂದು ಕಣಿ ಹೇಳುವುದು ಕಷ್ಟ. ಯಾವುದೇ ಜನತಾ ಕ್ರಾಂತಿಗೆ ಸಿದ್ಧ ಫಾರ್ಮುಲಾಗಳಿಲ್ಲ. ಪ್ರತಿಯೊಂದು ಪ್ರಮುಖ ಕ್ರಾಂತಿ ತನ್ನದೇ ನಡಿಗೆಯನ್ನು ಕಂಡುಕೊಳ್ಳುತ್ತದೆ. ಈ ವರೆಗೆ ಈಜಿಪ್ಟ್ ಜನತಾ ಕ್ರಾಂತಿ ಹಿಂದಿನ ಹಲವು ಸಿದ್ಧ ಮಾದರಿಗಳನ್ನು ಚಿಂದಿ ಮಾಡಿದೆ. ಈಜಿಪ್ಟಿನ ಜನತಾ ಕ್ರಾಂತಿಗೆ ಅದನ್ನು ಮುನ್ನಡೆಸಲು ಬೇಕಾದ ತನ್ನದೇ ಆದ ಗಟ್ಟಿಯಾದ ಅಂತಸ್ಸತ್ವ, ಚಾರಿತ್ರಿಕ ರಾಜಕೀಯ ಒತ್ತಡಗಳು ಇವೆ. ಅದರ ಗತಿ, ಸಫಲತೆ ಅದರ ವಿರೋಧಿ ಶಕ್ತಿಗಳು -ಅಮೆರಿಕನ್ ಸಾಮ್ರಾಜ್ಯಶಾಹಿ, ಇಸ್ರೇಲಿ ಜಿಯೋನಿಸಂ ಮತ್ತು ಸ್ಥಳೀಯ ಶ್ರೀಮಂತ ಶೇಕರು - ಎಷ್ಟರ ಮಟ್ಟಿಗೆ ಯಾವ ರೀತಿಯ ಪ್ರತಿರೋಧ ತೋರುತ್ತಾರೆ ಎಂಬುದರ ಮೇಲೂ ಅವಲಂಬಿಸುತ್ತದೆ.

"ಒಬಾಮಾ ಸಾಲೆಯನ್ನು ಅಮೆರಿಕಕ್ಕೆ ಒಯ್ದು ಹೋಟೇಲೊಂದರಲ್ಲಿ ಇಟ್ಟು ಬೀಗ ಜಡಿಯಲಿ"

ಟುನಿಶಿಯಾದಲ್ಲಿ ಆರಂಭವಾಗಿ ಈಜಿಪ್ಟಿನಲ್ಲಿ ತಾರಕಕ್ಕೇರಿ ಎರಡು ಸರ್ವಾಧಿಕಾರಿಗಳನ್ನು ಬಲಿ ತೆಗೆದುಕೊಂಡ ಜನತಾ ದಂಗೆಗಳು, ಎಲ್ಲರ ನಿರೀಕ್ಷೆಯನ್ನೂ ಮೀರಿ ಭರದಿಂದ ಪಶ್ಚಿಮ ಏಶ್ಯಾ ಮತ್ತು ಉತ್ತರ ಆಫ್ರಿಕಾದ ಹಲವು ಅರಬ್ ದೇಶಗಳಲ್ಲಿ ಹರಡುತ್ತಿವೆ. ಲಿಬ್ಯಾ, ಯೆಮೆನ್, ಬಹ್ರೈನ್, ಜೋರ್ಡಾನ್, ಅಲ್ಜೀರಿಯಾಗಳಿಗೆ ಹಬ್ಬಿದೆ. ಇರಾನನ್ನೂ ಬಿಟ್ಟಿಲ್ಲ. ಅಮೆರಿಕದ ಆಯಕಟ್ಟಿನ ಮಿಲಿಟರಿ ನೆಲೆ ಹೊಂದಿರುವ ಮತ್ತು ರಾಜಪ್ರಭುತ್ವ ಹೊಂದಿರುವ ಬಹ್ರೈನಿನಲ್ಲಿ ಮುಂದಿನ ಆಸ್ಫೋಟ ಸಂಭವಿಸಿದೆ. ರಾಜಧಾನಿ ಮನಾಮದ ಪರ್ಲ್ ಚೌಕದಲ್ಲಿ ಹಲವು ದಿನಗಳಿಂದ ಟೆಂಟುಗಳನ್ನು ಹಾಕಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಸಾವಿರಾರು ನಾಗರಿಕರ ಮೇಲೆ ರಾತ್ರಿಯಲ್ಲಿ ಭದ್ರತಾ ಪಡೆಗಳು ಎರಗಿವೆ. ಅಶ್ರುವಾಯು, ಶಾಟ್ ಗನ್ನು ಮತ್ತು ಗ್ರೆನೆಡುಗಳನ್ನು ಬಳಸಿ ಚದುರಿಸಲು ಪ್ರಯತ್ನಿಸಿವೆ. ನೂರಾರು ಸಾವು- ನೋವುಗಳಾಗಿವೆ. ಆ ನಂತರ ಪ್ರತಿಭಟನಾಕಾರರ ಧಾಟಿ ಬದಲಾಗಿದೆ. 'ಖಲೀಫಾಗೆ ಗಲ್ಲು' ಎಂಬ ಘೋಷಣೆಗಳು ಕೇಳಿ ಬಂದಿವೆ.

ಅರಬ್ ಪ್ರದೇಶದ ಅಮೆರಿಕದ ಕೈಗೊಂಬೆ ಇನ್ನೊಬ್ಬ ಕುಖ್ಯಾತ ಅಧ್ಯಕ್ಷ ಅಲಿ ಅಬ್ದುಲ್ಲಾ ಸಾಲೆ (ವಿಕಿಲೀಕ್ಸ್ ನಲ್ಲಿ ಗ್ವಾಟಾನಾಮೋ ಕೈದಿಗಳ ಸ್ವೀಕಾರಕ್ಕೆ ಚೌಕಾಶಿ ನಡೆಸಿದ) ವಿರುದ್ಧ ಯೆಮೆನಿನಲ್ಲಿ ಸಹ ದಂಗೆ ಎದ್ದಿದೆ. 30 ವರ್ಷಗಳಿಂದ ಅಧಿಕಾರದಲ್ಲಿರುವ ಸಾಲೆ 2013 ರಲ್ಲಿ ತಾನು ನಿವೃತ್ತನಾಗುತ್ತೇನೆ ಎಂದು ಹೇಳಿದರೂ ಪ್ರತಿಭಟನೆಗಳು ನಿಂತಿಲ್ಲ. ಸಾಲೆ ರಾಜೀನಾಮೆಗೆ ಒತ್ತಾಯಿಸಿ ಸಾವಿರಾರು ಜನ ಬೀದಿಗಿಳಿದಿದ್ದಾರೆ. "ಒಬಾಮಾ ಸಾಲೆಯನ್ನು

ಪುಟ 14 ಕ್ಕೆ

ತುಮುಲ-ತಳಮಳಗಳ ನಡುವೆ ದಕ್ಷಿಣ ಆಫ್ರಿಕಾ

ಪುಟ 16 ರಿಂದ

ಪಡೆದಿದ್ದ. ಆದರೆ, ನೀನ್ಯಾಕೆ ಡ್ರೈವರ್ ಕೆಲಸಕ್ಕೆ ಸೇರಿದ್ದೀಯಾ ಎಂದು ಕೇಳಿದಾಗ, ಹೌದು, ಇಲ್ಲಿ ವರ್ಣಭೇದ ನೀತಿ ಕೊನೆಗೊಂಡಿದೆ. ನಮಗೆ ರಾಜಕೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ದೊರಕಿದೆ. ನಮ್ಮವರೇ ಅಧಿಕಾರದಲ್ಲಿ ಇದ್ದಾರೆ. ಆದರೆ, ಕಂಪೆನಿಗಳು, ವಾಣಿಜ್ಯ ವ್ಯವಹಾರಗಳು, ಅವುಗಳ ಆಯಕಟ್ಟಿನ ಸ್ಥಾನಗಳು ಬಿಳಿಯರ ಕೈಯಲ್ಲಿವೆ. ವರ್ಣಭೇದ ನೀತಿ ಅಧಿಕೃತವಾಗಿ ಕೊನೆಗೊಂಡಿದ್ದರೂ ಬಿಳಿಯರು ನಮ್ಮನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಿಲ್ಲ, ಅನಿವಾರ್ಯವಾಗಿ ನಾನು ಡ್ರೈವರ್ ಕೆಲಸ ಮಾಡುತ್ತಿದ್ದೇನೆ. ನನ್ನ ಅಣ್ಣ ಸಹಾ ಡ್ರೈವರ್ ಎಂದು ತಿಳಿಸಿದ.

ಮದುವೆ ಆಗಿಲ್ಲ ಯಾಕೆ?

ನಿನಗೆ ಮದುವೆ ಆಗಿದೆಯಾ ಎಂದು ಕೇಳಿದ್ದಕ್ಕೆ ಇಲ್ಲ, ಮದುವೆಯಾಗಿಲ್ಲ, ಆದರೆ, ಎರಡು ಮಕ್ಕಳಿದ್ದಾರೆ. ಮದುವೆಯಾಗುವುದು ತೀರಾ ದುಬಾರಿ, ನನಗೆ ಒಬ್ಬಳು ಗೆಳತಿ ಇದ್ದಳು, ಅವಳು ನನ್ನ ಜೊತೆ ಇದ್ದಳು. ಅವಳಿಂದ ಇಬ್ಬರು ಮಕ್ಕಳು ಹುಟ್ಟಿದ್ದಾರೆ. ಈಗವಳು ನನ್ನ ಜೊತೆಗಿಲ್ಲ. ಮಕ್ಕಳು ಮಾತ್ರ ನನ್ನ ಜೊತೆಗಿದ್ದಾರೆ. ನನ್ನ ತಾಯಿ ನೋಡಿಕೊಳ್ಳುತ್ತಿದ್ದಾರೆ ಎಂದ. ಕರಿಯ ಡ್ರೈವರ್‌ನ ಈ ಮಾತುಗಳು ದಕ್ಷಿಣ ಆಫ್ರಿಕಾದ ಈಗಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸ್ಥಿತಿಗೆ ಕನ್ನಡಿ ಹಿಡಿಯುವಂತಿತ್ತು.

ನಗರ ವೈಭವ

ದಕ್ಷಿಣ ಆಫ್ರಿಕಾದಲ್ಲಿ ನಾವು ನೋಡಿದ ನಗರಗಳಾದ ಪ್ರಿಟೋರಿಯಾ, ಜೋಹಾನ್ಸ್‌ಬರ್ಗ್‌ಗಳು ನಮಗೆ ಬೇರೆಯೇ ಜಗತ್ತಿನಲ್ಲಿದ್ದ ಅನುಭವವನ್ನು ನೀಡುತ್ತಿದ್ದವು. ಭಾರತದ ನಗರಗಳ ಹದಗೆಟ್ಟ ರಸ್ತೆಗಳು, ಅಲ್ಲಲ್ಲಿ ರಾಶಿ ಬಿದ್ದಿರುವ ಕೊಳಕು ತ್ಯಾಜ್ಯಗಳು, ಗಲೀಜು ಚರಂಡಿಗಳು, ಅಡ್ಡಾದಿಡ್ಡಿ ಕಟ್ಟಡಗಳು, ಕೆಟ್ಟ ಟ್ರಾಫಿಕ್ ಜಾಮ್‌ನಿಂದ ಆಫ್ರಿಕಾದ ನಗರಗಳು ಮುಕ್ತವಾಗಿದ್ದವು. ಕ್ರಮಬದ್ಧವಾಗಿ ಆಕಾಶವನ್ನು ಚುಂಬಿಸಲು ಪೈಪೋಟಿ ನಡೆಸುವಂತೆ ಎದ್ದು ನಿಂತ ಬಹುಮಹಡಿ ಕಟ್ಟಡಗಳು, ಅವುಗಳ ಸುಂದರ ವಿನ್ಯಾಸ, ವಿಶಾಲವಾದ ಸ್ವಿರ ರಸ್ತೆಗಳು, ಅತ್ಯುತ್ತಮ ಟ್ರಾಫಿಕ್ ವ್ಯವಸ್ಥೆ, ಟ್ರಾಫಿಕ್ ಪೊಲೀಸರು ಇಲ್ಲದಿದ್ದರೂ ಸಂಚಾರಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ವಾಹನ ಸವಾರರು ಇವು ನಮ್ಮಲ್ಲಿ ಅಚ್ಚರಿ ಮೂಡಿಸುತ್ತಿತ್ತು.

ಏನು ಕರ್ಫ್ಯೂ ಇದೆಯಾ?

ಇಂತಹ ಸುಂದರ ಜೋಹಾನ್ಸ್‌ಬರ್ಗ್ ನಗರಕ್ಕೆ



ನಮ್ಮ ತಿರುಗಾಟದ ದಿನ ಪ್ರವೇಶಿಸುವಾಗ ಸಂಜೆ ಗಂಟೆ ಐದು ದಾಟಿತ್ತು. ಯಾವುದೋ ಕೃತಕ ಅದ್ದೂರಿ ಫಿಲಂ ಸಿಟಿಯ ರೀತಿ ಸುಂದರವಾಗಿ ಕಂಗೊಳಿಸುತ್ತಿದ್ದ ನಗರದ ಬೀದಿಗಳು ನಿರ್ಜನವಾಗಿದ್ದವು, ಅಂಗಡಿಗಳು ಬಾಗಿಲು ಎಳೆದುಕೊಂಡಿದ್ದವು, ವಾಹನಗಳು ವಿರಳವಾಗಿ ಸಂಚರಿಸುತ್ತಿದ್ದವು. ಅಲ್ಲೊಬ್ಬರು, ಇಲ್ಲೊಬ್ಬರಂತೆ ಜನರನ್ನು ಬಿಟ್ಟರೆ ಬರೀ ಗಸ್ತಿನ ಪೊಲೀಸರಷ್ಟೇ ಕಾಣಿಸುತ್ತಿದ್ದರು. ಕೋಮು ಗಲಭೆಯ ಸಂದರ್ಭದ ಕರ್ಫ್ಯೂ ಜಾರಿಯಾದ ಮಂಗಳೂರಿನ ಬೀದಿಗಳ ನೆನಪು ಹುಟ್ಟಿಸಿದ ನಗರವನ್ನು ಆಶ್ಚರ್ಯದಿಂದ ವೀಕ್ಷಿಸುತ್ತಾ ಗಾಂಧಿ ಸ್ಕ್ವೇರ್‌ನ್ನು ತಲುಪಿದೆವು.

ಯುವಕ ಗಾಂಧಿಯ ಭೇಟಿ

ಜೋಹಾನ್ಸ್‌ಬರ್ಗ್‌ನ ಹೃದಯಭಾಗವಾದ ನಿರ್ಜನವಾದ ಗಾಂಧಿ ಸ್ಕ್ವೇರ್‌ನಲ್ಲಿ ಮೈಕೊರೆಯುವ ಚಳಿಗಾಳಿಗೆ ಮೈಯೊಡ್ಡಿ ನಿಂತಿದ್ದ ಯುವಕ, ಸೂಟುಬೂಟುಧಾರಿ ಗಾಂಧೀಜಿಯ ಪ್ರತಿಮೆ ನಮ್ಮನ್ನು ಸ್ವಾಗತಿಸುತ್ತಿತ್ತು. ಬರಿಮೈಯ ಮುದುಕ ಗಾಂಧೀಜಿ ಪ್ರತಿಮೆಯನ್ನಷ್ಟೇ ಕಂಡಿದ್ದ ನಮಗೆ ಯುವಕ ಗಾಂಧಿ ನಿರ್ಜನ ಬೀದಿಯಲ್ಲಿ ಧೈರ್ಯದ ಪ್ರತೀಕ ಎಂಬಂತೆ ಕಾಣಿಸುತ್ತಿದ್ದರು. ಏಕಾಂಗಿಯಾಗಿದ್ದ ಯುವ ಗಾಂಧಿ ಜೊತೆ ಸ್ಪರ್ಧೆಗೆ ಬಿದ್ದಂತೆ ಫೋಟೋ ಹೊಡೆಸಿಕೊಂಡ ನಮಗೆ ನಗರವೇಕೆ ಬರಿದಾಗಿದೆ ಎಂಬ ಪ್ರಶ್ನೆಗೆ ಉತ್ತರ ಸಿಗದೆ ಕಾಡಿಸುತ್ತಿತ್ತು.

'ಒಟ್ಟಾಗಿರಿ ಜೋಪಾನ...'

ಗಾಂಧಿ ಸ್ಕ್ವೇರ್‌ನಿಂದ ಅಲ್ಲೇ 50 ಮೀಟರ್ ದೂರದಲ್ಲಿದ್ದ 57 ಮಹಡಿಗಳ ಗಗನಚುಂಬಿ ಕಟ್ಟಡವನ್ನು ನಗರ ವೀಕ್ಷಣೆಗಾಗಿ ತಲುಪಿದೆವು. ಕಟ್ಟಡದ ತುತ್ತ ತುದಿಯಲ್ಲಿ ನಿಂತೆವು. ಆಗ ನಮಗಾಗಿದ್ದು ಸಮುದ್ರದಂತೆ ನಾಲ್ಕೂಕಡೆ ಹರಡಿ ನಿಂತ ಅದ್ಭುತ ನಗರಿ ಜೋಹಾನ್ಸ್‌ಬರ್ಗ್‌ನ ಪಕ್ಷಿನೋಟ. ಬೃಹತ್ ವ್ಯಾಪಾರಿ ಮಾಲ್ ಆಗಿದ್ದ ಆ ಕಟ್ಟಡದ ಎಲ್ಲ ಅಂಗಡಿಗಳೂ ಮುಚ್ಚಿದ್ದವು. ಅಲ್ಲಲ್ಲಿ ಇದ್ದ ಸೆಕ್ಯೂರಿಟಿಯವರು ನಮಗೆ ಒಟ್ಟಾಗಿರುವಂತೆ, ಕಟ್ಟಡದ ಹೊರಗೆ ಹೋಗದಂತೆ ಎಚ್ಚರಿಸುತ್ತಿದ್ದರು. ಈ ಎಚ್ಚರಿಕೆ, ಜಾಗರೂಕತೆ ನನಗೆ ಕುತೂಹಲ ಮೂಡಿಸುತ್ತಿತ್ತು. ಎಲ್ಲರೂ ಜತೆಯಾದ ನಂತರ ಗುಂಪು ಸೇರಿಸಿ ಹಿಂದೆ ಮುಂದೆ ಸೆಕ್ಯೂರಿಟಿ ಮತ್ತು ಪೊಲೀಸರ ಭದ್ರತೆಯೊಂದಿಗೆ 50 ಮೀಟರ್ ನಡೆಸಿಕೊಂಡು ಕರೆದೊಯ್ದು ನಮ್ಮ ವಾಹನ ಹತ್ತಿಸಿ ಎಲ್ಲಿಯೂ ನಿಲ್ಲದೆ ಪ್ರಯಾಣಿಸಿ ಎಂದು ಎಚ್ಚರಿಸಿ ಬೀಳ್ಕೊಟ್ಟರು. ಇದು ಒಂದು ವಿಚಿತ್ರ ಅನುಭವವನ್ನು ನೀಡಿತು. ಆಫ್ರಿಕಾದ ಶ್ರೀಮಂತಿಕೆಯು, ಜೋಹಾನ್ಸ್‌ಬರ್ಗ್‌ನ ಅದ್ದೂರಿತನದ ಹಿಂದಿರುವ ಕತ್ತಲು ಇದರಿಂದ ನಮಗೆ ಗೋಚರಿಸತೊಡಗಿತು.

ಜೋಹಾನ್ಸ್‌ಬರ್ಗ್‌ನಲ್ಲಿ ಸಾಯಂಕಾಲ 5 ಗಂಟೆಗೆ ಅಂಗಡಿಗಳು ಬಾಗಿಲು ಮುಚ್ಚುತ್ತವೆ. ವ್ಯವಹಾರಗಳು, ಕಚೇರಿ, ಮಾರುಕಟ್ಟೆಗಳು ಸ್ವಯಂ ಪ್ರೇರಿತವಾಗಿ ಸ್ಥಗಿತಗೊಳ್ಳುತ್ತವೆ. 6 ಗಂಟೆಗೆ ನಗರ ಬರಿದಾಗುತ್ತದೆ. ಇದು ಒಂದೆರಡು ದಿವಸಗಳ ಕಥೆಯಲ್ಲ. ಕಳೆದ ಕೆಲವು ವರ್ಷಗಳಿಂದ ಇದು ನಡೆದುಬರುತ್ತಿದೆ. ನಮ್ಮಲ್ಲಿ ಕೋಮು ಹಿಂಸೆಗಳು ನಡೆಯುವ ಸಾಧ್ಯತೆಗಳಿದ್ದಾಗ ಒಂದೆರಡು ದಿವಸಗಳ ವರೆಗೆ ಪೊಲೀಸರು ಈ ರೀತಿಯಲ್ಲಿ ಸಾಯಂಕಾಲ ಅಂಗಡಿ ಮುಚ್ಚಿಸುತ್ತಾರೆ. ಆಗ ನಮಗೆ ಉಸಿರುಗಟ್ಟಿದ ಅನುಭವವಾಗುತ್ತದೆ. ಆದರೆ, ಆಫ್ರಿಕಾದ ಜನ ಇದಕ್ಕೆ ಅನಿವಾರ್ಯವಾಗಿ ಒಗ್ಗಿ ಹೋಗಿದ್ದಾರೆ.

(ಮುಂದುವರೆಯುವುದು)



ಯಾರೀಕೆ?
ಇವರು ಮಂಡ್ಯದ ಬಿಸಿಯೂಟ ಕಾರ್ಯಕರ್ತೆ. ಇವರನ್ನು ಸುತ್ತುವರಿದಿರುವವರು ಪೊಲೀಸರು. ಇವರು ಮಾಡಿದ ಅಪರಾಧವೇನು? ನಿರೀಕ್ಷಿಸಿ.

ಯಾರಿಗಾಗಿ ಯುಪಿಎ ಸರ್ಕಾರ?

ಪುಟ 8 ರಿಂದ

ಸಾರ್ವಜನಿಕ ಚರ್ಚೆಯಲ್ಲಂತೂ ಆಗಲೇ ಇದ್ದವು. ಆದರೂ ಶ್ರೀಯುತ ರಾಜ ಅವರಿಂದ ಪ್ರತಿಜ್ಞಾ ಸ್ವೀಕಾರ ನಡೆಸಲಾಯಿತು.

ಈಗಲಾದರೂ, ಪ್ರಧಾನ ಮಂತ್ರಿಗಳು ತನ್ನನ್ನು ಜೂಲಿಯಸ್ ಸೀಜರನ ಹೆಂಡತಿಗೆ ಹೋಲಿಸಿಕೊಂಡು, ಆಕೆಯಂತೆ ತಾನೂ ಸಂದೇಹಾತಿತನಾಗಬೇಕು ಎಂದು ಒಪ್ಪಿಕೊಂಡ ಮೇಲಾದರೂ, ಜೆಪಿಸಿಯನ್ನು ರಚಿಸಲಾಗುತ್ತದೆ, ಮುಂಬರುವ ಬಜೆಟ್ ಅಧಿವೇಶನದಲ್ಲಿ ಸುಲಲಿತವಾಗಿ ಕಲಾಪ ನಡೆಸುವಂತಾಗುತ್ತದೆ ಎಂದು ಆಶಿಸಬೇಕಷ್ಟೇ.

ಮುಕ್ತ ಆರ್ಥಿಕವಾದ್ದರಿಂದ.....!

ಬೆಲೆಯೇರಿಕೆ ಕುರಿತಂತೆ, ಬಜೆಟ್ ಶೀಘ್ರದಲ್ಲೇ ಬರಲಿರುವುದರಿಂದ ತಾನು ಧೋರಣೆ ಕುರಿತ ಪ್ರಕಟಣೆಗಳನ್ನೇನೂ ಮಾಡುವುದಿಲ್ಲ ಎಂದು ಪ್ರಧಾನ ಮಂತ್ರಿಗಳು ತಪ್ಪಿಸಿಕೊಂಡರು. ಇನ್ನೂ ಕೆಟ್ಟ ಸಂಗತಿಯೆಂದರೆ, ಭಾರತ ಈಗ ಒಂದು ಮುಕ್ತ ಆರ್ಥಿಕವಾದ್ದರಿಂದ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ತಮ್ಮ ಸರಕಾರಕ್ಕೆ ಇರುವ ಅವಕಾಶಗಳು ತೀರಾ ಕಡಿಮೆ ಎಂದೂ ಅವರು ಹೇಳಿದ್ದಾರೆ. ಆದ್ದರಿಂದ ಅವಶ್ಯಕ ಸರಕುಗಳಲ್ಲಿ ಸಟ್ಟಾಕೋರ ವ್ಯಾಪಾರವನ್ನು ನಿಷೇಧಿಸುವ ಬಗ್ಗೆಯಾಗಲೀ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಬಗ್ಗೆಯಾಗಲೀ ಯಾವುದೇ ಭರವಸೆ ಕೊಡಲು ಅವರು ನಿರಾಕರಿಸಿದರು. ಇವು ಯಾವವೂ ಬಜೆಟ್ ಕಸರತ್ತಿಗೆ ಸಂಬಂಧಪಟ್ಟ ವಿಷಯಗಳೇನಲ್ಲ. ಆದರೂ ಪ್ರಧಾನ ಮಂತ್ರಿಗಳು ಈ ಪ್ರಶ್ನೆಗಳ ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ.

ಭ್ರಷ್ಟಾಚಾರ ಮತ್ತು ಬೆಲೆಯೇರಿಕೆಯ ಈ ಎರಡೂ ವಿಷಯಗಳಲ್ಲಿ ಪ್ರಧಾನ ಮಂತ್ರಿಗಳು 'ಆಮ್ ಆದ್ಮಿ' ಎಂಬ ಜನಸಮೂಹಕ್ಕೆ ಯಾವುದೇ ವಿಶ್ವಾಸವನ್ನು ಅಥವ ಭರವಸೆಯನ್ನು ಕೊಡುವಲ್ಲಿ ವಿಫಲರಾಗಿದ್ದಾರೆ ಎಂಬುದಂತೂ ಸ್ಪಷ್ಟ.

ಆದರೆ, ಪ್ರಧಾನ ಮಂತ್ರಿಗಳು, ಕಳೆದ ವರ್ಷ ವಿದೇಶಿ ಬಂಡವಾಳದ ಹರಿವಿನಲ್ಲಿ 31ಶೇ.ದಷ್ಟು ತೀವ್ರ ಇಳಿಕೆಯಾಗಿದೆ ಎಂಬ ಸಂಗತಿಯತ್ತ ಗಮನ ಸೆಳೆದ ಪ್ರಶ್ನೆಗೆ ಉತ್ತರಿಸುತ್ತ, ಪ್ರಮುಖ ಆರ್ಥಿಕ ಸುಧಾರಣೆಗಳು ಇನ್ನೇನು ಬರಲಿವೆ ಎಂಬ ಸಂಕೇತವನ್ನು ಕೊಟ್ಟರು. ಅಂದರೆ ಯುಪಿಎ-1 ಅಧಿಕಾರಾವಧಿಯಲ್ಲಿ ಎಡಪಕ್ಷಗಳು ತಡೆದು ನಿಲ್ಲಿಸಿದ ಹಣಕಾಸು ಉದಾರೀಕರಣದ ಸುಧಾರಣೆಗಳು- ವಿಮಾ ವಲಯದಲ್ಲಿ ಎಫ್‌ಡಿಐ ಮಿತಿ ಏರಿಕೆ, ಇನ್ನಷ್ಟು ಖಾಸಗೀಕರಣಕ್ಕೆ ಬ್ಯಾಂಕಿಂಗ್ ಸುಧಾರಣೆಗಳು, ರೂಪಾಯಿಯ ಪೂರ್ಣ ಪರಿವರ್ತನೀಯತೆ ಮತ್ತು ಪೆನ್ಷನ್ ನಿಧಿಗಳ ಖಾಸಗೀಕರಣ ಮುಂತಾದವನ್ನೆಲ್ಲ ತರುವ ಸಿದ್ಧತೆಯಾಗುತ್ತಿದೆ. ಹೀಗೆ ಜಾಗತಿಕ ಹಿಂಜರಿತದ ವಿನಾಶಕಾರೀ ಪರಿಣಾಮಗಳನ್ನು ಎದುರಿಸುವಲ್ಲಿ ಭಾರತೀಯ ಆರ್ಥಿಕಕ್ಕೆ ನೀಡಿದ್ದ ಶಕ್ತಿಯನ್ನು ಈಗ ದುರ್ಬಲಗೊಳಿಸಲಾಗುವುದು. ಇದು ವಿದೇಶಿ ಮತ್ತು ದೇಶಿ ಬಂಡವಾಳಕ್ಕೆ ಮಹಾ ಲಾಭಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳನ್ನು ಒದಗಿಸುತ್ತಲೇ, ಕೋಟ್ಯಂತರ ಭಾರತೀಯ ಜನತೆಯನ್ನು ಸಂಪೂರ್ಣವಾಗಿ ಮುಳುಗಿಸಿ ಬಿಡಲಿದೆ.

ಪಶ್ಚಿಮ ಬಂಗಾಳದಲ್ಲಿ ಈಗ ಏನು ನಡೆದಿದೆ ಎಂಬ ಕುತೂಹಲ ಅಲ್ಲಿನ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಈ ವಾರ ಓದಿ, ಸಚಿವರನ್ನು ಕೊಲ್ಲುವ ಮಾವೋವಾದಿಗಳ ಸಂಚು, ಮುಂದಿನ ಚುನಾವಣೆಗೆ ಎಂದಿನ ಬಹಿಷ್ಕಾರದ ಬದಲಿಗೆ ತೃಣಮೂಲಕ್ಕೆ ಬೆಂಬಲ ನೀಡುವ ಈ ನಕ್ಸಲ್‌ವಾದಿಗಳ ಘೋಷಣೆ, ಸಿಪಿಐ(ಎಂ)ನ ಬೃಹತ್ ಸಿಂಗೂರು ರ್‍ಯಾಲಿ ಇತ್ಯಾದಿ ಕುರಿತು...

ಟಿಎಂಸಿ-ಮಾವೋವಾದಿಗಳ ಜೊತೆ ಸ್ಪಷ್ಟಗೊಂಡ ತೃಣಮೂಲಿಗಳ ನಂಟು

ಕನ್ನಡಕ್ಕೆ: ಸಿದ್ದು ಸಿ

ಪಶ್ಚಿಮ ಬಂಗಾಳ ಕಳೆದ ಮೂರು ವರ್ಷಗಳಿಂದ ರಾಜಕೀಯ ಹಿಂಸಾಚಾರಕ್ಕೆ ತುತ್ತಾಗಿತ್ತು. ಇದಕ್ಕೆಲ್ಲ ತೃಣಮೂಲ ಕಾಂಗ್ರೆಸ್ ಮತ್ತು ನಕ್ಸಲೀಯರ ನಂಟು ಎಂಬುದು ಈಗ ಜಗಜ್ಜಾಹೀರಾಗುತ್ತಿದೆ. ಈ ಹಿಂಸಾಚಾರ ಮುಖ್ಯವಾಗಿ ಪಾಶ್ಚಿಮಾತ್ಯ 3 ಜಿಲ್ಲೆಗಳಲ್ಲಿ, ಜಂಗಲ್ ಮಹಲ್ ಎಂದು ಹೆಸರುವಾಸಿಯಾದ ಪ್ರದೇಶಕ್ಕೆ ಕೇಂದ್ರೀಕೃತವಾಗಿತ್ತು. ಕಳೆದ ಮೂರು ವರ್ಷಗಳಿಂದ ನಡೆದ ಹಲವು ಘಟನೆಗಳು ಇದಕ್ಕೆ ಸಾಕ್ಷಿಯಾಗಿವೆ.

2009ರ ಲೋಕಸಭಾ ಚುನಾವಣೆ ನಂತರ ಸಿಪಿಐಎಂ ಮೇಲಿನ ದಾಳಿ ಮತ್ತಷ್ಟು ತೀವ್ರಗೊಂಡಿತು. ಈ ಕಾಲಾವಧಿಯಲ್ಲಿ 250ಕ್ಕೂ ಹೆಚ್ಚು ಕಾರ್ಯಕರ್ತರು, ಹಿತೈಷಿಗಳು ತೃಣಮೂಲಿ-ನಕ್ಸಲೀಯರ ರಣಬೇಟೆಗೆ ತುತ್ತಾಗಿದ್ದರು. ಈ ಹತ್ಯೆಯ ಬಹುತೇಕ ಪ್ರಕರಣಗಳು ಮಾವೋ ಉಗ್ರರು ಮತ್ತು ತೃಣಮೂಲಿಗಳ ಜಂಟಿ ಸಹಭಾಗಿತ್ವದಲ್ಲಿ ನಡೆದಿತ್ತು.

160 ಮಂದಿಯನ್ನು ದಾರುಣವಾಗಿ ಬಲಿತೆಗೆದುಕೊಂಡ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ಪ್ರಕರಣದಲ್ಲಿ ಈ ಮೈತ್ರಿಯ ಕೈವಾಡ ಮತ್ತೊಮ್ಮೆ ಜಗಜ್ಜಾಹೀರಾಗಿದೆ. ಪ್ರಕರಣದ ವಿಚಾರಣೆ ನಡೆಸಿದ ಬಳಿಕ ಸಿಬಿಐ ಸಲ್ಲಿಸಿದ ಆರೋಪ ಪಟ್ಟಿಯೂ ಇದನ್ನೇ ಸಾರಿ ಹೇಳುತ್ತಿದೆ.



ಸಿಂಗೂರಿನಲ್ಲಿ ಸಿಪಿಐ(ಎಂ) ರ್‍ಯಾಲಿಗೆ ನೆರೆದಿರುವ ಬೃಹತ್ ಜನಸ್ತೋಮದ ಒಂದು ಭಾಗದ ಚಿತ್ರ

ಇದಿಷ್ಟೇ ಅಲ್ಲ, ತೃಣಮೂಲ ಕಾಂಗ್ರೆಸ್ ಮತ್ತು ನಕ್ಸಲೀಯ ಸಂಘಟನೆಗಳ ನಂಟಿನ ಕುರಿತ ಹಲವು ಸುದ್ದಿಗಳು ಹೊಸ ಹೊಸ ಮೂಲಗಳಿಂದ ಹೊರಬರತೊಡಗಿದೆ. ಅಷ್ಟೇ ಏಕೆ, ತೃಣಮೂಲ ಹಾಗೂ ನಕ್ಸಲ್ ಮೂಲಗಳೂ ಅದನ್ನೇ ಹೇಳತೊಡಗಿವೆ.

ಸ್ವತಃ ತೃಣಮೂಲ ಕಾಂಗ್ರೆಸ್‌ನ ಲೋಕಸಭಾ ಸದಸ್ಯ ಕಬೀರ್ ಸುಮನ್ ಬಹಿರಂಗವಾಗಿಯೇ ಇದನ್ನು ಒಪ್ಪಿಕೊಂಡಿದ್ದಾರೆ. ಇತ್ತೀಚೆಗೆ ನಡೆದ 'ನಿಶಾನೇರ್ ನಮ್ ತಪೊಷಿ ಮಲಿಕ್' ಎಂಬ ತಮ್ಮ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ತಮ್ಮ ಸಮಾಜಬಾಹಿರ ಅಪವಿತ್ರ ಮೈತ್ರಿಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಇದೀಗ ನ್ಯಾಯಾಂಗ ಬಂಧನದಲ್ಲಿ ಇರುವ ಮಾವೋವಾದಿ ನಾಯಕನ ಮಾತನ್ನು ಪುನರುಚ್ಚರಿಸಿದ್ದಾರೆ. ಕೊಲ್ಕತ್ತಾದ ತೃಣಮೂಲ ಕಾಂಗ್ರೆಸ್‌ನ ಕೇಂದ್ರ ಕಚೇರಿಯೇ ಗುಪ್ತ ಸಭೆಗಳ ಕಾರಸ್ಥಾನವಾಗಿತ್ತು. ಇಲ್ಲೇ ತೃಣಮೂಲಿಗಳು, ಮಾವೋವಾದಿ ನಾಯಕರು ತಮ್ಮ ಚಟುವಟಿಕೆಯ ತಂತ್ರಗಳನ್ನು ಹೆಣೆಯುತ್ತಿದ್ದರು. ತಾನೇ ಸ್ವತಃ ಇಂತಹ ಅನೇಕ ಸಭೆಗಳಿಗೆ ಕಣ್ಣಾರೆ ಸಾಕ್ಷಿ ಎಂಬುದನ್ನು ಕಬೀರ್ ಸುಮನ್ ಈ ಸಭೆಯಲ್ಲಿ ಹೇಳಿದ್ದಾರೆ. ಕಬೀರ್ ಸುಮನ್ ತಾನು ಬರೆದ ಆತ್ಮಚರಿತ್ರೆಯನ್ನು ಸಿಪಿಐ ಮಾವೋವಾದಿ ಪಾಲಿಟ್‌ಬ್ಯೂರೋ [illegible] ಕಿಶನ್‌ಜಿಗೆ ಅರ್ಪಿಸಿದ್ದಾರೆ ಎಂಬುದು [illegible] ಗಮನಾರ್ಹ ಸಂಗತಿ.

ಪುಟ 15 ಕ್ಕೆ

ಚುನಾವಣೆ ಬಹಿಷ್ಕಾರವಿಲ್ಲ ತೃಣಮೂಲಕ್ಕೆ ಬೆಂಬಲ

ಮಾವೋವಾದಿಗಳ ವರಸೆ

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಮತ್ತು ಮಮತಾ ಬ್ಯಾನರ್ಜಿಗೆ ಎಲ್ಲ ರೀತಿಯ ಬೆಂಬಲ ನೀಡುವುದಾಗಿ ಉನ್ನತ ಮಾವೋವಾದಿ ನಾಕ ವಿಕ್ರಮ್ ಹೇಳಿದ್ದಾನೆ. ಇದು ತೃಣಮೂಲ ಮತ್ತು ನಕ್ಸಲೀಯರ ನಂಟಿಗೆ ಮತ್ತೊಂದು ಸ್ಪಷ್ಟ ಪುರಾವೆ. ಜನವರಿ 12ರಂದು ಮಾಧ್ಯಮಕ್ಕೆ ಬಿಡುಗಡೆ ಮಾಡಲಾದ ಹೇಳಿಕೆಯಲ್ಲಿ ಮಾವೋವಾದಿಗಳು ಈ ಬಾರಿ ಚುನಾವಣಾ ಬಹಿಷ್ಕಾರ ಮಾಡುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಜಂಟಿ ಸೇನಾಪಡೆಗಳ ವಾಪಸಾತಿ ಕುರಿತ ತಮ್ಮ ಬೇಡಿಕೆ ಬೆಂಬಲಿಸಿದರೆ ತೃಣಮೂಲ ಮತ್ತು ಮಮತಾಗೆ ತಮ್ಮ ಬೆಂಬಲ ಎಂದು ಅವರು ಪುನರುಚ್ಚರಿಸಿದ್ದಾರೆ. ಕೇಂದ್ರ ಸಂಪುಟಕ್ಕೆ ಮಮತಾ ರಾಜೀನಾಮೆ ನೀಡಬೇಕೆಂದು ಅವರು ಬಯಸಿದ್ದಾರೆ. ಮಮತಾ ಅವರನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯನ್ನಾಗಿ ನೋಡಲು ಬಯಸುತ್ತೇವೆ ಎಂಬ 2009ರ ಅಕ್ಟೋಬರ್ ವೇಳೆ ಕಿಶನ್‌ಜಿ ನೀಡಿದ ಹೇಳಿಕೆಯನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಇಷ್ಟೆಲ್ಲಾ ಆದರೂ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಮಾತ್ರ ವಿಚಿತ್ರವಾಗಿದೆ. ಮಾವೋವಾದಿಗಳ ವಿರುದ್ಧ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲೇ, ತನ್ನ ಸಂಪುಟದ ಸಹೋದ್ಯೋಗಿ ಪಕ್ಷವೊಂದು ಮಾವೋವಾದಿಗಳ ಜೊತೆ ಆಳವಾದ ನಂಟು ಹೊಂದಿದ್ದು, ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇದರಿಂದ ಕಾಂಗ್ರೆಸ್ ಕೂಡ ಮಾವೋವಾದಿಗಳಿಗೆ ಬೆಂಬಲ ನೀಡುವ ಹಾಗೂ ಅವರೊಂದಿಗೆ ನಂಟು ಹೊಂದಿರುವ ಪಕ್ಷದ ಜೊತೆ ಮೈತ್ರಿ ಮಾಡಿರುವುದು ಸ್ಪಷ್ಟವಾಗಿದೆ.

ವಾಸ್ತವ ಪರಿಸ್ಥಿತಿಯನ್ನು ತೆರೆದಿಡುವ ಹತ್ತು ಹಲವು ಘಟನೆಗಳು, ನಿದರ್ಶನಗಳು, ಸಾಕ್ಷ್ಯಗಳು ಕೇಂದ್ರ ಸರ್ಕಾರದ ಮುಂದಿದ್ದರೂ ಅದಕ್ಕೆ ಸೂಕ್ತ ಕ್ರಮ ಕೈಗೊಂಡಿಲ್ಲ. ಇನ್ನೇನು ಪಶ್ಚಿಮ ಬಂಗಾಳದ ಚುನಾವಣೆ ಬಂತು ಎಂಬ ಕಾರಣಕ್ಕೆ ಈ ಎಲ್ಲ ಸಾಕ್ಷ್ಯಗಳಿಗಿಂತಲೂ ಕೇಂದ್ರ ಗೃಹ ಸಚಿವರಿಗೆ ಸಿಪಿಐ(ಎಂ) ಮೇಲೆ ವಿನಾಕಾರಣ ಆರೋಪ ಮಾಡುವ ಹುಚ್ಚು ಚೇಷ್ಟೆ.

ಸಚಿವರನ್ನ ಕೊಲ್ಲುವ ಸಂಚು

ಮಾಧ್ಯಮದಲ್ಲಿ ಪ್ರಕಟವಾದ ಸಿಐಡಿ ವರದಿಗಳ ಪ್ರಕಾರ, ಪಶ್ಚಿಮ ಬಂಗಾಳದ ಪಾಶ್ಚಿಮಾತ್ಯ ಜಿಲ್ಲೆಗಳ ಅಭಿವೃದ್ಧಿಯ ಹೊಣೆ ಹೊತ್ತ ಸಚಿವ ಸುಶಾಂತ್ ಘೋಷ್ ಹತ್ಯೆಗೆ ತೃಣಮೂಲಿಗಳು ಮಾವೋಗಳ ಜೊತೆ ಸೇರಿ ಯೋಜನೆ ರೂಪಿಸಿದ್ದರು.

ಇವರ ನಂಟಿನ ಇನ್ನೊಂದು ಮಹತ್ವದ ಸಾಕ್ಷ್ಯವೂ ಹೊರಬಿದ್ದಿದೆ. ನಕ್ಸಲೀಯರ ಮತ್ತೊಬ್ಬ ಬಂಧಿತ ನಾಯಕ ಮಧುಸೂದನ ಮೊಂಡಲ್ ಅಲಿಯಾಸ್ ನಾರಾಯಣ್ ಸಿಐಡಿಗೆ ತೃಣಮೂಲಿ-ಮಾವೋ ನಂಟಿನ ಮತ್ತಷ್ಟು ಮುಖಗಳ ಪರಿಚಯ ಮಾಡಿಕೊಟ್ಟಿದ್ದಾನೆ.


2007ರ ಆರಂಭದ ದಿನಗಳಲ್ಲಿ ನಂದಿಗ್ರಾಮದ ಗಲಾಟೆ ತಾರಕಕ್ಕೇರಿತ್ತು. ಆ ಸಂದರ್ಭದಲ್ಲಿ ಮಧುಸೂದನ್‌ಗೆ ಸುಭೇಂದು ಅಧಿಕಾರಿಯ ಪರಿಚಯವಾಗಿತ್ತು. ಶೇಖ್ ಸೂಫಿಯಾನ್ ಎಂಬ ಟಿಎಂಸಿ ಸ್ಥಳೀಯ ನಾಯಕನ ಮನೆಯಲ್ಲಿ, ಇಲ್ಲಿ ನಡೆದ ಮಹತ್ವದ ಸಭೆಯಲ್ಲಿ ನಂದಿಗ್ರಾಮದ ಭೂಮಿ ಉಚ್ಛೆಡ್ ಪ್ರತಿರೋಧ್ ಸಮಿತಿ(ಬಿಯುಪಿಸಿ) ಅಸ್ತಿತ್ವಕ್ಕೆ ತರುವ ಚರ್ಚೆಗಳು ನಡೆದವು. ಜಾರ್ಗ್ರಾಮ್ ಉಪ ವಿಭಾಗದಲ್ಲಿ ಈ ಸಂಘಟನೆ ಕಟ್ಟಿಬೆಳೆಸಲು, ಸಭೆ ಸಮಾರಂಭಗಳನ್ನು ನಡೆಸಲು ಸುಭೇಂದು ಅಧಿಕಾರಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಎಂದು ಮೊಂಡಲ್ ಹೇಳಿದ್ದಾನೆ. ಅಲ್ಲದೆ, ನಂದಿಗ್ರಾಮ ಹೋರಾಟದುದ್ದಕ್ಕೂ ತಾನು ಅಧಿಕಾರಿ ಜೊತೆ ನಿಕಟ ಸಂಪರ್ಕ ಇಟ್ಟಿದ್ದೆ ಎಂದು ಸಿಐಡಿ ವಿಚಾರಣೆಯಲ್ಲಿ ಹೇಳಿಕೊಂಡಿದ್ದಾನೆ.

ಮಾವೋವಾದಿ ಚಳವಳಿಯಲ್ಲಿ ಮಧುಸೂದನ್‌ಗೆ ಭೂಗತ ಚಟುವಟಿಕೆಯನ್ನು ಮುನ್ನಡೆಸುವ ಹೊಣೆ, ಜೊತೆಗೆ ಸೊನಾಚುರಾದಲ್ಲಿ ಶಸ್ತ್ರ ತರಬೇತಿ ಶಿಬಿರದ ಜವಾಬ್ದಾರಿ. ಸುಭೇಂದು ಅಧಿಕಾರಿಗೆ ಬಿಯುಪಿಸಿ ಸಂಘಟನೆಯ ರ್‍ಯಾಲಿ, ಸಭೆಗಳನ್ನು ಸಂಘಟಿಸುವ ಜವಾಬ್ದಾರಿ.

ಕೊಂಟಾಯ್ ಎಂಬ ಪ್ರದೇಶದಲ್ಲಿ ಶಸ್ತ್ರ ಬಳಸುವ ಪರಿಣತಿ ಇದ್ದ ಜನರನ್ನು ಸುಭೇಂದು ಕರೆತಂದಿದ್ದ. ಅಷ್ಟೇ ಅಲ್ಲದೆ, ಭೂಗತರಾಗಿದ್ದ ನಕ್ಸಲೀಯರಿಗೆ ಸಜೀವ ಗುಂಡುಗಳು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸುವ ವ್ಯವಸ್ಥೆಯನ್ನೂ ಮಾಡಿದ್ದ.

ಇತ್ತೀಚೆಗೆ ಬಂಧಿಸಲ್ಪಟ್ಟ ಸಿಪಿಐ ಮಾವೋವಾದಿಯ ರಾಜ್ಯ ಕಾರ್ಯದರ್ಶಿ ಸುದೀಪ್ ಚೋಗ್ದರ್ ಅಲಿಯಾಸ್ ಕಾಂಚನ್ ಕೂಡ ಮತ್ತಷ್ಟು ಪೂರಕ ಮಾಹಿತಿ ಒದಗಿಸಿದ್ದಾನೆ. ಸುಭೇಂದು ಅಧಿಕಾರಿಯೊಂದಿಗೆ ತಾನು ಪ್ರತಿನಿತ್ಯ ಸಂಪರ್ಕದಲ್ಲಿದ್ದೆ ಎಂಬುದನ್ನು ಒಪ್ಪಿಕೊಂಡಿದ್ದಾನೆ. ಜಂಗಲ್ ಮಹಲ್‌ನ್ನು ಸಶಸ್ತ್ರ ಪಡೆಗಳ ಕೇಂದ್ರ ಕಾರಸ್ಥಾನವಾಗಿ ರೂಪಿಸುವಲ್ಲಿ ಈತ ಸಕ್ರಿಯ ಪಾತ್ರ ವಹಿಸಿದ ಬಗೆಯನ್ನು ವಿವರಿಸಿದ್ದಾನೆ.

ಸಿಪಿಐ(ಎಂ)ನ್ನು ಎದುರಿಸಲು ತೃಣಮೂಲ ಕಾಂಗ್ರೆಸ್‌ನ್ನು ಬೆಂಬಲಿಸುವ ಬಿಯುಪಿಸಿ ಸಂಘಟನೆಯ ಕಾರ್ಯಕರ್ತರಿಗೆ ಸಶಸ್ತ್ರ ತರಬೇತಿ ನೀಡುವ ಬಗ್ಗೆ ಸುಭೇಂದು ಅಧಿಕಾರಿ ಮತ್ತು ಇತರ ನಾಯಕರು ಸ್ಪಷ್ಟ ನಿರ್ದೇಶನ ನೀಡುತ್ತಿದ್ದರು ಎಂದು ಚೋಗ್ದರ್ ಸಿಐಡಿ ಪೊಲೀಸರಿಗೆ ತಿಳಿಸಿದ್ದಾನೆ.



ಭುವನೇಶ್ವರಿ ತಾಯಿ ಪ್ರತಿಮೆ ಸ್ಥಾಪಿಸಲು ಕೋಟಿ ಇಪ್ಪತ್ತೈದು
ಕ್ಷಮಿಸಿ, ಪುರುಸೊತ್ತಿಲ್ಲ... ವಿಷ ಕುಡಿವ ರೈತರ ನೋಡಲಾಗದು

ಬಿಜೆಪಿ ದರ್ಬಾರ್

ಈ ವಿಚಾರವನ್ನು ಯಾವ ಮಾತುಗಳಲ್ಲಿ ಬಣ್ಣಿಸುವುದೋ ಅರ್ಥವಾಗುತ್ತಿಲ್ಲ...ಮೊನ್ನೆ ತಾನೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಾರಿ ಜನೋತ್ಸಾಹದೊಂದಿಗೆ ನಡೆಯಿತಲ್ಲ. ಅಲ್ಲಿ ಬಾರಿ ಸಂಖ್ಯೆಯಲ್ಲಿ ನೆರೆದ ಸಾಹಿತ್ಯಾಭಿಮಾನಿಗಳನ್ನು ನೋಡಿ ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಏನನ್ನಿಸಿತೋ ಗೊತ್ತಿಲ್ಲ. ಘೋಷಣೆ ಮಾಡೇ ಬಿಟ್ಟರು. ತಾಯಿ ಭುವನೇಶ್ವರಿ ಪ್ರತಿಮೆ ಸ್ಥಾಪನೆಗೆ 25 ಕೋಟಿ ಕೊಡುಗೆ ಸರ್ಕಾರದಿಂದ ಅಂತ.


ಬೆಂಗಳೂರಿನಲ್ಲಿ ಇತ್ತ ಸಮ್ಮೇಳನ ಎಂಬ ಸಂಭ್ರಮ ನಡೆದಿರುವಾಗಲೇ ಅತ್ತ ಗುಲ್ಬರ್ಗದ ಜೇವರ್ಗಿಯಲ್ಲಿ ತೊಗರಿ ಬೆಳೆದ ಹದಿನೈದು ಜನ ರೈತರು ಬೆಳೆಗೆ ಸರಿಯಾದ ಬೆಲೆ ಸಿಗದ ಕಾರಣಕ್ಕೆ ವಿಷ ಕುಡಿದಿದ್ದರು. ನೆರೆ ದಾಳಿಗೆ ತುತ್ತಾದ ಜನರ ಬದುಕಿಗೆ ಸರಿಯಾದ ಆಸರೆ ಒದಗಿಸದ ಸರ್ಕಾರ, ಕೃಷಿ ಬಿಕ್ಕಟ್ಟಿನ ಸುಳಿಗೆ ಸಿಲುಕಿ ಪ್ರಾಣಗಳನ್ನೇ ಕಳೆದುಕೊಳ್ಳುತ್ತಿರುವ ರೈತರ ನೆರವಿಗೆ ಬಂದು ಸಾಂತ್ವಾನ ಹೇಳದ ಸರ್ಕಾರ ಭುವನೇಶ್ವರಿ ಪ್ರತಿಮೆ ಸ್ಥಾಪನೆಗೆ 25 ಕೋಟಿ ರೂಪಾಯಿ ಕೊಡಲು ಮುಂದಾಗಿರುವುದು ನೋಡಿ ನಮ್ಮ ಬಾಯಿಂದ ಮಾತುಗಳೆ ಹೊರಡದೇ ಮೂಕ ವಿಸ್ಮಿತರಾಗ ಬೇಕಾಗಿದೆ!!

ನಮ್ಮ ಬಾಯಿಂದ ಮಾತುಗಳು ಹೊರಡದಿದ್ದರೂ ಬರಹದ ಮೂಲಕವಾದರೂ ಈ ಒಂದು ಆಗ್ರಹ ಮಾಡಲೇ ಬೇಕಾಗಿದೆ. ದೇಶದ ಹಿರಿಯ ಕಮ್ಯುನಿಸ್ಟ್ ನಾಯಕರಾದ ಕಾಮ್ರೇಡ ಜ್ಯೋತಿ ಬಸು ಅವರು ತಮ್ಮ 96-97ರ ವಯಸ್ಸಿನಲ್ಲಿಯೂ ಅತ್ಯಂತ ಪ್ರಖರವಾಗಿ ಆಲೋಚಿಸುತ್ತಿದ್ದರು ಎಂಬುದು ನಮಗೆಲ್ಲಾ ಗೊತ್ತಿರುವ ಸಮಾಚಾರವೇ. ಹಲವಾರು ವ್ಯಕ್ತಿಗಳಲ್ಲಿ ಅಂತಹ ಹಿರಿಯ ವಯಸ್ಸಿನಲ್ಲಿ ವಿಚಾರ,ವಿಶ್ಲೇಷಣಾ ಸಾಮರ್ಥ್ಯ ಹೇಗೆ ಪ್ರಖರವಾಗಿರುತ್ತದೆ ಎಂಬ ಬಗೆಗೆ ಸಂಶೋಧನೆ ನಡೆಸಲು ಬಸು ಅವರ ದೇಹವನ್ನು ತಮ್ಮ ಸಂಸ್ಥೆಗೆ ನೀಡಬೇಕೆಂದು ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ ವಿಜ್ಞಾನಿಗಳು ಕೇಳಿದ್ದರು.

ಯಡಿಯೂರಪ್ಪನವರ ಮಿದುಳು ಯಾರ ಮಿದುಳಿಗಿಂತ ಕಡಿಮೆ. ಇಂತಹ ಮಿದುಳಿನ ಅದ್ಭುತ ಆಲೋಚನೆಗಳ ಶಕ್ತಿ ಸಾಮರ್ಥ್ಯಗಳ ಹಿನ್ನೆಲೆ ಏನೆಂದು ರಹಸ್ಯ ಏನೆಂದು ಕಂಡು ಹಿಡಿಯಲು ನಮ್ಮ ಯಡಿಯೂರಪ್ಪನವರ ಮೆದುಳನ್ನು ಜೀವಂತವಾಗಿಯೇ ವಿಜ್ಞಾನಿಗಳು ಪರಿಶೀಲಿಸಬೇಕಾದ ಅಗತ್ಯವಿದೆ ಅನಿಸುತ್ತದೆ. ಅಲ್ಲವಾ?

★

ಹಾಲಿನ ದರ ಏರಿಕೆ


ಕೃಪೆ : ಪ್ರಜಾವಾಣಿ

ಕರ್ನಾಟಕ ರಾಜ್ಯ ಸರ್ಕಾರವು ನಂದಿನಿ ಹಾಲಿನ ದರ ಏರಿಕೆಗೆ ಒಪ್ಪಿಗೆ ನೀಡಿರುವುದರಿಂದ ಲೀಟರ್ ಒಂದಕ್ಕೆ ಹಾಲಿನ ದರ 2 ರೂಪಾಯಿಗಳಷ್ಟು ಏರಿಕೆಯಾಗಿದೆ. ಕೆಲವೇ ದಿನಗಳ ಹಿಂದೆ ಇದೇ ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ಹಾಲಿನ ದರಗಳು ದೊಡ್ಡ ರೀತಿಯಲ್ಲಿ ಏರಿಕೆಯಾಗಿದ್ದವು ಎಂದು ಜನಗಳ ನೆನಪು. ದನಕರುಗಳ ಸಾಕಾಣಿಕೆ ವೆಚ್ಚ ತೀರಾ ದುಬಾರಿಯಾಗುತ್ತಿರುವ ದಿನಗಳಲ್ಲಿ ಹಾಲು ಉತ್ಪಾದಕರಾದ ರೈತರಿಗೆ ನೀಡುವ ದರ ಹೆಚ್ಚಳ ಮಾಡುವ ಅಗತ್ಯ ಇದ್ದೇ ಇದೆ. ಅದನ್ನು ಯಾರೂ ವಿರೋಧಿಸಲಾರರು. ಆದರೆ ಅದನ್ನು ಸಾಮಾನ್ಯ ಗ್ರಾಹಕರಿಗೆ ಬೆಲೆ ಏರಿಕೆ ಮಾಡುವ ಮೂಲಕವೇ ಸಾಧಿಸಬೇಕೆ? ಎಂಬುದು ಪ್ರಶ್ನೆ.

ಸಂಸ್ಥೆಯ ನಿರ್ವಹಣೆಯಲ್ಲಿ ದಕ್ಷತೆ ತರುವುದು, ದುಂದುವೆಚ್ಚ ಅನಗತ್ಯ ವೆಚ್ಚ ತಗ್ಗಿಸುವುದು ಮುಂತಾದವುಗಳ ಮೂಲಕ ಗ್ರಾಹಕರಿಗೆ ಬೆಲೆ ಏರಿಸದೇ ಪರಿಸ್ಥಿತಿ ನಿಭಾಯಿಸಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆಯೂ ಇದೆ. ಕೃಷಿ ಕ್ಷೇತ್ರಕ್ಕೆ ಆದ್ಯತೆ ನೀಡುವ ಭಾಗವಾಗಿ ದನಕರುಗಳ ಸಾಕಾಣಿಕೆಗೆ ಸರ್ಕಾರ ಸಹಾಯ ಹಸ್ತವನ್ನು ಚಾಚುವುದನ್ನೂ ಮಾಡಬಹುದಲ್ಲವೇ? ಎಂಬ ಪ್ರಶ್ನೆಯೂ ಈಗ ಸಹಜವಾಗಿ ಏಳುತ್ತದೆ. ಜನಗಳ ಮನಸ್ಸಿನಲ್ಲಿ ಇನ್ನೂ ಒಂದು ವಿಷಯ ಚೆನ್ನಾಗಿ ನೆನಪಿನಲ್ಲಿದೆ. ಮರೆತಿಲ್ಲ.

ಆಗ ಜೆಡಿ(ಎಸ್) ಪಕ್ಷದ ಎಚ್.ಡಿ. ರೇವಣ್ಣ ಕೆ.ಎಂ.ಎಫ್.ನ ನಿರ್ದೇಶಕರಾಗಿದ್ದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ರೇವಣ್ಣನವರು ರೈತರಿಗೆ ಹಾಲಿಗೆ ಹೆಚ್ಚಿನ ದರ ನೀಡಬೇಕಾದ ಸಲುವಾಗಿ ಹಾಲಿನ ದರವನ್ನು ಹೆಚ್ಚಿಸಬೇಕಿದೆ ಹೇಳಿದ್ದರು. ಯಡಿಯೂರಪ್ಪರಾದಿಯಾಗಿ ಎಷ್ಟೋಂದು ಜನ ರೇವಣ್ಣನವರ ಮೇಲೆ ಎರಗಿ ಬಿದ್ದರು. ದರ ಏರಿಕೆ ಜನರಿಗೆ ಹೊರೆ ಮತ್ತು ಅದು ಅನಗತ್ಯ ಎಂದರು, ಕೆ.ಎಂ.ಎಫ್.ನ ಲೆಕ್ಕಪತ್ರವನ್ನು ತನಿಖೆ ಮಾಡಲಾಗುವುದೆಂದು ಘೋಷಿಸಿ ತನಿಖೆಯನ್ನೂ ನಡೆಸಿದರು. ತನಿಖೆ ಫಲಿತಾಂಶ ಏನಾಯ್ತೊ ಗೊತ್ತಿಲ್ಲ. ಈಗ ರೇವಣ್ಣನವರು ಆ ಸ್ಥಾನದಲ್ಲಿ ಇಲ್ಲ. ಬಿಜೆಪಿಯ ರೆಡ್ಡಿ ಸಹೋದರರಲ್ಲೊಬ್ಬರಾದ ಸೋಮಶೇಖರ ರೆಡ್ಡಿ ಆ ಜಾಗದಲ್ಲಿ ಇದ್ದಾರೆ. ಎರಡನೆಯ ಬಾರಿಗೆ ಈಗ ಹಾಲಿನ ದರ ಏರಿಕೆಯಾಗಿದೆ. ಈಗ ಯಾಕೆ ಕೆ.ಎಂ.ಎಫ್. ಲೆಕ್ಕಪತ್ರಗಳ ತನಿಖೆಯಾಗಲಿಲ್ಲ ?! ಈಗ ಯಾಕೆ ಬಿಜೆಪಿಯ ಯಾರೂ ರೆಡ್ಡಿಯವರ ಮೇಲೆ ಎರಗಲಿಲ್ಲ ?!

ರಾತ್ರಿ ಒಂದು ಲೋಟ ಹಾಲು ಕುಡಿದು ಮಲಗುವುದು ಹಲವರ ಅಭ್ಯಾಸ. ಅಂಥವರು ಇನ್ನು ಮುಂದೆ ಹಾಲಿನ ಬದಲಿಗೆ ಎರಡು ಲೋಟ ನೀರು ಕುಡಿದು ಮಲಗಬಹುದು, ದಿನಕ್ಕೆ ಎರಡು ಬಿಂದಿಗೆಯಾದರೂ ಕುಡಿಯುವ ನೀರು ಜನಕ್ಕೆ ಸಿಕ್ಕರೆ.

★

ಆಹಾ ! ಮೈತ್ರಿಯೇ

ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಇವತ್ತಿನ ಅತಿ ಪ್ರಧಾನವಾದ ರಾಜಕೀಯ ವಿದ್ಯಮಾನಗಳೇನು ಎಂದು ಯಾರನ್ನು ಕೇಳಿದರೂ ಕೂಡ ತತ್‌ಕ್ಷಣ ಸಿಗುವ ಉತ್ತರ- ಅದು ಯಡಿಯೂರಪ್ಪನವರ ಮತ್ತು ಅವರ ಪುತ್ರರತ್ನಗಳ, ಸಂಬಂಧಿಕರ ಹಾಗೂ ಸರ್ಕಾರದ ಸಚಿವರ ಬ್ರಂಹಾಂಡ ಭ್ರಷ್ಟಾಚಾರ ಮತ್ತು ಭೂ ಕಬಳಿಕೆ ಪ್ರಕರಣಗಳು ಮತ್ತು ಲಂಚಕೋರ ಹಗರಣಗಳು ಅಂತ ಯಾರೇ ಆದರೂ ಹೇಳುತ್ತಾರೆ. ರಾಜ್ಯದಲ್ಲಿ ಒಂದು ವಿರೋಧ ಪಕ್ಷವಾಗಿರುವ ಜೆಡಿ(ಎಸ್) ಪಕ್ಷವು ಮುಂದೆ ನಿಂತು ಯಡಿಯೂರಪ್ಪನವರ ಹಾಗೂ ಸರ್ಕಾರದ ಭ್ರಷ್ಟತೆಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಬಿಡುಗಡೆ ಮಾಡುತ್ತಾ ಇನ್ನಷ್ಟು ಹಗರಣಗಳನ್ನು ಬಯಲಿಗೆಳೆಯುತ್ತೇನೆ ಎನ್ನುತ್ತಿದೆ.

ಇನ್ನು ಮುಖ್ಯಮಂತ್ರಿ ಯಡಿಯೂರಪ್ಪನವರೋ

ಪುಟ 15 ಕ್ಕೆ

ಅಂಗನವಾಡಿ 'ನೌಕರರೇ' ಮುಷ್ಕರ ಮಾಡೀರಿ ಜೋಕೆ !!

ಎಲ್ಲಿ ಕಲಿತಿರಿ ಮುಷ್ಕರ ಎಂಬ ರಾಜ ದ್ರೋಹವನು - ಕಲಿಯಿರಿನ್ನು ಬರಿ ಡೊಗ್ಗು ಸಲಾಮು ಹಾಕುವುದನು...

ಹೀಗೆಂದು ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಹೂಂಕರಿಸುತ್ತಿದ್ದಾರೆ. ಗುಟುರು ಹಾಕುತ್ತಿದ್ದಾರೆ.

ಅಂಗನವಾಡಿ ನೌಕರರು ಇನ್ನು ಮುಂದೆ ಮುಷ್ಕರ ಮಾಡುವಂತಿಲ್ಲ ಎಂದು ಕರ್ನಾಟಕ ರಾಜ್ಯ ಸರ್ಕಾರ ಅಧಿಕೃತ ಆದೇಶವನ್ನೇ ಹೊರಡಿಸಿ ಬಿಟ್ಟಿದೆ.

ಇಲ್ಲಿ ಅಂಗನವಾಡಿ 'ನೌಕರರು' ಎಂಬ ಶಬ್ದವನ್ನು ಬಳಕೆ ಮಾಡಿರುವುದು ಜನಪರ ಸಂಘಟನೆಗಳು. 'ಕಾರ್ಯಕರ್ತೆಯರು ... ಸಹಾಯಕಿಯರು' ಎಂದೆಲ್ಲ ಕರೆಯಲಾಗುವ ಇವರಿಗೆ ತಮ್ಮ ಪ್ರದೇಶ ವ್ಯಾಪ್ತಿಯ ಬಸುರಿ, ಬಾಣಂತಿಯರು ಮತ್ತು ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳುವದಷ್ಟೆ ಕೆಲಸವಲ್ಲ. ನಮ್ಮ ಸರ್ಕಾರಗಳ ಹತ್ತು ಹಲವು ಯೋಜನೆಗಳ ಜಾರಿ, ಜನಗಣತಿ, ದನಗಣತಿ, ಸೀರೆ ವಿತರಣೆ, ಸ್ತ್ರೀ ಶಕ್ತಿ ಸಂಘ ಹೀಗೆ ವಿವಿಧ ಬಗೆಯ ಜವಾಬ್ದಾರಿಗಳನ್ನು ಆಧಿಕೃತವಾಗಿಯೇ ಹೊರಬೇಕಾಗುತ್ತದೆ. ಇನ್ನು ಅಧಿಕಾರಸ್ಥರು, ಊರಿನ ರಾಜಕಾರಣಿಗಳು, ಮುಖಂಡರು ಅನಿಸಿಕೊಂಡವರು ಹೇಳುವ ಎಷ್ಟೋ ಅನಧಿಕೃತ ಕೆಲಸಗಳನ್ನು ಕೂಡ ಮಾಡಬೇಕಾಗಿ ಬರುತ್ತದೆ. ಎಷ್ಟೆಲ್ಲಾ ಕೆಲಸ ಮಾಡಿ ದುಡಿಯುವ, ದಣಿಯುವ ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ನಮ್ಮ ಆಳುವ ಜನರು,ಸರ್ಕಾರಗಳು ತಯಾರಿಲ್ಲ. ಸರ್ಕಾರಿ ನೌಕರರು ಎಂದು ಒಪ್ಪಿಕೊಂಡು ಬಿಟ್ಟರೆ ನಿಗದಿತ ನ್ಯಾಯಬದ್ಧ ವೇತನ, ಸರ್ಕಾರಿ ನೌಕರರಿಗೆ ಸಿಗುವ ಸಾಮಾಜಿಕ ಸುರಕ್ಷಾ ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗುತ್ತದಲ್ಲ!!. ಈ ಯಕಶ್ಚಿತ್ ಅಂಗನವಾಡಿ 'ಕೆಲಸಗಾರರಿಗೆ' ಯಾಕೆ ಅಂತಹ ಸೌಲಭ್ಯ, ಸೌಕರ್ಯ ಮಾಡಿಕೊಡಬೇಕು. ಸುಮ್ಮಸುಮ್ಮನೆ ಯಾಕೆ ದೇಶದ ದೊಡ್ಡ ದೊಡ್ಡ ಬಂಡವಾಳಗಾರರು ಹಾಗೂ ಐಎಂಎಫ್, ಅಮೇರಿಕ ಮುಂತಾದ ದೊಡ್ಡಣ್ಣಂದಿರ ಕೆಂಗಣ್ಣಿಗೆ ಗುರಿಯಾಗಬೇಕು ?!

ಯಾವುದೇ ಜೀವನ ಭದ್ರತೆ ಇಲ್ಲದೇ 300, 400 ರೂಪಾಯಿಗಳ ಅತ್ಯಂತ ನಿಕೃಷ್ಟ ವೇತನ ಪಡೆಯುತ್ತಿದ್ದ ಈ 'ನೌಕರರು' ತಾವು ಸಂಘಟಿತರಾಗಿ ಹೋರಾಟದ ಬಾವುಟವನ್ನು ಕೈಗೆ ತೆಗೆದುಕೊಂಡಿರುವುದರಿಂದ ಅವರಿಗೆ ಅಷ್ಟಿಷ್ಟು ವೇತನ ಏರಿಕೆಯಾಗಿದೆ. ಕೆಲವಾದರೂ ಸಾಮಾಜಿಕ ಭದ್ರತಾ ಕ್ರಮಗಳು ಜಾರಿಗೆ ಬರುತ್ತಿವೆ. (ಸತತ ಹೋರಾಟದ ಪರಿಣಾಮವಾಗಿ ಈಗ ಒಪ್ಪಲಾಗಿರುವ ನಿವೃತ್ತಿ ವೇತನ ಸೌಲಭ್ಯವನ್ನು ಜಾರಿ ಮಾಡುವ ಹಂತದಲ್ಲೂ ಸರ್ಕಾರ ನೌಕರ ವಿರೋಧಿಯಾಗಿಯೇ ವರ್ತಿಸುತ್ತಿದ್ದು ಹೋರಾಟದ ಮೂಲಕವೇ ಸರಿಯಾದ ನಿವೃತ್ತಿವೇತನ ಪಡೆದು ಕೊಳ್ಳಬೇಕಾದ ಪರಿಸ್ಥಿತಿ ಇದೆ.) ಮತ್ತು ಹತ್ತು ಹಲವು ಬಗೆಯ ಶೋಷಣೆ, ದಬ್ಬಾಳಿಕೆಗಳನ್ನು, ಅನ್ಯಾಯಗಳನ್ನು ಎದುರಿಸುವ, ಪ್ರಶ್ನಿಸುವ ಧೈರ್ಯ ಬಂದಿದೆ. ಇದನ್ನು ಅಪಾಯಕಾರಿ ಎಂದು ಭಾವಿಸಿರುವ ಸರ್ಕಾರ ಈಗ ಅಂಗನವಾಡಿ ಸಿಬ್ಬಂದಿ ಮುಷ್ಕರವನ್ನೇ ಮಾಡಬಾರದು ಎಂದು ಆದೇಶ ಹೊರಡಿಸಿಬಿಟ್ಟಿದೆ.


ಮುಷ್ಕರ ಮಾಡಿದರು ಎಂಬ ಕಾರಣಕ್ಕೆ 2 ಲಕ್ಷ ನೌಕರರನ್ನು ವಜಾ ಮಾಡಿದ ತಮಿಳುನಾಡು ಮುಖ್ಯಮಂತ್ರಿ ಜಯಲಲಿತ ಅವರಿಗೆ, ಅವರ ಪಕ್ಷಕ್ಕೆ ಎಂಥಾ ಪಾಠವನ್ನು ಜನ ಕಲಿಸಿದರು ಎಂಬುದು ತೀರಾ ಹಳೆಯ ಇತಿಹಾಸವೇನು ಅಲ್ಲ. ಅಧಿಕಾರದ ಮದದಲ್ಲಿ ಮೆರೆಯುವ ದುರಹಂಕಾರಿಗಳಿಗೆ ಹಳೆಯ ಇತಿಹಾಸವೂ ನೆನಪಿನಲ್ಲಿ ಇರುವುದಿಲ್ಲ, ಹೊಸ ಇತಿಹಾಸವೂ ನೆನಪಿನಲ್ಲಿ ಇರುವುದಿಲ್ಲ. ಅಲ್ಲವೇ ? ○

ಎಸ್ ಬ್ಯಾಂಡ್ ಹಗರಣ : ಮತ್ತೆ ಅದೇ ಜಾಡಿನಲ್ಲಿ ಯುಪಿಎ

ಯುಪಿಎ-2 ಸರಕಾರ ದೊಡ್ಡ ಪ್ರಮಾಣದ ಭ್ರಷ್ಟಾಚಾರಗಳ ಹಗರಣಗಳು ಎದುರಾದಾಗ ಒಂದು ಸಿದ್ಧ ಮಾದರಿಯನ್ನು ಅನುಸರಿಸುವಂತೆ ಕಾಣುತ್ತದೆ. ಅಂದರೆ, ಮೊದಲು ಅಂತಹ ಆಗಬಾರದ್ದೇನೂ ಆಗಿಲ್ಲ ಎನ್ನುವುದು, ನಂತರ ಅದರಲ್ಲಿ ಅಡಗಿರುವ ವಿಷಯಗಳನ್ನು ಗೋಜಲುಗೊಳಿಸುವುದು; ಹಗರಣಗಳ ಸರಮಾಲೆಯಲ್ಲಿ ಇತ್ತೀಚಿನದಾದ ಎಸ್-ಬ್ಯಾಂಡ್ ಹಗರಣದಲ್ಲೂ ಅದೇ ಹಳೆ ಜಾಡು ಕಂಡು ಬಂದಿದೆ. ಈ ವ್ಯವಹಾರವನ್ನು ಇನ್ನೂ ಜಾರಿಗೊಳಿಸಿಲ್ಲವಲ್ಲ ಎಂದು ಸಮಜಾಯಿಷಿ ಕೊಡಲು ಅದು ಪ್ರಯತ್ನಿಸುತ್ತಿದೆ.

ನೇರವಾಗಿ ಪ್ರಧಾನ ಮಂತ್ರಿಗಳ ಅಡಿಯಲ್ಲಿರುವ ಇಲಾಖೆಯಲ್ಲಿ ನಡೆಯುತ್ತಿದ್ದ ವ್ಯವಹಾರ ಅವರ ಗಮನಕ್ಕೆ ಬರಲಿಲ್ಲವೇಕೆ, ಡಿಸೆಂಬರ್ 2005ರಲ್ಲಿ ಈ ಖಾಸಗೀ ಕಂಪನಿಗಾಗಿಯೇ ಉಪಗ್ರಹ ಉಡಾವಣೆಯ ಮಂಜೂರಾತಿ ಸಿಕ್ಕಿದ್ದು ಹೇಗೆ, ಜುಲೈ 2010ರಲ್ಲಿ ಬಾಹ್ಯಾಕಾಶ ಆಯೋಗ ಇದನ್ನು ರದ್ದು ಪಡಿಸಬೇಕು ಎಂದರೂ ಹಾಗೆ ಮಾಡಲಿಲ್ಲವೇಕೆ, ಕೊನೆಗೆ ಅಡಿಶನಲ್ ಸಾಲಿಸಿಟರ್ ಜನರಲ್ ಈ ಒಪ್ಪಂದವನ್ನು ರದ್ದು ಪಡಿಸುವುದು ಸರ್ಕಾರದ ನಿರ್ಣಯವಾಗಬೇಕು ಎಂದಾಗಲೂ ಕ್ರಮ ಕೈಗೊಳ್ಳಲಿಲ್ಲವೇಕೆ ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಯುಪಿಎ-2 ಸರಕಾರ ಈ ಒಪ್ಪಂದವನ್ನು 'ಪರಾಮರ್ಶಿಸಲು' ಒಂದು ಸಮಿತಿಯನ್ನು ನೇಮಿಸಿದೆ. ಅದರ ಸದಸ್ಯರಾದರೂ ಯಾರು? ಈ ವ್ಯವಹಾರವನ್ನು ನಡೆಸುವ ಪ್ರಕ್ರಿಯೆಯ ಭಾಗವಾಗಿಯೇ ಇದ್ದವರು! ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರತಿಕ್ರಿಯಿಸಿರುವಂತೆ ಇದು ಅತ್ಯಂತ ಪ್ರಶ್ನಾರ್ಹ. ಒಬ್ಬ ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶರಿಂದ ಉನ್ನತ ಮಟ್ಟದ ಸ್ವತಂತ್ರ ತನಿಖೆ ನಡೆಸುವ ಬದಲು ರದ್ದು ಮಾಡಬೇಕೆಂದು ಈಗಾಗಲೇ ನಿರ್ಧಾರವಾಗಿರುವ ಒಪ್ಪಂದದ 'ಪರಾಮರ್ಶೆ' ಏಕೆ ಎಂಬುದು ಸಹಜವಾದ ಪ್ರಶ್ನೆ.


ಈ ನಡುವೆ ಭದ್ರತೆ ಕುರಿತ ಸಂಪುಟ ಸಮಿತಿ(ಸಿಸಿಎಸ್)ಗೆಂದು ತಯಾರಿಸಿರುವ ಟಿಪ್ಪಣಿ ಈ ವ್ಯವಹಾರವನ್ನು ತೀವ್ರವಾಗಿ ಟೀಕಿಸಿದೆಯೆಂದು ವರದಿಯಾಗಿದೆ. ಇಸ್ರೊ 2003ರಲ್ಲಿ ಅಮೆರಿಕನ್ ಕಂಪನಿ ಫೋರ್ಜ್ ಅಡ್ವೈಸರ್ಸ್ ಜತೆಗೆ ಆರಂಭಿಕ ಮಾತುಕತೆಗಳನ್ನು ನಡೆಸಿತ್ತು, ಆ ಕಂಪನಿಯೇ ನಂತರ 2004ರಲ್ಲಿ ಈ ದೇವಸ್ ಮಲ್ಟಿಮೀಡಿಯ ಎಂಬ ಕಂಪನಿಯನ್ನು ರಚಿಸಿತು ಎಂದು ಈ ಟಿಪ್ಪಣಿಯ ಮೂಲಕ ತಿಳಿದು ಬಂದಿದೆಯಂತೆ.



ಕೃಪೆ : ದಿ ಹಿಂದೂ

2ಜಿ ನೀಡಿಕೆಯಲ್ಲಿ ನಷ್ಟವಾಗಿದೆ ಎಂದು ಸಿಬಿಐ ನಿರ್ದೇಶಕರು

2ಜಿ ತರಂಗಾಂತರ ನೀಡಿಕೆಯಲ್ಲಿ ಸರಕಾರದ ಬೊಕ್ಕಸಕ್ಕೆ ನಷ್ಟವೇನೂ ಆಗಿಲ್ಲ ಎನ್ನುವ ಹಾಲಿ ಯುಪಿಎ-2 ಸಂಪರ್ಕ ಮಂತ್ರಿ ಕಪಿಲ್ ಸಿಬಾಲ್ ಹೇಳಿಕೆ ಶುದ್ಧ ಸುಳ್ಳು ಎಂದು ಮತ್ತೊಮ್ಮೆ ಸಿದ್ಧವಾಗಿದೆ. ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಹಾಜರಾದ ಸಿಬಿಐ ನಿರ್ದೇಶಕ ಎ.ಪಿ.ಸಿಂಗ್ ಸಮಿತಿಯ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತ ಈ ನೀಡಿಕೆಯಲ್ಲಿ ನಷ್ಟವಾಗಿಲ್ಲ ಎನ್ನುವುದು ತಪ್ಪಾಗುತ್ತದೆ ಎಂದಿದ್ದಾರೆ. ನಷ್ಟದ ಪ್ರಮಾಣ ಸುಮಾರು



ರೂ.50,000 ಕೋಟಿಯಾಗಬಹುದು ಎಂದು ಸಿಬಿಐ ಲೆಕ್ಕ ಹಾಕಿರುವುದಾಗಿ ಅವರು ತಿಳಿಸಿದ್ದಾರೆ. ಇದಕ್ಕೆ ಮೊದಲು ದೇಶದ ಮಹಾಲೆಕ್ಕ ಪರಿಶೋಧಕರು(ಸಿಎಜಿ) ಈ ನಷ್ಟ ಸುಮಾರು 1.76ಲಕ್ಷ ಕೋಟಿಯಾಗಬಹುದು ಎಂದು ಅಂದಾಜು ಮಾಡಿದ್ದು ತಮ್ಮ ಲೆಕ್ಕಾಚಾರವನ್ನು ಸಮರ್ಥಿಸಿಕೊಂಡಿದ್ದರು.

ಈ ನಡುವೆ ಸಿಬಿಐ ಈ ಹಗರಣಕ್ಕೆ ಸಂಬಂಧಪಟ್ಟಂತೆ ನಾಲ್ಕು ಟೆಲಿಕಾಂ ಕಂಪನಿಗಳ ಉನ್ನತ ಅಧಿಕಾರಿಗಳನ್ನು ಕರೆದು ಪ್ರಶ್ನಿಸಿದ್ದಾರೆ. ಆ ನಾಲ್ಕು ಕಂಪನಿಗಳೆಂದರೆ 2008ರಲ್ಲಿ ಲೈಸೆನ್ಸ್ ಪಡೆದ ಯುನಿಟೆಕ್, ಡಿಬಿ ರಿಯಲ್ಟಿ, ಲೂಪ್ ಟೆಲಿಕಾಮ್ಸ್ ಮತ್ತು ಎಸ್-ಟೆಲ್. ಟಾಟಾ ಟೆಲಿಸರ್ವಿಸಸ್‌ನ ಇಬ್ಬರು ಉನ್ನತ ಅಧಿಕಾರಿಗಳನ್ನೂ ಪ್ರಶ್ನಿಸಲಾಯಿತು. ತಪ್ಪು ಮಾಹಿತಿಗಳನ್ನು ನೀಡಲಾಗಿದೆ, ಸತ್ಯ ಸಂಗತಿಗಳನ್ನು ಮುಚ್ಚಿಡಲಾಗಿದೆ, ಕನಿಷ್ಟ ಬಂಡವಾಳ ಇರಲಿಲ್ಲ, ಸುಳ್ಳು ಪ್ರಮಾಣ ಪತ್ರಗಳನ್ನು ಕೊಟ್ಟಿದ್ದಾರೆ ಮುಂತಾದ ಆಪಾದನೆಗಳು ಈ ದೂರಸಂಪರ್ಕ ಕಂಪನಿಗಳ ಮೇಲಿದೆ.

★

ತೈಲ ವಲಯದಲ್ಲೂ ಒಂದು ಹಗರಣ ಸಿದ್ಧವಾಗುತ್ತಿದೆಯೇ?

ದೇಶದ ತೈಲ ನಿಕ್ಷೇಪಗಳ ವಲಯದಲ್ಲಿ ಸಕ್ರಿಯವಾಗಿರುವ ಕಂಪನಿ ಕೈರ್ನ್ ಇಂಡಿಯಾದಲ್ಲಿ 51ಶೇ. ಪಾಲು ಪಡೆದು ಅದನ್ನು ವಹಿಸಿಕೊಳ್ಳಲು ಪೆಟ್ರೋಲಿಯಂ ವಲಯದಲ್ಲಿ ಏನೇನೂ ಅನುಭವವಿಲ್ಲದ ವೇದಾಂತ ಎಂಬ ಕಂಪನಿ ಪ್ರಯತ್ನ ನಡೆಸಿದೆ. 960ಕೋಟಿ ಡಾಲರುಗಳ ಈ ವ್ಯವಹಾರದ ಬಗ್ಗೆ ಯುಪಿಎ ಸರಕಾರ ಮತ್ತು ಪೆಟ್ರೋಲಿಯಂ ಇಲಾಖೆ ಮೌನವಾಗಿವೆ. ಕೈರ್ನ್ ಕಂಪನಿ ದೇಶದ ಹಲವಾರು ತೈಲ ನಿಕ್ಷೇಪಗಳ ಮೇಲೆ, ಮುಖ್ಯವಾಗಿ ಬಹಳ ಬೆಲೆ ಬಾಳುವ ರಾಜಸ್ತಾನದ ಮಂಗಳಾ ತೈಲಕ್ಷೇತ್ರದ ಮೇಲೆ ಹತೋಟಿ ಪಡೆದಿದೆ. ಗಮನಿಸಬೇಕಾದ ಸಂಗತಿಯೆಂದರೆ ಈ ತೈಲ ನಿಕ್ಷೇಪಗಳಲ್ಲಿ ಶೇ. 30 ಪಾಲುದಾರಿಕೆ ಹೊಂದಿರುವ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ(ಒಎನ್‌ಜಿಸಿ) ಕೂಡ ನಿಷ್ಕ್ರಿಯವಾಗಿದೆ.

ದೇಶದ ಈ ಒಂದು ಪ್ರಮುಖ ಸಂಪನ್ಮೂಲದ ಕಂಪನಿಯನ್ನು ಸಾರ್ವಜನಿಕ ವಲಯದ ಒಂದು ಮಹಾರತ್ನವೆನಿಸಿದ ಒಎನ್‌ಜಿಸಿಯೇ ಏಕೆ ವಹಿಸಿಕೊಳ್ಳಬಾರದು, ಈ ಬಗ್ಗೆ ಸರಕಾರ ಮಧ್ಯಪ್ರವೇಶಿಸಬೇಕೆಂದು ಈ ಹಿಂದೆ ಆಗಸ್ಟ್ 2010ರಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯ ಹಾಗೂ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಸಂಸತ್ತಿನ ರಾಜ್ಯಸಭೆಯಲ್ಲಿ ಒತ್ತಾಯಿಸಿದ್ದರು. ನಂತರ ವೇದಾಂತ-ಕೈರ್ನ್ ವ್ಯವಹಾರದ ಬಗ್ಗೆ ಸಿಎಜಿ ಪರೀಕ್ಷಣೆ ನಡೆಸಬೇಕು ಎಂದು ಪೆಟ್ರೋಲಿಯಂ ಮಂತ್ರಿಗೆ ಪತ್ರವನ್ನೂ ಬರೆದಿದ್ದರು. ಆದರೆ ಯಾವುದಕ್ಕೂ ಸ್ಪಂದಿಸದ ಯುಪಿಎ ಸರಕಾರದ ಪ್ರಧಾನ ಮಂತ್ರಿಗಳ ಕಚೇರಿಯೇ ಈಗ ಈ ವ್ಯವಹಾರ ಕುದುರಬೇಕೆಂದು ಆಸಕ್ತಿ ವಹಿಸುತ್ತಿದೆ ಎಂಬ ಸುದ್ದಿ ಬಂದಿದೆ. ಇದು ಒಂದು ಆತಂಕಕಾರೀ ಬೆಳವಣಿಗೆ ಎಂದು ತಪನ್ ಸೇನ್ ಫೆಬ್ರುವರಿ 14ರಂದು ಪ್ರಧಾನಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ತೈಲ ಒಂದು ರಾಷ್ಟ್ರೀಯ ಸಂಪತ್ತಾಗಿದ್ದು ಅದು ದೇಶದ ಜನಗಳ ಒಡೆತನಕ್ಕೆ ಸೇರಿದ್ದು. ಆದ್ದರಿಂದ ಈ ಕುರಿತ ಯಾವುದೇ ವ್ಯವಹಾರದ ಬಗ್ಗೆ ತೆರೆಮರೆಯ

ಪುಟ 14ಕ್ಕೆ

ಬುಡಕಟ್ಟು ಜನಗಳನ್ನು ವಂಚಿಸುವ ಸುತ್ತೋಲೆ

ಅರಣ್ಯ ಹಕ್ಕುಗಳ ಕಾನೂನು ತನ್ನ ಪ್ರಮುಖ ಸಾಧನೆಗಳಲ್ಲಿ ಒಂದು ಎಂದು ಯುಪಿಎ-1 ಸರಕಾರ ಹೇಳಿಕೊಂಡಿತ್ತು. ಇದು ಆಗ ಯುಪಿಎಗೆ ಬೆಂಬಲ ನೀಡುತ್ತಿದ್ದ ಎಡಪಕ್ಷಗಳ ಸತತ ಒತ್ತಡದಿಂದಾಗಿ ತಂದ ಕಾನೂನು ಎಂದು ಮಾತ್ರ ಹೇಳುತ್ತಿರಲಿಲ್ಲ. ಈಗ ಎಡಪಕ್ಷಗಳ ಬೆಂಬಲದ ಅಗತ್ಯವಿಲ್ಲದ ಯುಪಿಎ-2 ಸರಕಾರ ಸದ್ದಿಲ್ಲದೆ ಒಂದು ಸುತ್ತೋಲೆ ಹೊರಡಿಸಿ ಬುಡಕಟ್ಟು ಜನಗಳಿಗೆ ಮೋಸ ಮಾಡಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಫೆಬ್ರುವರಿ 8ರಂದು ಒಂದು ಸುತ್ತೋಲೆ ಹೊರಡಿಸಿ ಅರಣ್ಯ ಇಲಾಖೆಗೆ ಒಂದು ನಿರ್ದಿಷ್ಟ ಪ್ರದೇಶ ವನ್ಯಜೀವಿಗಳ ವಾಸಕ್ಕೆ ಅತ್ಯಗತ್ಯ ಎಂದು ಘೋಷಿಸಿ ಅಲ್ಲಿರುವ ಬುಡಕಟ್ಟು ಕುಟುಂಬಗಳನ್ನು ಗ್ರಾಮಸಭೆಯ ಅನುಮತಿಯಿಲ್ಲದೆಯೇ ಎತ್ತಂಗಡಿ ಮಾಡುವ ಅಧಿಕಾರ ಕೊಟ್ಟಿದೆ. ಇದು ಅರಣ್ಯ ಹಕ್ಕಿನ ಕಾನೂನಿನ ಅಪಹಾಸ್ಯ, ಅದರ ಆಶಯದ ಗಂಭೀರ ಉಲ್ಲಂಘನೆ ಮಾಡಿರುವ ಕಾನೂನು ಬಾಹಿರ ಸುತ್ತೋಲೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ಕಟುವಾಗಿ ಟೀಕಿಸಿದ್ದಾರೆ. ಚಾರಿತ್ರಿಕ ಅನ್ಯಾಯಗಳನ್ನು ಸರಿಪಡಿಸುವ ಬದಲು ಅವನ್ನು ಉಲ್ಬಣಗೊಳಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ಕಾನೂನನ್ನು ಕಾಂಗ್ರೆಸ್ ಮತ್ತು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಸರಿಯಾಗಿ ಜಾರಿಗೊಳಿಸುತ್ತಿಲ್ಲ. ಹಕ್ಕುಗಳ ದಾವೆಗಳನ್ನು ಪುರಸ್ಕರಿಸುವುದಕ್ಕಿಂತ ತಿರಸ್ಕರಿಸುವ ದರವೇ ಹೆಚ್ಚು. ಬುಡಕಟ್ಟು ಉಪಯೋಜನೆಗೆ 8.2 ಶೇ. ಹಣ ಮೀಸಲಿಡಬೇಕೆಂದು ಯೋಜನಾ ಆಯೋಗ ಹೇಳಿದ್ದರೂ ಕೇಂದ್ರ ಸರ್ಕಾರ ಕಳೆದ ಎರಡು ಬಜೆಟುಗಳಲ್ಲಿ ಕೊಟ್ಟಿರುವುದು 3.08 ಶೇ. ಮತ್ತು 4.02ಶೇ. ಮಾತ್ರ . ಅಂದರೆ ಬುಡಕಟ್ಟು ಉಪಯೋಜನೆಗೆ 20ಸಾವಿರ ಕೋಟಿ ರೂ.ಗಳ ಕೊರತೆ ಮಾಡಲಾಗಿದೆ. ಇದರಲ್ಲೂ ಸ್ವಲ್ಪ ಹಣವನ್ನು ಮಾವೋವಾದಿ ಪಿಡುಗಿಗೆ ಈಡಾದ ಪ್ರದೇಶಗಳಿಗೆ ತಿರುಗಿಸಬೇಕೆಂಬ ಯುಪಿಎ-2 ಸರಕಾರ ಸೂಚನೆ ಅಸಂಬದ್ಧ ಎಂದೂ ಬೃಂದಾ ಕಾರಟ್ ಟೀಕಿಸಿದ್ದಾರೆ. ○

ನೌಕರರ ಭವಿಷ್ಯ ನಿಧಿ ಬಡ್ಡಿ ದರ : ದೇವರು ಕೊಟ್ಟರೂ, ಪೂಜಾರಿ.....?

ನೌಕರರ ಭವಿಷ್ಯ ನಿಧಿಯ ಮೇಲೆ ಬಡ್ಡಿದರವನ್ನು 8.5 ಶೇ. ದಿಂದ 9.5 ಶೇ.ಕ್ಕೆ ಏರಿಸಬೇಕೆಂಬ ಭವಿಷ್ಯ ನಿಧಿ ಸಂಘಟನೆಯ ನಿರ್ಧಾರಕ್ಕೆ ಹಣಕಾಸು ಇಲಾಖೆ ಕೊನೆಗೂ ಒಪ್ಪಬಹುದು ಎಂದು ಹೇಳಲಾಗುತ್ತಿದೆ. ಈ ಬಡ್ಡಿ ದರ ಏರಿಕೆಗೆ ಸರಕಾರದಿಂದ ಹಣವೇನನ್ನೂ ಕೇಳುತ್ತಿಲ್ಲ, ಇದು ನೌಕರರ ಹಣವೇ ಆಗಿರುವಾಗ ಹಣಕಾಸು ಇಲಾಖೆಯ ಮೀನಮೇಷಕ್ಕೆ ಕಾರಣಗಳಿಲ್ಲ ಎಂದು ಸ್ವತಃ ಯುಪಿಎ-2 ಸರಕಾರದ ಕಾರ್ಮಿಕ ಇಲಾಖೆಯ ವಕ್ತಾರರೇ ಹೇಳುತ್ತಿದ್ದಾರೆ. ನೌಕರರ ಭವಿಷ್ಯ ನಿಧಿಯ ಲೆಕ್ಕಾಚಾರಗಳಲ್ಲಿ ಕಂಡು ಬಂದಿರುವ 1731.57 ಕೋಟಿ ರೂ. ಮಿಗುತೆ ತಪ್ಪು ಲೆಕ್ಕಾಚಾರದ ಫಲವಿರಬಹುದು ಎಂದು ಹಣಕಾಸು ಇಲಾಖೆಯ ಆಕ್ಷೇಪವಾಗಿದ್ದು ಆ ಕಾರಣಕ್ಕೇ ಅದು 8.5ಶೇ. ಬಡ್ಡಿಗೆ ಮಾತ್ರ ಆದಾಯ ತೆರಿಗೆ ವಿನಾಯ್ತಿ ಕೊಡುವ ಅಧಿಸೂಚನೆ ಹೊರಡಿಸಿದ್ದರೆ, ಇದು ಕೇವಲ ಪುಸ್ತಕದ ಲೆಕ್ಕಾಚಾರವಲ್ಲ, ನಿಜವಾಗಿಯೂ ಇರುವ ಮಿಗುತೆ, ನೌಕರರ ಹಣವೇ ಗಳಿಸಿರುವ ಪ್ರತಿಫಲ ಎನ್ನುವುದು ಕಾರ್ಮಿಕ ಇಲಾಖೆಯ ವಾದ. ಯುಪಿಎ ಸರಕಾರದ ಇಲಾಖೆಗಳ ನಡುವಿನ ಈ ಜಟಾಪಟಿ ಇನ್ನೂ ಅಧಿಕೃತವಾಗಿ ಪರಿಹಾರವಾದಂತಿಲ್ಲ. ○

ಯುಪಿಎ ದರ್ಬಾರ್.....

ಪುಟ 13 ರಿಂದ

ನಿರ್ಣಯ ಸಲ್ಲದು. ಅದನ್ನು ಇಂದು ಪ್ರತ್ಯಕ್ಷಗೊಂಡು ನಾಳೆ ಓಡಿ ಹೋಗುವ ಕಂಪನಿಗಳಿಗೆ ವಹಿಸುವ ಮೊದಲು ಪೂರ್ಣ ವಿವರ ಸಂಸತ್ತಿನ ಮೂಲಕ ಸಾರ್ವಜನಿಕರ ಗಮನಕ್ಕೆ ಬರಬೇಕು. ಈ ಬಗ್ಗೆ ಸರಕಾರದ ಮಧ್ಯಪ್ರವೇಶ ಅಗತ್ಯ, ಇಲ್ಲವಾದರೆ ಬಹಳ ಬೇಗನೇ ಈ ಬಹುಕೋಟಿ ಡಾಲರ್ ವ್ಯವಹಾರವೂ ಹಗರಣವಾಗಿ, ಈ ವಿಷಯ ನಮಗೆ ತಿಳಿದೇ ಇರಲಿಲ್ಲ ಎಂದು ಹೇಳುವ ಮುಜುಗರವನ್ನು ಮತ್ತೊಮ್ಮೆ ತಂದು ಕೊಳ್ಳುವ ಸಂದರ್ಭ ಬರಬಹುದು ಎಂದು ತಪನ್ ಸೇನ್ ತಮ್ಮ ಪತ್ರದಲ್ಲಿ ಎಚ್ಚರಿಸಿದ್ದಾರೆ. ಈಗ 2ಜಿ, ಎಸ್ ಬ್ಯಾಂಡ್ ಮುಂತಾದ ವಿಷಯಗಳಲ್ಲಿ ಇವೆಲ್ಲ 'ನನ್ನ ಅಥವ ಸಂಪುಟದ ಗಮನಕ್ಕೆ ಬಂದಿರಲಿಲ್ಲ' ಎಂದು ದೇಶದ ಪ್ರಧಾನ ಮಂತ್ರಿಗಳು ಸಮಜಾಯಿಷಿ ಕೊಡುವ ಪರಿಸ್ಥಿತಿ ಏರ್ಪಟ್ಟಿರುವುದನ್ನು ನಾವು ನೋಡುತ್ತಿದ್ದೇವೆ.

★

ರೈಲು ಹಣ ಖಾಲಿ ಮಾಡಿಕೊಂಡು ಬಜೆಟ್ 2011ರ ಮೇಲೆ ಒತ್ತಡ?

ಯುಪಿಎ-2 ರೈಲ್ವೆ ಮಂತ್ರಿಗಳು ತನ್ನ ಪಕ್ಷದ ಪ್ರಭಾವ ಹೆಚ್ಚಿಸಿಕೊಳ್ಳುವ ಸಂಕುಚಿತ ಉದ್ದೇಶಕ್ಕಾಗಿ ಕೇಂದ್ರ ಬಜೆಟಿನ ಮೇಲೆಯೇ ಎರಗಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ತನ್ನ ಇಲಾಖೆಗೆ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ನೀಡಿದ ಹಣವನ್ನೆಲ್ಲಾ ಖಾಲಿ ಮಾಡಿಕೊಂಡ ರೈಲು ಮಂತ್ರಿಗಳು ಕೇಂದ್ರ ಬಜೆಟಿನಿಂದ ಭಾರೀ ಹಣ ನೀಡಿಕೆಗಾಗಿ ತಮ್ಮ ರಾಜ್ಯದವರೇ ಆದ ಯುಪಿಎ ಹಣಕಾಸು ಮಂತ್ರಿಗಳ ಮೇಲೆ ಭಾರೀ ಒತ್ತಡ ಹಾಕುತ್ತಿದ್ದಾರಂತೆ. ಪಶ್ಚಿಮ ಬಂಗಾಲದಲ್ಲಿ ಸದ್ಯದಲ್ಲೇ ವಿಧಾನ ಸಭಾ ಚುನಾವಣೆ ನಡೆಯಲಿರುವುದರಿಂದಾಗಿ ಈ ಒತ್ತಡ. ಸಾರ್ವತ್ರಿಕ ಬಜೆಟಿನ ಮೊದಲು ಬರುವ ರೈಲು ಬಜೆಟ್ ಈ ಬಾರಿ ಕೇವಲ ರಾಜಕೀಯ ಕಸರತ್ತಾಗಿರುವ, ತಮಗೆ ರಾಜಕೀಯವಾಗಿ ಬೇಕಾದ ಕೆಲವೇ ರಾಜ್ಯಗಳಿಗೆ ಸಾಲು-ಸಾಲು 'ಉಡುಗೊರೆ'ಗಳ ಪ್ರಕಟಣೆಗಳಿಂದ ತುಂಬಿರುವ ಸಂಭವವೇ ಹೆಚ್ಚು ಎನ್ನಲಾಗುತ್ತಿದೆ.

ಯುಪಿಎ-2 ಸರಕಾರದಲ್ಲಿ ಇನ್ನೊಂದು ಅಂಗ ಪಕ್ಷ ಎನ್‌ಸಿಪಿಯ ಕೃಷಿ ಮಂತ್ರಿಗಳು ಕೂಡ ಕೇಂದ್ರ ಬಜೆಟಿನಲ್ಲಿ ದೊಡ್ಡ ಪಾಲು ಗಿಟ್ಟಿಸಲು ಒತ್ತಡ ಹಾಕುತ್ತಿದ್ದಾರಂತೆ. ಕೃಷಿ ಮಂತ್ರಿಗಳು ಕೇಳುತ್ತಿರುವುದು ರೈತರಿಗಾಗಿ ಅಲ್ಲ, ಖಾಸಗಿಯವರದ್ದೇ ದರಬಾರು ನಡೆಯುತ್ತಿರುವ ಆಹಾರ ಸಂಸ್ಕರಣ ಉದ್ದಿಮೆಗಾಗಿಯಂತೆ.

ಯುಪಿಎ-2 'ಸ್ಪಂದಿಸ'ಬೇಕಾದರೆ ಶಿಕ್ಷಣ, ಆರೋಗ್ಯ ಮುಂತಾದ ಪ್ರಮುಖ ವಲಯಗಳಿಗೆ ಕತ್ತರಿ ಹಾಕಬೇಕಾಗುತ್ತದೆ. ಯುಪಿಎ-2 ಸರಕಾರದ ಹಣಕಾಸು ಮಂತ್ರಿಗಳಿಗೆ ಈ ಬಗ್ಗೆ ಹಿಂಜರಿಕೆಯೇನೂ ಇರಲಿಕ್ಕಿಲ್ಲ ಎಂದು ಬೂರ್ಜ್ವಾ ಮಾಧ್ಯಮಗಳಿಗೂ ಅನಿಸುತ್ತಿದೆ.

★

ರಕ್ಷಣಾ ರಫ್ತುಗಳಲ್ಲಿ ಭಾರೀ ಇಳಿಕೆ

ರಕ್ಷಣಾ ಉತ್ಪಾದನೆಯಲ್ಲಿ ವಿದೇಶಿ ಮತ್ತು ದೇಶಿ ಖಾಸಗಿಯವರ ಭಾಗವಹಿಸುವಿಕೆಯ ಯುಪಿಎ ಧೋರಣೆಗಳ 'ಸಂಪೂರ್ಣವಾಗಿ ವಿಫಲವಾಗಿವೆ' ಎಂದು ಮಾಜಿ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ. ಈ ಧೋರಣೆಗಳ ಫಲಿತಾಂಶವೆಂದರೆ ಆಮದುಗಳು ಶೇ. 75 ಹೆಚ್ಚಿವೆ, ರಫ್ತುಗಳು 2008-09ರ 41.07 ಕೋಟಿ ರೂ. ನಿಂದ 2009-10ರಲ್ಲಿ ಕೇವಲ 12.28ಕೋಟಿ ರೂ.ಗಿಳಿದಿದೆ. ಸರಕಾರದ ಪ್ರಕಾರ ಆಮದುಗಳು ಶೇ.30ಕ್ಕೆ ಇಳಿಯಬೇಕಾಗಿತ್ತು.

ಅತ್ಯಾಧುನಿಕ ತಂತ್ರಜ್ಞಾನ ನಮಗೆ ಸಿಗುತ್ತದೆ ಎಂಬುದು ಸಾಮಾನ್ಯವಾಗಿ ವಿದೇಶಿ ಕಂಪನಿಗಳಿಗೆ ಅವಕಾಶ ಮಾಡಿಕೊಡಬೇಕೆನ್ನುವವರು ಮುಂದಿಡುವ ವಾದ. ಆದರೆ ಯುಪಿಎ-2 ಸರಕಾರ ಧೋರಣೆಗಳ ಪರಿಣಾಮವಾಗಿ ಒಂದೇ ಒಂದು ಅತ್ಯಾಧುನಿಕ ರಕ್ಷಣಾ ವ್ಯವಸ್ಥೆಯ ನಿರ್ಮಾಣವೂ ಸಾಧ್ಯವಾಗಿಲ್ಲ. ರಕ್ಷಣಾ ವ್ಯವಸ್ಥೆಯ ಮಹತ್ವದ ಭಾಗಗಳೆಲ್ಲವನ್ನೂ ಆಮದು ಮಾಡಿಕೊಳ್ಳುವ ಭಾರತ, ವಿದೇಶಿ ವಿಮಾನಗಳಿಗೆ ಕೇವಲ ಬಾಗಿಲು, ಕಿಟಕಿಗಳನ್ನು ತಯಾರಿಸಿ ಕೊಡುವುದರಲ್ಲೇ ಸಂತುಷ್ಟವಾಗಿದೆ ಎಂದು ನಿವೃತ್ತ ಮೇಜರ್ ಜನರಲ್ ಮೃಣಾಲ್ ಸುಮನ್ ಒಂದು ಲೇಖನದಲ್ಲಿ ಖೇದ ವ್ಯಕ್ತ ಪಡಿಸಿದ್ದಾರೆ. ಸದ್ಯದ ತಪ್ಪು ಧೋರಣೆಗಳಿಂದಾಗಿ ದೇಶೀ ತಂತ್ರಜ್ಞಾನ ಮಟ್ಟ ಮೇಲೇರಿಲ್ಲ, ವಿದೇಶಿ ಕಂಪನಿಗಳೊಂದಿಗೆ ವ್ಯವಹಾರ ಮಾಡುವಾಗ ತಂತ್ರಜ್ಞಾನ ವರ್ಗಾವಣೆಯ ಮೇಲೆ ಒತ್ತು ನೀಡುತ್ತಿಲ್ಲ ಎಂದು ಅವರು ಹೇಳುತ್ತಾರೆ. ❍

ಈಜಿಪ್ಟಿನ ಜನತೆಗೆ ಶುಭಾಶಯಗಳು

ಪುಟ 9 ರಿಂದ

ಅಮೆರಿಕಕ್ಕೆ ಒಯ್ದು ಹೋಟೇಲೊಂದರಲ್ಲಿ ಇಟ್ಟು ಬೀಗ ಜಡಿಯಲಿ" ಎಂಬ ಒಬ್ಬ ಪ್ರತಿಭಟನಾಕಾರನ ಕೂಗು ಜನರ ಆಕ್ರೋಶದ ಮಾರ್ಮಿಕ ಪ್ರತಿದನಿ. ಸಾಲೆ ಸರ್ಕಾರ ನೂರಾರು ಪೋಲಿಸರಲ್ಲದೆ ಆಳುವ ಪಕ್ಷದ ಬೆಂಬಲಿಗ ಗೂಂಡಾಗಳನ್ನು ಬಿಟ್ಟು ಪ್ರತಿಭಟನಾಕಾರರ ಮೇಲೆ ದಾಳಿ ನಡೆಸಿದೆ. ತೀವ್ರ ಘರ್ಷಣೆಗಳು ನಡೆದು ಸಾವು ನೋವುಗಳಾಗಿವೆ. ಆದರೆ ಪ್ರತಿಭಟನೆಗಳು ನಿಂತಿಲ್ಲ.

ಲಿಬ್ಯಾದಲ್ಲಿ 40 ವರ್ಷಗಳಿಂದ ಆಳುತ್ತಿರುವ ಗದ್ದಾಫಿಯ ವಿರುದ್ಧ ಸಹ ರಾಜಧಾನಿ ಮತ್ತು ಹಲವು ಪ್ರಮುಖ ನಗರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯತಾವಾದಿ ಹೋರಾಟಗಾರ ನಾಯಕ ಎಂದು ಹೆಸರು ಪಡೆದಿದ್ದ ಗದ್ದಾಫಿ ಈಗ ಭ್ರಷ್ಟನಾಗಿದ್ದಾನೆ. ತನ್ನ ಕುಟುಂಬದ ಆಡಳಿತ ಭದ್ರ ಮಾಡಲು ಸಾಮ್ರಾಜ್ಯಶಾಹಿ ಜತೆ ಶಾಮೀಲಾಗಿದ್ದಾನೆ ಎಂಬ ಆಕ್ರೋಶ ವ್ಯಕ್ತವಾಗುತ್ತಿದೆ. ಗದ್ದಾಫಿ ಸರ್ಕಾರ ಪ್ರತಿಭಟನಾಕಾರರ ಮೇಲೆ ಹಲವು ಕಡೆ ಗೋಲೀಬಾರು ನಡೆಸಿದೆ. ಆಳುವ ಪಕ್ಷದ ಬೆಂಬಲಿಗರು ಸರ್ಕಾರ-ಪರ ಪ್ರದರ್ಶನಗಳನ್ನು ನಡೆಸಿ ಪ್ರತಿಭಟನಾಕಾರರ ಜತೆ ಘರ್ಷಣೆಗೆ ಇಳಿದಿದ್ದಾರೆ. ಆದರೂ ಪ್ರತಿಭಟನೆಗಳು ನಿಲ್ಲುವ ಲಕ್ಷಣಗಳು ಇಲ್ಲ.

ಅಲ್ಜೀರಿಯಾ, ಇರಾನುಗಳಲ್ಲೂ ತೀವ್ರ ಪ್ರತಿಭಟನೆಗಳು ಆರಂಭವಾಗಿದ್ದು ಈಗಿನ ಸರ್ಕಾರದ ರಾಜೀನಾಮೆ ಮತ್ತು ಪ್ರಜಾಪ್ರಭುತ್ವ ಸುಧಾರಣೆಗಳಿಗಾಗಿ ಒತ್ತಾಯ ಮಾಡುತ್ತಾ ಹರಡುತ್ತಿವೆ. ❍

ಭಾರತ-ಪಾಕ್ ಮಾತುಕತೆ ಅಗತ್ಯ - ಯೂಸಫ್ ತರಿಗಾಮಿ

ಇತ್ತೀಚೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು, ಜಮ್ಮು - ಕಾಶ್ಮೀರ ರಾಜ್ಯದ ಶಾಸಕರೂ ಆದ ಯೂಸಫ್ ತರಿಗಾಮಿ ಕರ್ನಾಟಕಕ್ಕೆ ಬಂದಿದ್ದರು. ಮೈಸೂರಿನಲ್ಲಿ ಕಾಶ್ಮೀರ ಸಮಸ್ಯೆ ಪರಿಹಾರದ ಕುರಿತು ಮಾಧ್ಯಮಗೋಷ್ಠಿಯಲ್ಲಿ ಆಡಿದ ಮಾತುಗಳಿವು.

ಭಾರತ ಹಾಗೂ ಪಾಕಿಸ್ತಾನದ ನಡುವೆ ಇರುವ ಸಮಸ್ಯೆ ಮಾತುಕತೆಯಿಂದ ಮಾತ್ರ ಬಗೆಹರಿಸಬಹುದು ಇದು ಜಮ್ಮುಕಾಶ್ಮೀರದ ಶಾಸಕ ಮತ್ತು ಸಿಪಿಐ(ಎಂ) ನಾಯಕ ಯೂಸಫ್ ತಾರಿಗಾಮಿಯವರ ಸ್ಪಷ್ಟ ಅಭಿಪ್ರಾಯ.

ಮೈಸೂರಿನಲ್ಲಿ ಫೆಬ್ರವರಿ 5, 2011 ರಂದು ಮಾಧ್ಯಮದ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು. ಕಾಶ್ಮೀರದ ಸಮಸ್ಯೆಯಿಂದಾಗಿ ಆ ಭಾಗದ ಜನತೆಗೆ ಅಭದ್ರತೆಯ ಭಾವನೆ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಉಭಯ ರಾಷ್ಟ್ರಗಳು ಶಾಂತಿ ಮಾತುಕತೆ ಮಾಡುವ ಮೂಲಕ ಆ ಭಾಗದ ಜನರಲ್ಲಿ ನಿರ್ಭಯ ವಾತಾವರಣ ಕಲ್ಪಿಸಬೇಕು ಎಂದು ಅವರು ಸೂಚಿಸಿದರು.

ಭಾರತ ಮತ್ತು ಪಾಕಿಸ್ತಾನ ನಡುವಣ ಭಿನ್ನಾಭಿಪ್ರಾಯವು ಕೇವಲ ಮಾತುಕತೆಯಿಂದ ಮಾತ್ರ ಫಲಪ್ರದವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರವು ಸಂಸತ್ ಸದಸ್ಯರ ವಿಶೇಷ ಸಮಿತಿಯೊಂದನ್ನು ರಚಿಸಬೇಕು. ಸಮಿತಿಯು ಆ ಭಾಗದ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸರಿಯಾದ ನಿಲುವು ತೆಗೆದುಕೊಳ್ಳಬೇಕು ಎಂದೂ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಕಾಶ್ಮೀರದ ಕಣಿವೆಗಳಲ್ಲಿ ನಿರಂತರ ರಕ್ತಪಾತ ನಡೆಯುತ್ತಿದೆ. ಇದರಿಂದ ಜನತೆ ರೋಸಿ ಹೋಗಿದ್ದಾರೆ. ಕಾಶ್ಮೀರದ ಕಣಿವೆ ಜನತೆಗೆ ದಿಕ್ಕು ಕಾಣದಂತಾಗಿದೆ. ಒಂದೆಡೆ ಸೇನಾಧಿಕಾರದ ಹಿಂಸೆಯಿಂದ ಮತ್ತೊಂದೆಡೆ ಭಯೋತ್ಪಾದಕರ ಹಿಂಸೆಯಿಂದ ಜನತೆ ನರಳುತ್ತಿದ್ದಾರೆ. ಭಯೋತ್ಪಾದಕರ ದಾಳಿ ತಪ್ಪಿದರೂ ಸೇನಾಧಿಕಾರಿಗಳ ಹಿಂಸೆ ತಪ್ಪುವುದಿಲ್ಲ ಎಂದು ತರಿಗಾಮಿ ವಿಷಾದಿಸಿದರು.

ಭಯೋತ್ಪಾದಕರ ಉಪಟಳ ಇಲ್ಲದ ಪ್ರದೇಶಗಳನ್ನು ಶೂನ್ಯ ಮತ್ತು ಶಾಂತಿ ಪ್ರದೇಶ ಎಂದು ಘೋಷಣೆ ಮಾಡಬೇಕು. ಆ ಪ್ರದೇಶದಲ್ಲಿ ಸೇನಾಧಿಕಾರಿಗಳ ಬದಲು ಪೊಲೀಸ್ ವ್ಯವಸ್ಥೆ ಸ್ಥಾಪನೆ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟರು. ಸಿಪಿಎಂ ಮೈಸೂರು ಜಿಲ್ಲಾ ಕಾರ್ಯದರ್ಶಿ ಜಗನ್ನಾಥ್ ಉಪಸ್ಥಿತರಿದ್ದರು.

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1. Place of Publication	:	# 12, 18th Cross, S.R.Nagar, Bangalore -560 027 (Karnataka)
2. Periodicity of Publication	:	Weekly
3. Printer's Name	:	G.N.Nagaraj
(Whether Citizen of India? If Foreigner, State the Country of Origin)	:	Indian
4. Address	:	# 12, 18th Cross, S.R.Nagar, Bangalore -560 027, (Karnataka)
5. Editor's Name	:	S.Y. Gurushanth
(Whether Citizen of India? If Foreigner, State the Country of Origin)	:	Indian
Address	:	# 12, 18th Cross, S.R.Nagar, Bangalore -560 027, (Karnataka)
6. Name and address of Individuals who own the Newspaper and partners or Shareholders holding more than one percent of the Notal capital :		Communist Party of India(Marxist) Karnataka State Committee, # 12, 18th Cross, S.R.Nagar, Bangalore -560 027, (Karnataka)

I G.N. Nagaraj, hereby declare that the particulars given above are true to the best of my knowledge and belief.

Date : February 27, 2011
Bangalore

Sd/-
G.N.Nagaraj
Publisher

ಜನಶಕ್ತಿ
ಕನ್ನಡ ವಾರಪತ್ರಿಕೆ

ಸ್ಪಷ್ಟಗೊಂಡ ತೃಣಮೂಲಿಗಳ ನಂಟು....

ಪುಟ 11 ರಿಂದ

ಇದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ ಬಂಧಿಸಲ್ಪಟ್ಟ ಮಾವೋವಾದಿ ನಾಯಕರೂ ಇಂಥದ್ದೇ ಹೇಳಿಕೆಯ ಜೊತೆ ಹಲವು ಸ್ಫೋಟಕ ಮಾಹಿತಿಗಳನ್ನು ತೆರೆದಿಟ್ಟಿದ್ದಾರೆ. ಅದರಲ್ಲೂ ಮುಖ್ಯವಾಗಿ ತೃಣಮೂಲ ಕಾಂಗ್ರೆಸ್‌ನ ಸಂಸದ ಸುಭೇಂದು ಅಧಿಕಾರಿ ಮಿಡ್ನಾಪುರದ ತಮ್ಲೂಕ್‌ನಲ್ಲಿ ಮಾವೋವಾದಿ ನಾಯಕರ ಜೊತೆ ಯಾವ ರೀತಿಯ ನಿಕಟ ನಂಟು ಹಾಗೂ ನಿರಂತರ ಸಂಪರ್ಕ ಇಟ್ಟುಕೊಂಡಿದ್ದರು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಸುಭೇಂದು ಅಧಿಕಾರಿ ಮಾವೋವಾದಿಗಳ ನಂಬಿಕಸ್ಥ ನಾಯಕನಾಗಿದ್ದ. ಆತನ ಬಗ್ಗೆ ಮಾವೋವಾದಿಗಳಿಗೆ ಅಪಾರ ನಂಬಿಕೆ ಎಷ್ಟಿತ್ತೆಂದರೆ, ತಮ್ಮ ಶಸ್ತ್ರಾಸ್ತ್ರ ಮತ್ತು ಹಣವನ್ನು ತೃಣಮೂಲಿಗಳು ಲೂಟಿ ಮಾಡಿದ್ದಾರೆ ಎಂಬ ದೂರನ್ನು ಸುಭೇಂದು ಅಧಿಕಾರಿಗೆ ಸಲ್ಲಿಸಲಾಗುತ್ತಿತ್ತು.

ಜ್ಯೋತಿ ಬಸು ಕೇಂದ್ರ

ಜ್ಯೋತಿ ಬಸು ಅವರ ಮರಣದ ಮೊದಲ ವರ್ಷದ ಸಂದರ್ಭದಲ್ಲಿ ಅವರ ಕೊಡುಗೆ ನೆನಪಿಸಿಕೊಳ್ಳುವುದನ್ನು ಪಶ್ಚಿಮ ಬಂಗಾಳದಲ್ಲಿ ವಿನೂತನವಾಗಿ ಆಚರಿಸಲಾಯಿತು. 'ಜ್ಯೋತಿ ಬಸು ಸಾಮಾಜಿಕ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ಗಾಗಿ ಸಾರ್ವಜನಿಕ ನಿಧಿ ಸಂಗ್ರಹ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಜ್ಯೋತಿ ಬಸು ಅವರ ಕುರಿತಾದ ಲೇಖನಗಳು ಮತ್ತು ಬರಹಗಳ ಸಂಗ್ರಹವನ್ನು ದಾಖಲಿಸುವ ಕೇಂದ್ರವನ್ನು ಸ್ಥಾಪಿಸಲು ಸಿಪಿಐ(ಎಂ) ನಿರ್ಧರಿಸಿತ್ತು. ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಕುರಿತ ಸಂಶೋಧನೆ ಚಟುವಟಿಕೆಯನ್ನೂ ಈ ಕೇಂದ್ರ ಕೈಗೆತ್ತಿಕೊಳ್ಳಲಿದೆ. ಈ ಕೇಂದ್ರ ಜ್ಯೋತಿ ಬಸು ನಗರ(ನವನಗರ)ದಲ್ಲಿ ಸ್ಥಾಪನೆಗೊಳ್ಳಲಿದೆ.

ಫಾರ್ವರ್ಡ್ ಬ್ಲಾಕ್‌ನ ಹಿರಿಯ ನಾಯಕ ಅಶೋಕ್ ಘೋಷ್ ಈ ಕೇಂದ್ರಕ್ಕೆ ವೈಯಕ್ತಿಕವಾಗಿ 10 ಸಾವಿರ ಹಾಗೂ ತಮ್ಮ ಪಕ್ಷದಿಂದ ಒಂದು ಲಕ್ಷ ರೂಪಾಯಿಗಳ ಕೊಡುಗೆಯನ್ನು ನೀಡಿದ್ದಾರೆ. ಸಿವೂರಿ, ಬೀರ್‌ಭೂಮಿ ಮುಂತಾದೆಡೆ, ಪ್ರಮುಖ ಬೀದಿಗಳಲ್ಲಿ ಬಿಮನ್ ಬಸು ನೇತೃತ್ವದ ತಂಡ ಸಾರ್ವಜನಿಕರೆಡೆ ತೆರಳಿ ಈ ಕೇಂದ್ರಕ್ಕೆ ನಿಧಿ ಸಂಗ್ರಹಿಸಿತು. ನಿಧಿ ಸಂಗ್ರಹದ ಭಾಗವಾಗಿ ತೆರಳಿದ್ದ ಪಕ್ಷದ ಕಾರ್ಯದರ್ಶಿ ಪ್ರಕಾಶ್ ಕಾರಟ್‌ಗೆ ದುರ್ಗಾಪುರದ ಉಕ್ಕಿನ ಕಾರ್ಖಾನೆಯ ಕಾರ್ಮಿಕರು 10 ಸಾವಿರ ರೂಪಾಯಿ ಹಸ್ತಾಂತರಿಸಿದರು. 10 ದಿನದ ನಿಧಿ ಸಂಗ್ರಹ ಕಾರ್ಯಕ್ರಮದ ಭಾಗವಾಗಿ ನಡೆದ ಮೊದಲ ದಿನದ ಕಾರ್ಯಕ್ರಮ ಇದಾಗಿತ್ತು.

ಲಾಲ್‌ಗಢದಲ್ಲಿ ಸರ್ಕಾರಿ ಭೂಮಿ ಹಂಚಿಕೆ

ಪಶ್ಚಿಮ ಮಿಡ್ನಾಪುರದಲ್ಲಿ ಟಿಎಂಸಿ- ಮಾವೋವಾದಿಗಳು ಹಿಂಸಾಚಾರವನ್ನು ಮುಂದುವರಿಸಿರುವಂತೆಯೇ ಜನವರಿ 17ರಂದು ಲಾಲ್‌ಗಢದಲ್ಲಿ ಉತ್ಸವದ ವಾತಾವರಣ ನಿರ್ಮಾಣಗೊಂಡಿತ್ತು. ಸುಮಾರು ಎರಡೂವರೆ ವರ್ಷಗಳ ಬಳಿಕ ಸರ್ಕಾರಿ ಭೂಮಿ ಹಂಚಿಕೆ ಕಾರ್ಯ ಪುನಾರಂಭಗೊಂಡಿತ್ತು. ಈ ಬಾರಿ 116 ಕುಟುಂಬಗಳಿಗೆ ಭೂಮಿಯ ಭಾಗ್ಯ ಒದಗಿಬಂದಿತ್ತು. ಇನ್ನೊಂದು ಭಾಗದಲ್ಲಿ ನಕ್ಸಲೀಯರ ಭೀತಿ ಇನ್ನೂ ತಾಂಡವವಾಡುತಿತ್ತು. ಮಾವೋವಾದಿಗಳ ಹಿಂಸಾಚಾರದ ಭೀತಿಯಲ್ಲಿ ಪಂಚಾಯತ್‌ನ ವೀಣಾಪುರ ಬ್ಲಾಕ್ ಸಂಪೂರ್ಣ ಬಂದ್ ಆಗಿತ್ತು. ಭೂ ಹಂಚಿಕೆ ಬಾರಿ ದೊಡ್ಡ ಪ್ರಮಾಣದ್ದೇನು ಆಗಿರಲಿಲ್ಲ. ಆದರೂ, ಉತ್ತಮ ಸಂಖ್ಯೆಯ ಜನ ಹಾಜರಿದ್ದರು. ಭೂಸುಧಾರಣಾ ಸಚಿವ ಅಬ್ದುಲ್ ರಜಾಕ್ ಮುಲ್ಲಾ ಮತ್ತು ಪಶ್ಚಿಮ ಜಿಲ್ಲೆಗಳ ಅಭಿವೃದ್ಧಿಯ ಉಸ್ತುವಾರಿ ಹೊತ್ತ ಸಚಿವ ಸುಶಾಂತ್ ಘೋಷ್ ಸರ್ಕಾರದ ಸವಲತ್ತುಗಳನ್ನು ವಿತರಿಸಿದರು. ಇನ್ನೂ 300 ಎಕರೆ ಭೂಮಿಯನ್ನು ಶೀಘ್ರದಲ್ಲೇ ನೀಡುವ ಭರವಸೆಯನ್ನು ನೀಡಲಾಯಿತು. ಇದೇ ಸಮಾರಂಭದಲ್ಲಿ 384 ಬುಡಕಟ್ಟು ವಿದ್ಯಾರ್ಥಿನಿಯರಿಗೆ ಬೈಸಿಕಲ್ ವಿತರಿಸಲಾಯಿತು. ಇದೇ ವಾರ್ಡ್‌ನಲ್ಲಿ ಕಳೆದ ಎರಡು ವರ್ಷದಲ್ಲಿ ಸಿಪಿಐ (ಎಂ)ನ 71 ಕಾರ್ಯಕರ್ತರು ಮಾವೋವಾದಿ ಗಳಿಂದ ಹತರಾಗಿದ್ದನ್ನು ಸ್ಮರಿಸಬಹುದು.

ಬೃಹತ್ ರ್‍ಯಾಲಿಗಳು

24 ಪರಗಣ ಜಿಲ್ಲೆಗಳಲ್ಲಿ, ಅದು ಸಿಂಗೂರ್ ಇರಲಿ, ಗಡಿಭಾಗದ ನಗರ ಬಂಗ ಇರಲಿ, ಭಂಗರ್ ಇರಲಿ ಎಲ್ಲೆಲ್ಲೂ ರ್‍ಯಾಲಿಗಳ ಭರಾಟೆ. ಸಿಪಿಐ(ಎಂ) ನೇತೃತ್ವದ ಬೃಹತ್ ರ್‍ಯಾಲಿಗಳಿಗೆ ಜನಸಾಗರವೇ ಹರಿದು ಬರುತ್ತಿರುವುದು ಗಮನಾರ್ಹ. ಸಿಂಗೂರ್‌ನಲ್ಲಂತೂ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ, ಸಿಪಿಎಂ ರಾಜ್ಯ ಕಾರ್ಯದರ್ಶಿ ಬಿಮನ್ ಬಸು ನೇತೃತ್ವದಲ್ಲಿ ರ್‍ಯಾಲಿಯಲ್ಲಿ ಲಕ್ಷೋಪಲಕ್ಷ ಮಂದಿ ಭಾಗವಹಿಸಿದ್ದು ಸ್ಮರಣೀಯ. ದಶಕದಲ್ಲೇ ಕಂಡರಿಯದಷ್ಟು ಮಂದಿ ರ್‍ಯಾಲಿಯಲ್ಲಿ ಭಾಗವಹಿಸಿ ಸಿಪಿಐ(ಎಂ)ನ ಬೆಂಬಲಕ್ಕೆ ನಿಂತರು. ಹೌರಾದ ಧುಲಗೋರಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ರ್‍ಯಾಲಿಯಂತೂ ಕೊನೆಯಿಲ್ಲದಂತಾಯಿತು. ಮುಖ್ಯಮಂತ್ರಿ ಬುದ್ಧ ಇಲ್ಲಿ ಪ್ರಧಾನ ಭಾಷಣಕಾರರು.

ತೃಣಮೂಲ ಕಾರ್ಯಕರ್ತರು ಸೃಷ್ಟಿಸಿದ ಅರಾಜಕತೆಯ ಪರಿಸ್ಥಿತಿ ಎದುರಿಸಿದ ಭಂಗರ್‌ನಲ್ಲೂ ಸಿಪಿಐ(ಎಂ) ರ್‍ಯಾಲಿಗೆ ಅಭೂತಪೂರ್ವ ಬೆಂಬಲ ಒಲಿದುಬಂತು. ರ್‍ಯಾಲಿಯ ಮೈದಾನಕ್ಕೆ ಬರಬೇಡಿ ಅಲ್ಲಿ ಜಾಗ ಸಾಲುತ್ತಿಲ್ಲ ಎಂದು ಸಂಘಟಕರೇ ಮನವಿ ಮಾಡಬೇಕಾದ ಪರಿಸ್ಥಿತಿ ಬಂತು. ಇಲ್ಲಿ ಬಿಮನ್ ಬಸು ಪ್ರಮುಖ ಭಾಷಣಕಾರರಾಗಿ ಭಾಗವಹಿಸಿದ್ದರು. ○

.....ಕನ್ನ ಹಾಕಿದ ಶಾಸಕ

ಪುಟ 7 ರಿಂದ

ವ್ಯಾಪ್ತಿಯಲ್ಲಿ ದಾಖಲಾದದ್ದಿದೆ. ಆಗೆಲ್ಲ ಇವನ ಗಾಡ್ ಫಾದರ್ ಪಾತ್ರ ವಹಿಸಿದ್ದುದು ಕೂಡ್ಲಿಗಿ ಕ್ಷೇತ್ರದ ಮಾಜಿ ಶಾಸಕ ಸಿರಾಜುದ್ದೀನ್ ಶೇಕ್. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಾಸಕನಾಗಿದ್ದ ಶಿರಾಜ್ ಶೇಖ್‌ನ ಎಡಬಲ ಸೇವೆ ಮಾಡಿಕೊಂಡಿದ್ದ ನೇಮರಾಜ, ತನ್ನ ಪುಂಡಪಡೆ ಕುರಿಗಳ್ಳತನ, ಗುಂಡಾಗಿರಿಯಲ್ಲಿ, ಪೊಲೀಸರಿಂದ ಬಂಧಿಸಲ್ಪಟ್ಟಾಗಲೆಲ್ಲ ಪೊಲೀಸ್ ಠಾಣೆಗೆ ಫೋನಾಯಿಸಿ, 'ನಾನು ಎಂ.ಎಲ್.ಎ. ಶಿರಾಜ್ ಶೇಖ್ ಅವರ ಪಿ.ಎ. ಮಾತಾಡ್ತೀನಿ ಅವರನ್ನೆಲ್ಲಾ ಖುಲ್ಲಾ ಮಾಡ್ರಿ' ಎನ್ನುವಷ್ಟರವರೆಗೆ ಬೆಳೆದು ನಿಂತ.

ರಾಜ್ಯದಲ್ಲಿ ಬದಲಾದ ರಾಜಕೀಯ ವಿದ್ಯಮಾನದಲ್ಲಿ ಅಂದು, ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಹೆಚ್.ಡಿ.ಕುಮಾರಸ್ವಾಮಿ, ಸೋಡಚೀಟಿ ಕೊಟ್ಟು, ಬಿಜೆಪಿಯ ಯಡಿಯೂರಪ್ಪನೊಂದಿಗೆ ಕೂಡವಳಿ ಮಾಡಿಕೊಂಡ ಆ ಸಂಕ್ರಮಣ ಕಾಲದಲ್ಲಿ, ಕಾಂಗ್ರೆಸ್ ಗುಂಪುಗಾರಿಕೆಯಿಂದ ಬೇಸತ್ತ, ಇಳಿ ವಯಸ್ಸಿನಿಂದ ಹೈರಾಣಾಗಿದ್ದ, ಜಿಲ್ಲೆಯ ಕಾಂಗ್ರೆಸ್ ಬಿಳಿಯಾನೆಯೆಂದೇ ಪ್ರಸಿದ್ಧರಾಗಿದ್ದ ಎಂ.ವೈ.ಘೋರ್ಪಡೆ ರಾಜಕೀಯ ಸನ್ಯಾಸ ಸ್ವೀಕರಿಸಿ ಮೂಲೆಗುಂಪಾದರು. ಅವರ ದತ್ತು ಪುತ್ರನಂತಿದ್ದ ಅವರ ಬಲಗೈ ಬಂಟ, ಶಿರಾಜ್ ಶೇಖ್ ಅಕ್ಷರಶಃ ಅಂದು ರಾಜಕೀಯವಾಗಿ ಅನಾಥನಾಗಿದ್ದ, ಕ್ಷೇತ್ರ ಮರುವಿಂಗಡನೆಯ ಸಮಯದಲ್ಲಿ ಕೂಡ್ಲಿಗಿ ಕ್ಷೇತ್ರ ಎಸ್.ಟಿ.ಗೆ ಮೀಸಲಾದರೆ, ಹೆಚ್.ಬಿ.ಹಳ್ಳಿ ಕ್ಷೇತ್ರ ಎಸ್.ಸಿ.ಗೆ ಮೀಸಲಾಯ್ತು. ಹಾಗಾಗಿ ಹೊಸಪೇಟೆ ಕ್ಷೇತ್ರದಿಂದ ಸ್ಪರ್ಧಿಸುವ ಶಿರಾಜ್ ಶೇಖ್ ಆಕಾಂಕ್ಷೆಗೆ, ಹೊಸಪೇಟೆಯ ಅಂದಿನ ಹಾಲಿ ಶಾಸಕ ಹೆಚ್.ಆರ್.ಗವಿಯಪ್ಪ ಹಾಗೂ ಬಂಡಾಯ ಅಭ್ಯರ್ಥಿ ದೀಪಕ್ ಕುಮಾರ್‌ಸಿಂಗ್ ಅವರ ಜಿದ್ದಾಜಿದ್ದಿ ಪೈಪೋಟಿಯಲ್ಲಿ ಕ್ಯಾರೆ ಎನ್ನುವವರಿಲ್ಲವಾಯ್ತು. ಈ ಹಂತದಲ್ಲಿ ಕಾಂಗ್ರೆಸ್‌ನಲ್ಲಿ ತನಗಿನ್ನು ಭವಿಷ್ಯವಿಲ್ಲವೆಂದು ಅರಿತ ಶಿರಾಜ್ ರೆಡ್ಡಿ ಸಹೋದರರ ಪಾದಕ್ಕೆ ಶರಣಾದ. ಹೆಚ್.ಬಿ.ಹಳ್ಳಿ ಕ್ಷೇತ್ರಕ್ಕೆ ಸೂಕ್ತ ಅಭ್ಯರ್ಥಿಗಾಗಿ ಪರದಾಡುತ್ತಿದ್ದ ರೆಡ್ಡಿ ಸಹೋದರರ ಮುಂದೆ, ತನ್ನ ನಂಬಿಗೆಯ ಬಂಟ ನೇಮರಾಜ್ ನಾಯ್ಕನನ್ನು ಪ್ರಸ್ತುತಪಡಿಸಿ, 'ಇದು ತುಂಬಾ ನಂಬಿಗಸ್ತ ಪ್ರಾಣಿ, ಕಡಿ ಅಂದ್ರೆ ಕಡಿತೈತಿ ಬ್ಯಾಡಾ ಅಂದ್ರೆ ಬಿಡತೈತಿ' ಎಂದು ಪ್ರಶಂಸಿಸಿದ, ಅದೇ ಪ್ರಾಣಿಯೇ ಈಗ ಕ್ಷೇತ್ರದ ಶಾಸಕ.

ಈ ರೀತಿ ಕಳವುಮಾಡಿ ಸಿಕ್ಕಿಬಿದ್ದು ದಂಡಕಟ್ಟಿ ಬರುವುದು ನೇಮರಾಜ್ ನಾಯ್ಕನಿಗೇನೂ ಹೊಸದಲ್ಲ. ಹಿಂದೆ ಡಣಾಪುರ ಮಂಡಲ್ ಪಂಚಾಯ್ತಿ ವ್ಯಾಪ್ತಿಯ ವ್ಯಾಸನಕೆರೆ ಏತ ನೀರಾವರಿ ಕಾಲುವೆಯ ಬೃಹತ್ ಸಿಮೆಂಟ್ ಪೈಪು, ಸೈಜುಗಲ್ಲುಗಳನ್ನು ರಾತ್ರೋ ರಾತ್ರಿ ನಾಲ್ಕು ಟ್ರ್ಯಾಕ್ಟರ್‌ಗಳಲ್ಲಿ ಕದ್ದು ಮಾರಿಕೊಂಡು ತಿಂದಾಗ ಸಿಕ್ಕುಬಿದ್ದವನನ್ನು ಅಂದಿನ ಡಣಾಪುರ ಮಂಡಲ್ ಪಂಚಾಯ್ತಿ ಅಧ್ಯಕ್ಷರಾಗಿದ್ದ, ಡಣಾಪುರ ಸಂಗಪ್ಪನವರು ಪಂಚಾಯ್ತಿ ಕಛೇರಿ ಮುಂದೆ ಕಟ್ಟಿಹಾಕಿ, ಇವನಿಗಿದ್ದ ಟ್ರ್ಯಾಕ್ಟರ್ ಒಂದನ್ನು ಮಾರಿಸಿ ದಂಡ ಕಟ್ಟಿಸಿಕೊಂಡು ಬಿಡುಗಡೆ ಮಾಡಿದ್ದರು ಎಂಬ ಕಥೆಯನ್ನ ಜನ ಈ ಪ್ರಕರಣದ ಹಿನ್ನೆಲೆಯಲ್ಲಿ ಆಡಿಕೊಂಡು ನಗಾಡುತ್ತಿದ್ದಾರೆ.

ಅಂದು ಕದ್ದು ಸಿಕ್ಕುಬಿದ್ದ ಕಿರು ನೀರಾವರಿ ಸಾಮಗ್ರಿಗಳ ಕಳ್ಳ ನೇಮರಾಜ ನಾಯ್ಕ ಇಂದು ಎಂ.ಎಲ್.ಎ. ಆಗಿದ್ದರೆ, ಇವನ ಜೊತೆ ಶಾಮೀಲಾಗಿದ್ದ ಅಂದಿನ ಸಣ್ಣ ನೀರಾವರಿ ಇಲಾಖೆಯ ಜೆ.ಇ. ಆಗಿದ್ದ ಮಾರ್ಗದಯ್ಯ ಇಂದು ಬಡ್ತಿ ಪಡೆದು ಎ.ಇ.ಇ. ಆಗಿದ್ದಾನೆ. ನೇಮನಾಯ್ಕನ ಗಾಡ್ ಫಾದರ್ ಶಿರಾಜ್ ಶೇಕ್ ಕೆ.ಎಸ್.ಟಿ.ಡಿ.ಸಿ. ಅಧ್ಯಕ್ಷನಾಗಿ ಭ್ರಷ್ಟ ಬಿಜೆಪಿ ಪಾಳಯದಲ್ಲಿ ಸುಖವಾಗಿದ್ದಾನೆ. ○

ಬಿಜೆಪಿ ದರ್ಬಾರ್

ಪುಟ 12 ರಿಂದ

".....ಜೆಡಿ(ಎಸ್) ಎಂಬ ಪಕ್ಷವನ್ನೇ ನಿರ್ನಾಮ ಮಾಡುತ್ತೇನೆ.... ಆ...ವೂ... ಅಪ್ಪಮಕ್ಕಳ ರಾಜಕಾರಣದಿಂದ ಕರ್ನಾಟಕ ರಾಜ್ಯವೇ ಹಾಳಾಗಿಹೋಗಿದೆ. ಅವರಿಗೆ ತಕ್ಕ ಪಾಠ ಕಲಿಸುತ್ತೇನೆ ವೂ...ಆ..." ಅಂತ ಆಗೀಗ ಗದೆ ಎತ್ತಿ



ಗರ್ಜಿಸುತ್ತಿರುತ್ತಾರೆ.

ಇಂಥಾ ಹೊತ್ತಲ್ಲಿ ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳ ಚುನಾವಣೆ ಸಂಬಂಧ ಬಿಜೆಪಿ ಹಾಗೂ ಜೆಡಿ(ಎಸ್) ಮಧ್ಯೆ ಮೈತ್ರಿ ಏರ್ಪಟ್ಟು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಜಾತ್ಯಾತೀತ ಎಂದು ಹೇಳಿಕೊಳ್ಳುವ ಜೆಡಿ(ಎಸ್) ಪಕ್ಷವು ರಾಜ್ಯದಲ್ಲಿ ಹಲವಾರು ಕೋಮುವಾದಿ ಅವಾಂತರಗಳನ್ನು, ಹಲವು ನಿರಂತರ ಕೋಮುವಾದಿ ದಾಳಿಗಳನ್ನು ಸಂಘಟಿಸುತ್ತಿರುವ ಬಿಜೆಪಿಯೊಂದಿಗೆ ಕೈಜೋಡಿಸಿರುವುದು ಹಸಿ ಹಸಿ ಅವಕಾಶವಾದಿತನ.

ಅದೇ ರೀತಿಯಲ್ಲಿ ತನ್ನ ಮುಖಂಡರು 'ಸರ್ವನಾಶ ಮಾಡುತ್ತೇನೆ..., ಮುಗಿಸಿಯೇ ತೀರುತ್ತೇನೆ' ಎನ್ನುವ ಪಕ್ಷವೊಂದರ ಜೊತೆ ಅಧಿಕಾರದ ಚಕ್ಕಂದ ಆಡುವುದು 'ತತ್ವನಿಷ್ಠ ಪಕ್ಷ'ವಾದ ಬಿಜೆಪಿಗೂ ಹೇಸಿಗೆ ಅನಿಸಲಿಲ್ಲ. ಗರ್ಜಿಸುವ ಮುಖಂಡರೂ ಈ ಕುರಿತು ಕಮಖ್ ಕಿಮಖ್ ಅಂದಿಲ್ಲ.

ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಮೈಸೂರು ಜಿಲ್ಲಾ ಮುಖಂಡರೊಬ್ಬರು ಉದುರಿಸಿರುವ ಆಣಿಮುತ್ತೊಂದನ್ನು ಗಮನಿಸಿ. ಎಷ್ಟು ಸಾರಿ ಓದಿದರೂ... ಓದಿದಷ್ಟೂ ಖುಷಿಕೊಡುಂತಿದೆ ಅಮೂಲ್ಯ ಹೇಳಿಕೆ.

".....ಪ್ರತಿನಿತ್ಯ ನಮ್ಮನ್ನು ಬಯ್ಯುವವರೇ ಬೆಂಬಲಕ್ಕೆ ನಿಂತಾಗ ಬೇಡ ಅನ್ನುವುದು ಹೇಗೆಂದು ಹೊಂದಾಣಿಕೆಗೆ ಒಪ್ಪಿಗೆ ನೀಡಲಾಗಿದೆ......". ಈ ಬಗ್ಗೆ ಏನಾದರೂ ಹೇಳುವುದಕ್ಕೆ ಇದೆಯಾ? ಇಲ್ಲ ಅಲ್ಲವೇ. ○

JANASHAKTHI KANNADA VARA PATRIKE FEB. 27, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

17th
World Festival of
Youth & Students

ಹಲವು ತುಮುಲ-ತಳಮಳಗಳ ನಡುವೆ ದಕ್ಷಿಣ ಆಫ್ರಿಕಾ

ದಕ್ಷಿಣ ಆಫ್ರಿಕಾ... ಹೆಸರು ಕೇಳಿದ ತಕ್ಷಣ ನೆನಪಿಗೆ ಬರುವುದು ನೆಲ್ಸನ್ ಮಂಡೇಲಾ, ಅಲ್ಲಿನ ವರ್ಣಭೇದ ನೀತಿ, ಕಪ್ಪು ಜನ, ಆನಿಮಲ್ ಚಾನಲ್‌ಗಳಲ್ಲಿ ಕಂಡು ಬರುವ ದಟ್ಟಕಾಡುಗಳು, ಕಾಡುಪ್ರಾಣಿಗಳು. ಇಂತಹ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವ ನಡೆಯುತ್ತದೆ, ಅದಕ್ಕೆ ನಾನು ಪ್ರತಿನಿಧಿಯಾಗಿ ಆಯ್ಕೆಯಾಗಿದ್ದೇನೆ ಎಂದು ತಿಳಿದಾಗ ನಿಜಕ್ಕೂ ರೋಮಾಂಚನಗೊಂಡಿದ್ದೆ. ಮೊದಲ ಬಾರಿಯ ವಿದೇಶ ಪ್ರಯಾಣ, ವಿಮಾನಯಾನ, ಜಗತ್ತಿನ ಹತ್ತಾರು ರಾಷ್ಟ್ರಗಳ ಸಾಮ್ರಾಜ್ಯಶಾಹಿ ವಿರೋಧಿ ಸಂಘಟನೆಗಳ ಜೊತೆ ಬೆರೆಯುವುದು, ಕ್ಯೂಬಾ, ವಿಯೆಟ್ನಾಂ, ಪ್ಯಾಲೆಸ್ತೀನ್‌ನ ಧೀರ ಸಂಗಾತಿಗಳೊಂದಿಗೆ ಹೆಜ್ಜೆ ಹಾಕುವುದು... ಹೀಗೆ ರೋಮಾಂಚನವನ್ನು ಹೆಚ್ಚಿಸಲು ಕಾರಣಗಳು ಹಲವಿದ್ದವು.

ಕಾತರ, ನಿರೀಕ್ಷೆಗಳೊಂದಿಗೆ ಜೋಹಾನ್ಸ್‌ಬರ್ಗ್‌ನ ವಿಮಾನನಿಲ್ದಾಣದಲ್ಲಿ ಇಳಿದಾಗ ಎದುರುಗೊಂಡದ್ದು ವಿಶ್ವ ವಿದ್ಯಾರ್ಥಿ ಯುವಜನ ಉತ್ಸವದ ಸ್ವಯಂ ಸೇವಕರು. ನಮ್ಮನ್ನು ಸ್ವಾಗತಿಸಿದ ಆ ಉತ್ಸಾಹಿ ಕಪ್ಪು ಯುವಕ-ಯುವತಿಯರು. ಅವರು ನಮ್ಮನ್ನು ವಿಮಾನ ನಿಲ್ದಾಣದಿಂದ ಉತ್ಸವ ನಡೆಯುವ ತಾಣವಾದ ಸಿಟಿ ಆಫ್ ಸ್ವಾನೆಗೆ ತಲುಪಿಸಿದರು. ಅಲ್ಲಿ ನೂರಾರು ರಾಷ್ಟ್ರಗಳ ವಿದ್ಯಾರ್ಥಿ ಯುವ ಪ್ರತಿನಿಧಿಗಳು ಹೆಸರು ನೊಂದಾಯಿಸಲು ಸೇರಿದ್ದರು. ಹೀಗೆ ನಮ್ಮ ಆಫ್ರಿಕನ್ ಸಫಾರಿ ಆರಂಭವಾಯಿತು.


ಯುವಕ ಗಾಂಧಿ ಪ್ರತಿಮೆ
ಗಾಂಧಿಚೌಕ, ಜೋಹಾನ್ಸ್‌ಬರ್ಗ್

ಎಲ್ಲಿ ಬಿಳಿಯರು?

ಜಗತ್ತಿನೆಲ್ಲೆಡೆಯಿಂದ ಪ್ರತಿನಿಧಿಗಳು ಅಲ್ಲಿ ಹಾಜರಿದ್ದರೂ ನಮ್ಮ ಗಮನವನ್ನು ಸೆಳೆಯುತ್ತಿದ್ದದ್ದು ಆಫ್ರಿಕನ್ ದೇಶಗಳ ಪ್ರತಿನಿಧಿಗಳು. ಕಪ್ಪುಬಣ್ಣ, ದಪ್ಪ ದೇಹ, ಗುಂಗುರು ಕೂದಲಿನ ಆಫ್ರಿಕನ್ ಪ್ರತಿನಿಧಿಗಳಲ್ಲಿ ಕಪ್ಪು ವರ್ಣದವರನ್ನು ಬಿಟ್ಟರೆ ಬಿಳಿಯರು, ಮಿಶ್ರ ವರ್ಣೀಯರು, ಏಷ್ಯನ್ನರು ಹುಡುಕಿದರೂ ಕಾಣಿಸುತ್ತಿರಲಿಲ್ಲ. ಅಲ್ಲಲ್ಲಿ ಗುಂಪು ಗುಂಪಾಗಿ ನಿಂತಿದ್ದ ಜಿಂಬಾಬ್ವೆ, ಅಂಗೋಲಾ, ಮುಜಾಂಬಿಕ್, ದಕ್ಷಿಣ ಆಫ್ರಿಕಾ ಹೀಗೆ ಆಫ್ರಿಕನ್ ದೇಶಗಳ ಪ್ರತಿನಿಧಿಗಳು ನಮಗೆ ಅರ್ಥವಾಗದ ಭಾಷೆಯಲ್ಲಿ ಹಾಡುತ್ತಾ ಕುಣಿಯುತ್ತಿದ್ದರು. ಅವರ ಹಾಡು, ಕುಣಿತ, ವಿಚಿತ್ರ ಅನ್ನಿಸುತ್ತಿದ್ದರೂ ತಕ್ಷಣ ನಮ್ಮನ್ನು ಆಕರ್ಷಿಸಿ ಅವರೆಡೆಗೆ ಸೆಳೆಯುತ್ತಿತ್ತು. ಮರುದಿನ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿಯೂ ಮೈದಾನದ ತುಂಬ ಸೇರಿದ್ದ ಆಫ್ರಿಕನ್ ಯುವಜನರಲ್ಲಿ ಕಪ್ಪುವರ್ಣೀಯರು ಕಾಣುತ್ತಿದ್ದರೇ ಹೊರತು ಆಫ್ರಿಕನ್ ಬಿಳಿಯರು ಹುಡುಕಿದರೂ ಸಿಗುತ್ತಿರಲಿಲ್ಲ. ಇದು ನನ್ನ ಕುತೂಹಲವನ್ನು ಹೆಚ್ಚಿಸತೊಡಗಿತ್ತು. ದಶಕದ ಹಿಂದಿನವರೆಗೂ ದಕ್ಷಿಣ ಆಫ್ರಿಕಾವನ್ನು ತನ್ನ ಕುಖ್ಯಾತ ವರ್ಣಭೇದ ನೀತಿಯ ಮುಖಾಂತರ ನಿರಂಕುಶವಾಗಿ ಆಳಿದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 10ಕ್ಕಿಂತಲೂ ಹೆಚ್ಚಿದ್ದ ಬಿಳಿಯರು ಯಾಕೆ ಎಲ್ಲೂ ಕಾಣಿಸುತ್ತಿಲ್ಲ, ಶತಮಾನಗಳ ಶೋಷಣೆಯಿಂದ ಮುಕ್ತಿ ಪಡೆದ ಕರಿಯರು ಅವರನ್ನು ಸಾಮೂಹಿಕವಾಗಿ ಹೊರದಬ್ಬಿ ಬಿಟ್ಟರೇ ಎಂಬ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡತೊಡಗಿದವು.


ಮಂಡೇಲಾ ಮನೆಯಲ್ಲಿ ಲೇಖಕ
ಮುನೀರ್ ಕಾಟಿಪಳ್ಳ


ಕೋಕೋ ಕೋಲಾ ವಿರುದ್ಧ ಪ್ರತಿಭಟನಾ ನೃತ್ಯ

ಅಗೋ ಅಲ್ಲಿ

ಇಂತಹ ಪ್ರಶ್ನೆಗಳಿಗೆ ನಮ್ಮ ಪ್ರವಾಸದ ಮುಂದಿನ ದಿನಗಳು ಉತ್ತರ ಹೇಳತೊಡಗಿದವು. ಉತ್ಸವದ ಮಧ್ಯೆ ನಾವು ಆಫ್ರಿಕದ ಪ್ರಮುಖ ಸ್ಥಳಗಳಿಗೆ ಪ್ರವಾಸ ಹೊರಟಿದ್ದೆವು. ಅಂದು ನಾವು ದಕ್ಷಿಣ ಆಫ್ರಿಕಾದ ಕ್ಯಾಸಿನೋ ಮಾಲ್‌ನ್ನು ಸಂದರ್ಶಿಸಿದ್ದೆವು. ಶ್ರೀಮಂತಿಕೆಯ ಪ್ರತೀಕವಾಗಿ ಅದ್ಭುತವಾಗಿ ನಿರ್ಮಿಸಿದ್ದ ರೀತಿಯ ಒಳಾಂಗಣ ವಿನ್ಯಾಸ ಹೊಂದಿದ್ದ ಈ ಮಾಲ್ ಕ್ಯಾಸಿನೋ ಜೂಜಿಗೆ ಪ್ರಸಿದ್ಧವಾಗಿತ್ತು. ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪೆನಿಗಳ ಮಳಿಗೆಗಳನ್ನು ಹೊಂದಿದ್ದ ಅಲ್ಲಿ ಎಲ್ಲವೂ ನಮ್ಮ ಖರೀದಿಯ ಸಾಮರ್ಥ್ಯವನ್ನು ಮೀರಿತ್ತು. ಕ್ರಿಸ್‌ಮಸ್ ಮುನ್ನಾದಿನದ ವ್ಯಾಪಾರದ ಭರಾಟೆ ನಡೆಯುತ್ತಿದ್ದ ಅಲ್ಲಿ ನಾವು ಇಷ್ಟರವರೆಗೆ ಕಂಡ ಆಫ್ರಿಕಾಕ್ಕಿಂತ ಭಿನ್ನ ಆಫ್ರಿಕಾವನ್ನು ಕಾಣತೊಡಗಿದೆವು. ದಕ್ಷಿಣ ಆಫ್ರಿಕಾದ ಪ್ರತಿನಿಧಿಗಳ ಮಧ್ಯೆ, ಉದ್ಘಾಟನಾ ಸಮಾರಂಭದ ಪ್ರೇಕ್ಷಕರ ಮಧ್ಯೆ ಉತ್ಸವ ನಡೆಯುತ್ತಿದ್ದ ಕ್ಯಾಂಪಸ್‌ನ ಸುತ್ತಮುತ್ತ ಆಫ್ರಿಕಾದ ಬಿಳಿಯರನ್ನು ಹುಡುಕುತ್ತಿದ್ದ ನಾನು ಇಲ್ಲಿ ಕರಿಯರನ್ನು ಹುಡುಕತೊಡಗಿದೆ. ಶೇಕಡಾ 90ರಷ್ಟು ಬಿಳಿಯರು ಇನ್ನುಳಿದವರಲ್ಲಿ ಏಷ್ಯನ್ನರು, ವಿದೇಶಿಗರಷ್ಟೇ ಎಲ್ಲೆಡೆ ತುಂಬಿದ್ದರು. ಕರಿಯರು ಸೆಕ್ಯುರಿಟಿ ಗಾರ್ಡ್‌ಗಳ ರೂಪದಲ್ಲಿ ಅಲ್ಲಲ್ಲಿ ಮಾಲ್‌ಗಳಲ್ಲಿ ಕೆಲಸದಾಳುಗಳಾಗಿ ಕಾಣಿಸುತ್ತಿದ್ದರು. ಕರಿಯರನ್ನು ಅರಸುತ್ತಿದ್ದ ನನಗೆ ಒಂದೆರಡಾದರೂ ಕರಿಯ ಕುಟುಂಬಗಳು ನೋಡಲು ಸಿಕ್ಕಿದ್ದು ಇನ್ನೇನು ಮಾಲ್‌ನಿಂದ ವಾಪಸ್ ಹೊರಡುವಾಗಲಷ್ಟೇ. ಇದು ಬಿಳಿಯರು ಆಫ್ರಿಕಾದಲ್ಲಿ ಕಾಣಿಸುತ್ತಿಲ್ಲವಲ್ಲ, ಎಲ್ಲಿದ್ದಾರೆ? ಕರಿಯರು ಹೊರದಬ್ಬಿಬಿಟ್ಟರೇ? ಎಂಬ ಪ್ರಶ್ನೆಗಳಿಗೆ ಬಿಳಿಯರು ಮಾಲ್‌ಗಳಲ್ಲಿ ಇದ್ದಾರೆ, ದುಡ್ಡಿನ ಕೊಪ್ಪರಿಗೆಯ ಮಧ್ಯೆ ಕೂತಿದ್ದಾರೆ, ವರ್ಣಭೇದ ನೀತಿ ಕೊನೆಗೊಂಡು ರಾಜಕೀಯ ಅಧಿಕಾರ ಹಿಡಿದಿದ್ದರೂ ಕರಿಯರು ಖರೀದಿಯ ಸಾಮರ್ಥ್ಯವಿಲ್ಲದೆ ಬೀದಿಗಳಲ್ಲಿ, ಭಣಗುಡುವ ಸಾಮಾನ್ಯ ಮಾರ್ಕೆಟ್‌ಗಳಲ್ಲಿ, ಕಠಿಣ ದುಡಿಮೆಯ ಸ್ಥಳಗಳಲ್ಲಿ ಹಸಿವನ್ನು ಬೆನ್ನಿಗೆ ಕಟ್ಟಿಕೊಂಡು ಬ್ರೆಡ್‌ನ ತುಂಡಿಗಾಗಿ ಹಾತೊರೆಯುತ್ತಿದ್ದಾರೆ. ಅವರ ಹಾಡು, ಕುಣಿತಗಳು ಅದನ್ನೇ ಪ್ರತಿಧ್ವನಿಸುತ್ತಿದೆ ಎಂಬ ಸತ್ಯವನ್ನು ಅನಾವರಣಗೊಳಿಸತೊಡಗಿತು.



ಸಂದೇಹ

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ಹೇರಿದ್ದ ಬಿಳಿಯರ ದಬ್ಬಾಳಿಕೆಯ ಸಾಮ್ರಾಜ್ಯವನ್ನು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಪಾರ್ಟಿ, ಆಫ್ರಿಕನ್ ಕಮ್ಯೂನಿಸ್ಟ್ ಪಾರ್ಟಿ, ನೆಲ್ಸನ್ ಮಂಡೇಲ ನೇತೃತ್ವದಲ್ಲಿ ಜಗತ್ತಿನ ಸ್ವಾತಂತ್ರ್ಯ ಹೋರಾಟಗಳ ಇತಿಹಾಸದಲ್ಲಿ ಅಚ್ಚಳಿಯದ ದಾಖಲೆಯಾಗುವ ರೀತಿಯಲ್ಲಿ ಪುಡಿಗುಟ್ಟಿ ನೂರಾರು ವರ್ಷಗಳ ಶೋಷಣೆಯ ಸಂಕೋಲೆಯಿಂದ ಹೊರಬಂದ ದಕ್ಷಿಣ ಆಫ್ರಿಕಾದ ಕಪ್ಪುಜನ ನಿಜವಾಗಿಯೂ ಸ್ವಾತಂತ್ರ್ಯವನ್ನು ಪಡೆದಿದ್ದಾರೆಯೇ ಎಂಬ ಸಂದೇಹಗಳು ದಕ್ಷಿಣ ಆಫ್ರಿಕಾದಲ್ಲಿ ತಿರುಗಾಡುವಾಗ, ಕರಿಯ ಯುವಜನತೆಯೊಂದಿಗೆ ಮಾತನಾಡುವಾಗ ಕಾಡುತ್ತದೆ.

ನಾವು ಅಲ್ಲಿ ತಿರುಗಾಟಕ್ಕೆ ಬಳಸಿದ ವಾಹನದ ಡ್ರೈವರ್ 30 ವರ್ಷದ ಕರಿಯ ಯುವಕ. ಸ್ನೇಹಮಯಿ ವ್ಯಕ್ತಿತ್ವದ ಆತ ಮೆಕ್ಯಾನಿಕಲ್ ಡಿಪ್ಲೊಮಾ ಪದವಿ

ಪುಟ 10 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH